ಎಸ್. ಕೆ. ರಾಮಚಂದ್ರರಾವ್

ಪ್ರಾಚೀನ ಸಂಸ್ಕೃತಿ

13

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

COMPLIMENTARY COPY

ಪ್ರಾಚೀನ ಸಂಸ್ಕೃತಿ

ಎಸ್. ಕೆ. ರಾಮಚಂದ್ರ ರಾವ್

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

PRACHEENA SAMSKRITI : by Prof. S. K. Ramachandra Rao
Published by the Bangalore University, Bangalore
Pp. 132 + viii 1972

© ಬೆಂಗಳೂರು ವಿಶ್ವವಿದ್ಯಾಲಯ

ಪ್ರಕಾಶಕರು :
ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1

ಬೆಲೆ : 50 ಪೈಸೆ

ಮುದ್ರಕರು :
ಈಸ್ಟರ್ನ್ ಪ್ರೆಸ್
ಬನ್ನೇರುಘಟ್ಟ ರಸ್ತೆ
ಬೆಂಗಳೂರು 560029

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ–ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣಿತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈ ಸೇರಲೆಂದು ಈ ಕಿರು-ಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಟಿ. ಕೆ. ತುಕೋಳ್

ಸೆಪ್ಟಂಬರ್ 4, 1972 ಉಪಕುಲಪತಿ

ಲೇಖಕರ ಮಾತು

ಜಗತ್ತಿನ ಪ್ರಾಚೀನ ಸಂಸ್ಕೃತಿಗಳಲ್ಲಿ ಭಾರತ, ಈಜಿಪ್ಟ್, ಬೇಬಿಲೋನ್ ಮೊದಲಾದುವು ಮೈಲಿಗಲ್ಲುಗಳು. ಇಲ್ಲಿನ ಸಂಸ್ಕೃತಿಗಳು ತುಂಬ ಸ್ವಾರಸ್ಯವಾಗಿದ್ದುವು ಮಾತ್ರವಲ್ಲ, ಪ್ರಭಾವಶಾಲಿಗಳಾಗಿದ್ದುವು. ಇವಲ್ಲದೆ, ಕೆಲವು ಕಾಡುಜನರಲ್ಲಿಯೂ, 'ಅಸಂಸ್ಕೃತ' ರೆಂದು ಜನ ಬಗೆಯುವ ಆದಿವಾಸಿಗಳಲ್ಲಿಯೂ ಪರಿಣಾಮಕಾರಿಯಾದ ಸಂಸ್ಕೃತಿಯಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತಿದೆ. ಪುರಾತತ್ತ್ವಶಾಸ್ತ್ರ ಮತ್ತು ಮಾನವಶಾಸ್ತ್ರ ಎರಡೂ ಕಲೆತು ಮನುಷ್ಯನ ಹಿಂದಿನ ಆಚಾರ-ವ್ಯವಹಾರಗಳ ಬಗ್ಗೆ ಬೆಳಕನ್ನು ಚೆಲ್ಲುತ್ತಿವೆ. ಈ ನೆಲೆಯಲ್ಲಿ ಪ್ರಾಚೀನವೆನ್ನಬಹುದಾದ ಸಂಸ್ಕೃತಿ–ಪ್ರಕಾರಗಳನ್ನು ಕುರಿತು ಆಗಾಗ ಬರೆದ ಪ್ರಬಂಧಗಳನ್ನು ಒಂದೆಡೆ ಕೂಡಿಸಿ, ಏಕಸೂತ್ರತೆಯನ್ನು ಒದಗಿಸುವ ಪ್ರಯತ್ನ ಈ ಸಣ್ಣ ಪುಸ್ತಕದಲ್ಲಿ ನಡೆದಿದೆ. ನಮ್ಮ ವಿದ್ಯಾರ್ಥಿಗಳಿಗೆ ಪುರಾತತ್ತ್ವಶಾಸ್ತ್ರದ ಸಂವಿಧಾನ, ಸಂಶೋಧನೆ ಮತ್ತು ಸೂಚನೆಗಳನ್ನು ಸ್ಥೂಲವಾಗಿ ತಿಳಿಯಪಡಿಸುವುದು ಉದ್ದೇಶ.

ಈ ಪ್ರಯತ್ನಕ್ಕೆ ಪ್ರೇರಣೆ ಮತ್ತು ನೆರವು ಒದಗಿದುದು ಮಾನ್ಯಮಿತ್ರ ಶ್ರೀ ಕೆ. ಸಿ. ಶಿವಪ್ಪನವರಿಂದ. ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಕಟನ ವಿಭಾಗದ ಸಂಯೋಜಕರಾಗಿ ಅವರು ನಡೆಸುತ್ತಿರುವ ದೊಡ್ಡ ಕೆಲಸದಲ್ಲಿ ನನಗೊಂದು ಪಾಲನ್ನು ವಹಿಸಿಕೊಟ್ಟಿದ್ದಾರೆ; ಅದಕ್ಕಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಈಸ್ಟರ್ನ್ ಪ್ರೆಸ್ಸಿನ ಶ್ರೀ ಚಿಂತಾಮಣಿಯವರು ಮುದ್ರಣಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಧನ್ಯವಾದಕ್ಕೆ ಪಾತ್ರರಾಗಿದ್ದಾರೆ.

ಎಸ್. ಕೆ. ರಾಮಚಂದ್ರ ರಾವ್

ಪರಿವಿಡಿ

ಪುರಾತತ್ತ್ವ ಶೋಧನೆ
ಸಿಂಧೂ ಸಂಸ್ಕೃತಿ
ಪ್ರಾಚೀನ ಈಜಿಪ್ಟ್
ಮೆಸಪೊಟೇಮಿಯ
ಸಹಾರಾ ಸಂಸ್ಕೃತಿ
ಆಫ್ರಿಕದ ಪ್ರಾಚೀನ ಸಂಸ್ಕೃತಿ
ಶೀತವಲಯದ ಜನರು
ಆಸ್ಟ್ರೇಲಿಯದ ಆದಿವಾಸಿಗಳು

೧. ಪುರಾತತ್ತ್ವ ಶೋಧನೆ

ಮನುಷ್ಯ ಭೂಮಿಯ ಮೇಲೆ ಮನುಷ್ಯನಾಗಿ ಬದುಕಲು ತೊಡಗಿ ಒಂದು ಮಿಲಿಯನ್ ಚಿಲ್ಲರೆ ವರ್ಷಗಳಾದುವು. ಆದರೆ ನಮ್ಮ ಕತೆ ನಮಗೆ ಸ್ಪಷ್ಟವಾಗಿ ತಿಳಿದು ಬಂದಿರುವುದು ಸುಮಾರು ಎರಡು ಸಾವಿರ ವರ್ಷಗಳಿಂದೀಚೆಗೆ ಮಾತ್ರ; ಅದಕ್ಕೆ ಮೊದಲು ಕೆಲವಾರು ಸಾವಿರ ವರ್ಷಗಳು ನಾವು ಏನು ಮಾಡಿದೆವು, ಹೇಗೆ ಬಾಳಿದೆವು ಎನ್ನುವ ವಿವರಗಳು ಅಷ್ಟಾಗಿ ಸ್ಪಷ್ಟವಲ್ಲದಿದ್ದರೂ ಊಹಿಸಲು ಸಾಧ್ಯ; ಕೆಲವು ಸಾಕ್ಷ್ಯಗಳೂ ಉಳಿದು ಬಂದಿವೆ. ಆ ಕಾಲಕ್ಕೂ ಮೊದಲು ಮನುಷ್ಯ ಹೇಗಿದ್ದ, ಹೇಗೆ ಬದುಕಿದ ಅವನ ಸಮಸ್ಯೆಗಳೇನಿದ್ದುವು ನಮಗೆ ತಿಳಿಯದು. ಮಾನವ ಸಂಸ್ಕೃತಿಯ ಮೊದಲ ಹೆಜ್ಜೆಗಳು ಇತಿಹಾಸದ ಬಿರುಗಾಳಿಯಲ್ಲಿ ಅಳಿಸಿಹೋಗಿವೆ.

ವಾನರ ನೆಲೆಯಿಂದ ಮೇಲೆದ್ದು, ನೆಟ್ಟಗೆ ನಿಂತು ಎರಡೇ ಕಾಲುಗಳಿಂದ ನಡೆಯುತ್ತ, ಮಾತನಾಡಲು ತೊಡಗಿದ ಮನುಷ್ಯ ಇತರ ಪ್ರಾಣಿಗಳ ಕಾಟವನ್ನೂ ಪರಿಸರದ ಒತ್ತಡಗಳನ್ನೂ ಎದುರಿಸ ಬೇಕಾಯಿತು. ಗುಹೆಯಲ್ಲಿ ವಾಸ, ಕಾಡಿನಲ್ಲಿ ಬೇಟೆ, ದುಷ್ಟ ಮೃಗಗಳ ಹಾವಳಿ, ಚಳಿ–ಗಾಳಿ–ಮಳೆ–ಬಿಸಿಲುಗಳ ಆರ್ಭಟ, ಊಟ–ನಿದ್ರೆಗಳ ಏರುಪೇರು — ಹೀಗೆ ನೂರು ತೊಂದರೆಗಳು, ಸಾವಿರ ಸಮಸ್ಯೆಗಳು! ಇಷ್ಟಿದ್ದರೂ ಗಂಡು ಹೆಣ್ಣುಗಳು ಕೂಡಿ ಒಡನಾಡಿ, ಮಕ್ಕಳನ್ನು ಹೆತ್ತು, ಸಾಕಿ, ಮನುಷ್ಯ ಸಂತತಿಯನ್ನು ಮುಂದುವರೆಸಿದರು. ವಾತಾವರಣಕ್ಕೆ ಹೊಂದಿಕೊಂಡು ಉಳಿ

ಯುವ ಉದ್ದೇಶ ಮೊದಲಿಗೆ ಬಲವಾಗಿದ್ದಿತಾದರೂ ಬರುಬರುತ್ತಾ ನಿಸರ್ಗಸಿದ್ಧವಾದ ಪ್ರವೃತ್ತಿಗಳನ್ನು ಮೀರಿ ಮನುಷ್ಯನ ಸಂಕಲ್ಪ, ಬುದ್ಧಿಶಕ್ತಿ, ಸೌಂದರ್ಯಾನುಭೂತಿ, ಧರ್ಮದೃಷ್ಟಿಗಳು ಪ್ರಭಾವ ಶಾಲಿಗಳಾದುವು. ಮನೆ–ಮಠ, ಮದುವೆ–ಮರ್ಯಾದೆ, ಸರಕಾರ–ಸಹಕಾರ, ಗಳಿಕೆ–ವೆಚ್ಚ, ಓದು–ಬರಹ, ಆಟ–ಪಾಟ, ಕಲೆ–ಕೌಶಲ, ಧರ್ಮ–ನೀತಿ ಮೊದಲಾದ ವಿವರಗಳು ಕೇವಲ ಪಶುಪ್ರವೃತ್ತಿಗೇ ಸೀಮಿತವಾಗಿರದೆ ಮೇಲ್ಮೆಲೆಯಲ್ಲಿ ಬೇರೂರಿದುವು. ಮನುಷ್ಯನಿಗೆ ತಾನು ಬದುಕಬೇಕು, ತನ್ನ ಸಂತತಿ ಉಳಿಯಬೇಕು ಎಂಬ ಎರಡೂ ಕಾತರಗಳು ಎಲ್ಲ ಪ್ರಾಣಿಗಳಿಗೂ ಸಹಜವಾದುವೇ. ಆದರೆ ತಾನು ಚೆನ್ನಾಗಿ ಬದುಕಬೇಕು, ಸಂತತಿಯಲ್ಲಿ ಸಮೃದ್ಧಿ ಸಂತೋಷಗಳಿರಬೇಕು ಎನ್ನುವ ಭಾವನೆಗಳು ಮನುಷ್ಯನಿಗೆ ಮಾತ್ರ ವಿಶಿಷ್ಟವಾದುವು – ಇದು ಸಂಸ್ಕೃತಿಯ ಮೂಲ.

ಸಂಸ್ಕೃತಿ ಎನ್ನುವ ಸಂಸ್ಕೃತ ಮಾತಿಗೆ 'ಚೆನ್ನಾಗಿ, ಪರಿಷ್ಕಾರವಾಗಿ ಮಾಡುವುದು' ಎಂದೇ ಅರ್ಥ. ಮಾಡುವ ಕೆಲಸವನ್ನು ತಾತ್ಕಾಲಿಕ ಪ್ರಯೋಜನಕ್ಕೇ ಮುಗಿಸಿಬಿಡದೆ ಅದರ ಹಿಂದು–ಮುಂದು, ಆಗು–ಹೋಗುಗಳನ್ನು ಪರಿಶೀಲಿಸಿ, ಮಾಡಿದ ಕೆಲಸ ಸೊಗಸಾಗಿರಬೇಕು, ನಾಲ್ಕು ಕಾಲ ನಿಲ್ಲುವಂತಿರಬೇಕು, ಉಳಿದವರು ಮೆಚ್ಚುವಂತಿರಬೇಕು ಎನ್ನುವ ಉದ್ದೇಶ ಸಂಸ್ಕೃತಿಯಲ್ಲಿ ಮೂಲಭೂತವಾದುದು. ಹುಟ್ಟಿದ ಮಗು ದುರ್ಬಲ; ಬೇರೆಯವರ ನೆರವಿಲ್ಲದೆ ಆಸರೆಯಿಲ್ಲದೆ ಉಳಿಯಲಾರದು, ಬೆಳೆಯಲಾರದು. ಅದಕ್ಕೆಂದೇ ಮನೆ ಬೇಕು, ಸಂಸಾರ ಬೇಕು, ತಂದೆ–ತಾಯಿಯರಲ್ಲಿ ಅನುರಾಗವಿರಬೇಕು, ವಾತ್ಸಲ್ಯವಿರಬೇಕು, ಹೊಣೆಗಾರಿಕೆಯಿರಬೇಕು. ಮದುವೆಯೆಂಬ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಅಗತ್ಯಗಳು ಕೂಡಿಕೊಳ್ಳುತ್ತವೆ. ಪ್ರಾಣಿಕೋಟಿಯಲ್ಲಿ ಮನುಷ್ಯ

ತುಂಬ ದುರ್ಬಲ; ಒಂಟಿಯಾಗಿ ಭೂಮಿಯ ಮೇಲೆ ಬದುಕುವ ಸಾಮರ್ಥ್ಯ ಅವನಿಗಿರದು. ಅದಕ್ಕೆಂದೇ ಸಮಾಜ, ಸಂಘ, ಸಹಕಾರ, ಸರಕಾರ ಎಲ್ಲವೂ ಏರ್ಪಟ್ಟವು. ವ್ಯಕ್ತಿ ಹೋದರೂ,

ಚಿತ್ರ 1

ಮಾನವ ಸಂಸ್ಕೃತಿಯ ಆರಂಭದಲ್ಲೇ ಅವತರಿಸಿದ ಉಪಕರಣ

ಕೆಟ್ಟರೂ ಸಂಸಾರ ಉಳಿಯಬೇಕು, ಕೆಡಬಾರದು; ಸಂಸಾರ ಮರೆಯಾದರೂ, ಕೆಟ್ಟರೂ ಸಮಾಜ ಮುಂದುವರಿಯಬೇಕು, ಕೆಡಬಾರದು. ವ್ಯಕ್ತಿಗಿಂತ ಸಂಸಾರ ಹೆಚ್ಚು, ಸಂಸಾರಕ್ಕಿಂತ ಸಮಾಜ ಹೆಚ್ಚು. 'ತ್ಯಜೇದೇಕಂ ಕುಲಸ್ಯಾರ್ಥೇ' ಎಂದು ಮೊದಲಾಗುವ ಶ್ಲೋಕವನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು.

ಹೀಗೆ ವ್ಯಕ್ತಿ ತನ್ನ ದೈಹಿಕ ಅಗತ್ಯಗಳನ್ನು ಮೀರಿದ ಉದ್ದೇಶವನ್ನು ಮನಗಂಡಾಗ ತನ್ನ ಪ್ರವೃತ್ತಿಗಳನ್ನು ಕೆಲವೊಮ್ಮೆ ಬಿಗಿಹಿಡಿಯಬೇಕಾಗುತ್ತದೆ. ಹೆರವರ ಪ್ರಯೋಜನಕ್ಕೆ ತನ್ನ ಪ್ರಯೋಜನಗಳನ್ನು ಬಿಟ್ಟುಕೊಡಬೇಕಾಗುತ್ತದೆ. ತನ್ನ ವೃತ್ತಿ ವ್ಯವಹಾರಗಳನ್ನು ನಾಲ್ಕು ಜನರ ಹಿತದೃಷ್ಟಿಯಿಂದ ಅಳವಡಿಸಿಕೊಳ್ಳಬೇಕಾಗುತ್ತದೆ. ಇಷ್ಟು ನಡೆಯಬೇಕಾದರೆ ಮನುಷ್ಯನಿಗೆ ತನ್ನ ಬಯಕೆಗಳ ಮೇಲೆ ಹತೋಟಿಯಿರಬೇಕು; ಶರೀರಕ್ಕೆ ಸಂಬಂಧಪಟ್ಟ ಈತಿಬಾಧೆಗಳಲ್ಲೇ, ಕಾಮ-ಕೇಳಿಗಳಲ್ಲೇ ಸೀಮಿತವಾಗದ ದೂರದೃಷ್ಟಿ ಇರಬೇಕು. ಇದೇ ಸಂಸ್ಕೃತಿಯ ಸ್ವಾರಸ್ಯ. ಪ್ರಕೃತಿದತ್ತವಾದ ಪ್ರವೃತ್ತಿವ್ಯವಸ್ಥೆ. ಪರಿಸರ ವ್ಯವಸ್ಥೆಗಳನ್ನು ಮೀರಿ ವ್ಯವಸ್ಥೆಗಳನ್ನು ಮನುಷ್ಯ ತಾನೇ ಮಾಡಿಕೊಳ್ಳಬೇಕಾಗುತ್ತದೆ. ತನ್ನ ಕಾಮನೆಗಳೂ, ಬಯಕೆಗಳೂ ತೀರಲು ಅನುಕೂಲವಾದಂಥ ಪರಿಸರವನ್ನು ತನ್ನ ಕೈಯಿಂದಲೇ ಸೃಷ್ಟಿಸಿಕೊಳ್ಳುವುದು ಅಗತ್ಯವಾಗುತ್ತದೆ. ಮನೆ, ಸರಕಾರ, ಕಲೆ, ಧರ್ಮ, ಭಾಷೆ, ವಾಹನ ಇವೆಲ್ಲವೂ ಮಾನವ ನಿರ್ಮಿತವಾದುವೇ. ಮೂಲಸಾಮಗ್ರಿ ಪ್ರಕೃತಿದತ್ತವೇ ಆದರೂ ಅದರ ಅಭಿವ್ಯಕ್ತಿ, ಸಂಯೋಜನೆ, ಪುನರ್ವ್ಯವಸ್ಥೆಗಳು ಮನುಷ್ಯನ ಸಂಕಲ್ಪ ಮತ್ತು ಸಾಹಸಗಳಿಂದಾದುವು. ಈ ದೃಷ್ಟಿಯಿಂದ, ಸಂಸ್ಕೃತಿಗೆ ಇಂಗ್ಲಿಷ್‌ಪದವಾದ 'ಕಲ್ಚರ್' ಎಂಬುದಕ್ಕೆ 'ಮಾನವ ನಿರ್ಮಿತಪರಿಸರ' ಎನ್ನುವ ಅರ್ಥವಿದೆ.

ಮನುಷ್ಯ ತನ್ನ ಅನುಕೂಲಕ್ಕೆಂದು, ಅಭ್ಯುದಯಕ್ಕೆಂದು ಅಳವಡಿಸಿಕೊಳ್ಳುವ ಪರಿಸರ ವಿವರಗಳು ಒಮ್ಮೆಲೇ ಸಿದ್ಧವಾಗುವುದಿಲ್ಲ. ಆಯಾ ಪ್ರದೇಶದ ಭೌತಿಕ ಲಕ್ಷಣ, ಒಂದೊಂದು ಜನ ಸಮುದಾಯದ ಅಗತ್ಯ, ಇತಿಹಾಸದ ಅನುಭವಗಳು, ಕಾಲಕ್ರಮವಾದ ಕಲಿಕೆಗಳು ಇವೆಲ್ಲವೂ ಸಂಸ್ಕೃತಿಯ ಸಿದ್ಧತೆಯಲ್ಲಿ ಪಾಲುಗೊಳ್ಳುತ್ತವೆ. ನಮ್ಮ ಇಪ್ಪತ್ತನೆಯ ಶತಮಾನದ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಅದರ ಸಮಗ್ರ ಹಿನ್ನೆಲೆಯನ್ನು ಪರಿಶೀಲಿಸಬೇಕಾಗುತ್ತದೆ. ಹಿನ್ನೆಲೆ ಸ್ಪಷ್ಟವಾಗಿದ್ದರೆ, ಅದಕ್ಕೆ ಸಾಕ್ಷ್ಯಗಳಿದ್ದರೆ ಸರಿಯೇ. ಹೀಗಿಲ್ಲದಿದ್ದಾಗ ಮಾತ್ರ ಸಂಶೋಧನೆ, ಸಮಾಲೋಚನೆ ಮಾಡಿಯೇ ಹಿನ್ನೆಲೆಯನ್ನು ಊಹಿಸಿಕೊಳ್ಳಬೇಕು. ಇದೇ ಇತಿಹಾಸದ ಪ್ರಯೋಜನ. ಇತಿಹಾಸದ ಕೈಯನ್ನು ಬಲಪಡಿಸಲು ಪ್ರಾಚೀನ ಸಂಸ್ಕೃತಿಯ ಅಧ್ಯಯನ ನೆರವಾಗುತ್ತದೆ. ಮೊದಲಿಗೆ ಒಂದೊಂದು ದೇಶಕ್ಕೂ ಒಂದೊಂದು ವಿಶಿಷ್ಟವಾದ ಸಂಸ್ಕೃತಿಯಿರುವುದು ಸಹಜವೇ; ಅದು ಕಾಲಕಾಲಕ್ಕೆ ಮಾರ್ಪಡುವುದೂ ಸಹಜವೇ. ಹಲವಾರು ಸಂಸ್ಕೃತಿಗಳ ವಿವರಗಳು ಕಲೆಯುವುದೂ, ಸಂಸ್ಕೃತಿಗಳು ತಂತಮ್ಮ ವೈಶಿಷ್ಟ್ಯಗಳನ್ನು ಕಳೆದುಕೊಂಡು ಅವೆಲ್ಲಕ್ಕೂ ಸಾಧಾರಣವಾದ ಸಂಸ್ಕೃತಿ ವ್ಯವಸ್ಥೆ, ಪ್ರಭಾವ, ಸಾಮರ್ಥ್ಯಗಳು ಮಾತ್ರವಲ್ಲದೆ ಸಂಸ್ಕೃತಿ ಸಂಪರ್ಕ, ಸಮನ್ವಯ, ಸಂಯೋಜನೆಗಳೂ ಮುಖ್ಯವಾದ ಅಂಶಗಳು.

ಹಳೆಯ ಕಾಲದ, ಹಳೆಯ ಜನರ ಉಳಿಕೆಗಳನ್ನು ಹೊರತೆಗೆದ , ಅವುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದು ಪುರಾತತ್ತ್ವ ಶೋಧನೆಯೆನಿಸಿಕೊಳ್ಳುತ್ತದೆ. ಇತಿಹಾಸಕ್ಕೆ ಇದು ತುಂಬ ನೆರವಾಗುತ್ತದೆ. ಸಮ ಸಾಮಯಿಕವಾದ ಪ್ರಸಂಗಗಳ ಅರಿವು ಮಾತ್ರ ಆದರೆ ಜ್ಞಾನ ದೃಢವಾಗುವುದಿಲ್ಲ; ಹಿನ್ನೆಲೆಯ

ರೂಪವಾಗಿ ಹಿಂದೆ ಇದ್ದ ಎಲ್ಲ ಸಾಂಸ್ಕೃತಿಕ ನೆಲೆಗಳನ್ನು ಪರಿಚಯ ಮಾಡಿಕೊಳ್ಳುವುದಗತ್ಯ. ಈ ಶತಮಾನದಲ್ಲಿ ವಿಜ್ಞಾನಿಗಳೂ ಇತಿಹಾಸಜ್ಞರೂ ಈ ಅಗತ್ಯವನ್ನು ಮನಗಂಡು ಪುರಾತತ್ತ್ವ ಶೋಧನೆಯ ಶಾಸ್ತ್ರವನ್ನು ಕಟ್ಟಿ ನಿಲ್ಲಿಸಿದ್ದಾರೆ. ಸರಕಾರವೂ ಪುರಾತತ್ತ್ವ ವಸ್ತುಗಳ, ಕಟ್ಟಡಗಳ ಸಂರಕ್ಷಣೆಗೆ ಅನುಕೂಲವಾದ ವ್ಯವಸ್ಥೆ ಮಾಡಿದೆ; ಸಮರ್ಪಕವಾದ ಅಧ್ಯಯನಕ್ಕೆ ಕೂಡ ಎಡೆ ಮಾಡಿಕೊಟ್ಟಿದೆ.

ಒಂದು ದೃಷ್ಟಿಯಿಂದ ಪುರಾತತ್ತ್ವ ಶೋಧನೆ ಹೊಸದೇನಲ್ಲ. ಕಳ್ಳರು, ದರೋಡೆಗಾರರು ಪ್ರಾಚೀನ ಅವಶೇಷಗಳನ್ನು ಶೋಧಿಸುತ್ತಾ ಬಂದಿದ್ದಾರೆ. ಸಿರಿವಂತ ರಾಜ – ಮಹಾರಾಜರ ಸಮಾಧಿಗಳಲ್ಲಿ ಅವರ ಪಾರಲೌಕಿಕ ಸೌಕರ್ಯಕ್ಕೆಂದು ವಿಶೇಷವಾದ ಬೆಳ್ಳಿ ಬಂಗಾರ, ಪಾತ್ರೆ ಪರಿಕರಗಳನ್ನೆಲ್ಲ ಇರಿಸುವ ಪದ್ಧತಿ ಇದ್ದಿತು. ಈಜಿಪ್ಟ್ ದೇಶದ ಪಿರಮಿಡ್ಡುಗಳಲ್ಲಂತೂ ಅಪಾರವಾದ ನಿಧಿಯನ್ನು ಫೇರೋ ಚಕ್ರವರ್ತಿಯ ಶವ ಕರಂಡದ ಪಕ್ಕದಲ್ಲಿಯೇ ಇರಿಸುತ್ತಿದ್ದರು. ಸಮಾಧಿಗಳ್ಳರೆಂದೇ ಪ್ರಖ್ಯಾತರಾದ ಕಳ್ಳರಿದ್ದು, ಇವರು ಕಾಲಕಾಲಕ್ಕೆ ಇಂಥ ಸಮಾಧಿಗೃಹಗಳನ್ನು ಪತ್ತೆಮಾಡಿ, ಅವುಗಳೊಳಗೆ ನುಗ್ಗಿ, ಅಲ್ಲಿದ್ದ ನಿಧಿಯನ್ನು ದೋಚಿಕೊಳ್ಳುತ್ತಿದ್ದರು. ಇವರೂ ಪುರಾತತ್ತ್ವ ಶೋಧಕರೇ! ಆದರೆ ಕೊಳ್ಳೆಹೊಡೆಯುವುದು ಅವರ ಉದ್ದೇಶ, ಅಷ್ಟೆ.

ಸಭ್ಯರು ಕೂಡ ಹಳೆಯ ಅವಶೇಷಗಳನ್ನು ಹುಡುಕಿ, ಸಂಗ್ರಹಿಸಿ ತಮ್ಮ ಮನೆಗಳಲ್ಲಿ ಜೋಡಿಸುವ ಹವ್ಯಾಸವನು ಬೆಳೆಸಿಕೊಳ್ಳುತ್ತಿದ್ದುದು ಕಳೆದ ಶತಮಾನದಿಂದಲೂ ಕಂಡುಬಂದಿದೆ. ಇವರಿಗೆ ಸಂಪತ್ತು ಎನ್ನುವ ದೃಷ್ಟಿಯಿಲ್ಲ; ರಸಿಕತೆಯ ಲಕ್ಷಣ

ಗಳಲ್ಲಿ ಪ್ರಾಚೀನ ವಸ್ತು ಸಂಗ್ರಹವು ಒಂದು ಎಂದವರ ಕಲ್ಪನೆ. ಇವರಲ್ಲಿ ಕೆಲವರಿಗೆ ಗೀಳು ಹೆಚ್ಚಾಗಿದ್ದು ಇವರೂ ಪುರಾತತ್ತ್ವ ಶೋಧಕರಾದುದೂ ಉಂಟು.

ಆದರೆ ದಿಟವಾದ ಪುರಾತತ್ತ್ವ ಶೋಧನೆಯಲ್ಲಿ ಹೊರತೆಗೆದ ವಸ್ತುಗಳಿಗಷ್ಟೇ ಬೆಲೆಯೆನ್ನುವುದಿಲ್ಲ; ಅದರ ಮೌಲ್ಯಕ್ಕಿಂತ ಹೆಚ್ಚಾಗಿ, ಅದರ ಮೂಲಕ ಆ ಕಾಲದ ಸಂಸ್ಕೃತಿಯ ಬಗ್ಗೆ ಏನನ್ನು ಅರಿಯಬಹುದು, ಹಿಂದಿನ ಮನುಷ್ಯನ ಸಾಧನೆಗಳೇನು ಎನ್ನುವುದು ಮುಖ್ಯವಾದ ಉದ್ದೇಶ. ಶೋಧನೆಯಿಂದ ಪಡೆದ ಸಾಮಗ್ರಿಗಳು ಅಧ್ಯಯನವನ್ನು ಪ್ರಚೋದಿಸುತ್ತವೆಯೆಂದೇ ಅವುಗಳ ಬೆಲೆ. ಆ ಸಾಮಗ್ರಿಗಳು ಒಂದು ಕಾಲದ ಮನುಷ್ಯನ ಕೈಕೆಲಸ; ಅವನ್ನು ಪರಿಶೀಲಿಸಿದರೆ ಅವುಗಳ ಹಿನ್ನೆಲೆಯಲ್ಲಿದ್ದ ಪ್ರಯೋಜನ, ಅವು ಸೂಚಿಸುವ ಸಾಂಸ್ಕೃತಿಕ ವಿವರಗಳು, ಅವನ್ನು ತಯಾರಿಸಲು ಇದ್ದ ಸೌಲಭ್ಯ ಮತ್ತು ಮನೋವೃತ್ತಿಗಳು ಇವೆಲ್ಲದರ ವಿಚಾರವಾಗಿಯೂ ಅಷ್ಟಿಷ್ಟು ಬೆಳಕು ಚೆಲ್ಲಿದಂತಾಗುತ್ತದೆ.

ಸಾಮಗ್ರಿಗಳು ಹಲವಾರು ನೂರು. ಸಾವಿರ ವರ್ಷಗಳ ಹಿಂದೆ ಇದ್ದುವಾಗಿ, ಪ್ರಕೃತಿಯ ಕ್ರಿಯೆಗಳಲ್ಲಿ ನಾಶವಾಗದೆ ಉಳಿಯುವುವಾದರೆ ಅವು ಭೂಮಿಯೊಳಗೆ ಹುದುಗಿಹೋಗಿರುವುದು ಸಹಜ. ಒಂದು ಕಾಲಕ್ಕೆ ಮೇಲಿದ್ದ ಭೂಮಿಯ ಪದರ, ಕಾಲಕ್ರಮದಲ್ಲಿ ಇತರ ಪದರಗಳಿಂದ ಮುಚ್ಚಿಹೋಗುತ್ತದೆ. ಹೀಗಾಗಿ ಹೆಚ್ಚು ಪ್ರಾಚೀನವಾದ ಸಾಮಗ್ರಿಗಳು ಅವಶೇಷ ರೂಪದಲ್ಲಿ ದೊರೆಯಬೇಕಾದರೆ ಭೂಮಿಯೊಳಗೆ ಹೆಚ್ಚು ಆಳವಾಗಿ ಅಗೆಯಬೇಕು. ಹೀಗೆ ಅಗೆಯುವುದಕ್ಕೆ ಉತ್ಖನನ ಎಂದು ಹೆಸರು; ಇಂಗ್ಲೀಷಿನಲ್ಲಿ ಅದನ್ನು 'ಎಕ್ಸ್‌ಕವೇಷನ್' ಎನ್ನುತ್ತಾರೆ.

ಶೋಧನೆಯ ಸ್ಥಳ

ಭೂಮಿಯೊಳಗೆ ಪದರ ಪದರಗಳಾಗಿ ನೆಲದ ಮಟ್ಟಗಳನ್ನು ವಿಂಗಡಿಸುವುದು ಸಾಧ್ಯವಾಗುತ್ತದೆ. ಒಂದೊಂದು ಪದರವೂ ಒಂದೊಂದು ಕಾಲದ ಸಾಂಸ್ಕೃತಿಕ ನೆಲೆಯನ್ನು ನಿರ್ದೇಶಿಸುತ್ತದೆ ಎನ್ನಬಹುದು. ಒಂದೇ ಪಟ್ಟಣವು ತುಂಬ ಪ್ರಾಚೀನ ಕಾಲದಿಂದ ಇರುವುದಾದರೆ ಅದರ ಇತಿಹಾಸವನ್ನು ಹೀಗೆ ಭೂಮಿಯೊಳಗೆ ನೆಲಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಪ್ರಾಚೀನ ಅವಶೇಷ ಗಳಿರುವ ಕಡೆ ಸಣ್ಣ ಪುಟ್ಟ ದಿಬ್ಬ. ದಿಣ್ಣೆಗಳು ಮೂಡಿಕೊಳ್ಳುತ್ತವೆ. ಸೈಂಧವ ಸಂಸ್ಕೃತಿಯ ಪರಿಚಯವಾದುದು ಇಂಥ ದಿಬ್ಬ ಗಳಿಂದಲೇ.

ಯಾವ ದಿಬ್ಬದ ಅಡಿಯಲ್ಲಿ ಅವಶೇಷಗಳಿರಬಹುದೆಂದು ತಿಳಿಯುವುದು ಹೇಗೆ? ಒಮ್ಮೊಮ್ಮೆ ಅವಶೇಷಗಳಿರುವುದು ಸ್ಪಷ್ಟವಾಗಿ ಕಾಣಿಸಿಕೊಂಡುಬಿಡುತ್ತದೆ. ದಿಬ್ಬದ ಮೇಲೆ ಮಳೆನೀರು ಧಾರಾಕಾರವಾಗಿ ಬಿದ್ದು ಕೆಳಗೆ ಹರಿಯುವಾಗ ದಿಬ್ಬದ ಮೇಲಿನ ಪದರಗಳನ್ನು ಕೊಚ್ಚಿಸಿಬಿಡುತ್ತದೆ. ಆಗ ಒಳಗಿದ್ದ ಅವಶೇಷ ತಾನಾಗಿಯೇ ಮೇಲೆ ಕಾಣಿಸಿಕೊಳ್ಳುವುದುಂಟು. ಒಂದೆರಡು ಚೂರು ಪ್ರಾಚೀನ ವಸ್ತುಗಳು ದೊರೆತರೂ ಅಂಥ ಸ್ಥಳಗಳಲ್ಲಿ ವಿಶೇಷವಾದ ಅವಶೇಷಗಳಿವೆಯೆಂಬ ಸೂಚನೆ ದೊರೆಯುತ್ತದೆ.

ಕೆಲವೊಮ್ಮೆ ಮಣ್ಣಿಗಾಗಿ, ಕಲ್ಲುಗಳಿಗಾಗಿ ಅಥವಾ ಮತ್ತಾವುದಾದರೂ ದೃಷ್ಟಿಯಿಂದ ದಿಬ್ಬಗಳನ್ನು ಕಡಿದು ಮಟ್ಟಸ ಮಾಡುವ ಕೆಲಸ ನಡೆಯುತ್ತದೆ. ಹಾಗೆ ಮಾಡುವಾಗ, ಒಳಗಿರುವ ಪುರಾತತ್ತ್ವ ಸಾಮಗ್ರಿಗಳು ಕಾಣಿಸಿಕೊಳ್ಳುತ್ತವೆ. ಬಹುಮಟ್ಟಿಗೆ ಪ್ರಾಚೀನ

ನಿವೇಶನಗಳನ್ನು ಪತ್ತೆ ಮಾಡಿರುವುದು ಹೀಗೆಯೇ. ಎಂದರೆ ಆಕಸ್ಮಿಕವಾಗಿ. ಗಣಿ ಕೆಲಸಕ್ಕೆಂದು ಭೂಮಿಯನ್ನು ಅಗೆಯುವುದು, ರೈಲು ದಾರಿಯನ್ನು ಸಿದ್ಧ ಪಡಿಸುವುದು, ಮನೆ ಕಟ್ಟಲು ತಳಪಾಯಕ್ಕೆ ನೆಲವನ್ನು ಸಿದ್ಧಪಡಿಸುವುದು ಇಂಥ ಕೆಲಸಗಳಿಂದ ಪ್ರಾಚೀನ ಅವಶೇಷಗಳಿರುವ ನಿವೇಶನಗಳು ಎಷ್ಟೋ ಬಯಲಾಗಿವೆ.

ಉದ್ದೇಶಪಟ್ಟು ನಿವೇಶನಗಳನ್ನು ಗುರುತಿಸುವಾಗ ಹಲವಾರು ಆಧುನಿಕ ವ್ಯವಧಾನಗಳನ್ನು ಬಳಸುವುದು ಈಚೆಗೆ ವಾಡಿಕೆಯಲ್ಲಿದೆ. ಮೊನಚಾದ ಕೆಲವು ಆಯುಧಗಳನ್ನು ಭೂಮಿಯೊಳಗೆ ಚುಚ್ಚಿದಾಗ ಒಳಗಿರಬಹುದಾದ ಗೋಡೆ, ಮನೆ, ಪಾತ್ರೆ ಸೂಚನೆ ಕೊಡುತ್ತವೆ. ನೆಲದ ಮೇಲೆ ಸುತ್ತಿಗೆಯಿಂದ ಬಡಿದಾಗ ಉಂಟಾಗುವ ಶಬ್ದವೂ ಗಮನಾರ್ಹವಾದುದು. ವಿಶೇಷವಾದ ಅನುಭವವಿರುವ ತಜ್ಞರಿಗೆ ಇದರಿಂದ ದೊರಕುವ ಸೂಚನೆ ಮಹತ್ತ್ವದ್ದು. ಲೋಹದ ಪಾತ್ರೆ, ನಾಣ್ಯ, ಆಯುಧ ಮೊದಲಾದುವುಗಳು ಭೂಮಿಯೊಳಗೆ ಅಡಗಿರುವುದನ್ನು ಕೆಲವು ವಿದ್ಯುತ್ ವಿಧಾನಗಳು ಕಂಡುಹಿಡಿಯುತ್ತವೆ.

ಹಲವಾರು ಪ್ರಾಚೀನ ಗ್ರಂಥಗಳೂ ಶೋಧನೆಗೆ ನೆರವಾಗುತ್ತವೆ. ಗ್ರೀಕರ ಪುರಾಣಗಳಾದ ಇಲಿಯಡ್, ಒಡಿಸ್ಸಿಗಳಿಂದ ಟ್ರಾಯ್ ನಗರದ ಬಗ್ಗೆ ಕುತೂಹಲ ಮಾತ್ರವಲ್ಲ, ಉಪಯುಕ್ತ ವಿವರಗಳೂ ದೊರೆತವು. ಹೀಗೆಯೇ ಮೈಸನಿ, ಬೆಬಿಲೋನ್, ಮಧ್ಯಪ್ರಾಚ್ಯದ ಹಲವಾರು ಅವಶೇಷ ನಿವೇಶನಗಳು ಬೆಳಕಿಗೆ ಬಂದವು. ನಮ್ಮ ಪುರಾಣಗಳಲ್ಲಿಯೂ ರಾಮಾಯಣ, ಮಹಾಭಾರತಗಳಲ್ಲಿಯೂ, ಇತರ ಗ್ರಂಥಗಳಲ್ಲಿಯೂ ಭಾರತ ದೇಶದ ಪ್ರಾಚೀನ ಸಂಸ್ಕೃತಿಗೆ ಸಂಬಂಧಿಸಿದ ಸ್ಥಳಗಳ ಸೂಚನೆಯಿದೆ.

ಸಲಕರಣೆಗಳು

ಕೆಲವು ಸ್ಥಳಗಳು ದುರ್ಗಮವಾಗಿರುತ್ತವೆ: ಅವಿರುವುದು ತಟ್ಟನೆ ಅರಿವಿಗೆ ಬರುವುದೇ ಇಲ್ಲ. ಅಜಂತಾ ಗುಹಾಂತರ್ದೇವಾಲಯ ಗಳಿದ್ದ ಸ್ಥಳ ಹೀಗೆಯೇ ಇದ್ದಿತು. ಸಾಹಸಿಯಾದ ಸೈನಿಕನೊಬ್ಬ ಅದನ್ನು ಆಕಸ್ಮಿಕವಾಗಿ ಗುರುತಿಸಿದ. ಹೀಗೆ ಆಕಸ್ಮಿಕವನ್ನೇ ಅವಲಂಬಿಸದೆ, ದುರ್ಗಮವಾದ ದುರ್ದರ್ಶವಾದ ಸ್ಥಳಗಳನ್ನು ಪತ್ತೆ ಮಾಡಲು ಈಚೆಗೆ "ಏರಿಯಲ್ ಫೋಟೋಗ್ರಫಿ" ಸಂವಿಧಾನವನ್ನು ಬಳಸುತ್ತಾರೆ. ವಿಮಾನದಿಂದ ಛಾಯಾಚಿತ್ರ ಗಳನ್ನು ತೆಗೆಯುವ ಈ ಪದ್ಧತಿಯಲ್ಲಿ ಅನೇಕ ಸ್ವಾರಸ್ಯವಾದ ಐತಿಹಾಸಿಕ ಸ್ಥಳಗಳು ಬೆಳಕಿಗೆ ಬಂದಿವೆ. ನಮ್ಮ ದಶಕದಲ್ಲಿ ಯಂತೂ ಇದರ ಬಳಕೆ ವಿಶೇಷವಾಗಿದೆ.

ಪುರಾತತ್ತ್ವ ಶೋಧನೆ ಈಗ ಒಂದು ಶಾಸ್ತ್ರವಾಗಿ ಪರಿಣಮಿಸಿದೆ ಯಷ್ಟೆ. ಅದಕ್ಕೆ ಶಾಸ್ತ್ರಮರ್ಯಾದೆಯ ದೃಷ್ಟಿಯಿಂದ ಮಾಪನ ಸಂವಿಧಾನ, ಉಪಕರಣಗಳ ವೈಶಿಷ್ಟ್ಯ, ಅನುಮಾನ, ತರ್ಕಗಳು ಎಲ್ಲವೂ ಇವೆ. ಉತ್ಖನನ ಮಾಡುವಾಗ ಅವಶೇಷಗಳನ್ನು ಹಾಳು ಮಾಡದಂತೆ ತೆಗೆಯಬೇಕಾದುದಗತ್ಯವೆಂದು ಬೇರೆ ಹೇಳಬೇಕೆ? ಸಾಮಗ್ರಿಗಳು ದೊರೆತ ಸ್ಥಳಗಳನ್ನೂ ಕರಾರುವಾಕ್ಕಾಗಿ ನಿರ್ದೇಶನ ಮಾಡಬೇಕಾಗುತ್ತದೆ. ವರ್ಣನೆಗೆ ಮಾತ್ರವಲ್ಲ. ಮುಂದಿನ ಶೋಧ ನೆಗಳಿಗೂ ಇದು ನೆರವಾಗುತ್ತದೆ. ಇದಕ್ಕಾಗಿ ನಾಜೂಕಾದ, ಅಗತ್ಯವಾದ ಸಲಕರಣೆಗಳನ್ನು ಸರಿಯಾದ ರೀತಿಯಲ್ಲಿ ಬಳಸಬೇಕು.

ಸಾಮಾನ್ಯವಾಗಿ ಭೂಮಿ ಅಗೆಯುವಾಗ ಎಲ್ಲರೂ ಬಳಸುವ ಗುದ್ದಲಿ, ಹಾರೆ, ಪಿಕಾಸಿ, ಮೊರ, ಗಾಡಿ ಮೊದಲಾದುವು ಇಲ್ಲಿಯೂ ಬೇಕು. ಜೊತೆಗೆ ಸಿವಿಲ್ ಎಂಜನಿಯರುಗಳೂ, ಸರ್ವೇಯರ್ ಗಳೂ ಬಳಸುವ ಕೆಲವು ವಿಶಿಷ್ಟ ಉಪಕರಣಗಳೂ ಬೇಕಾಗುತ್ತವೆ.

ಥಿಯೋಡೋಲೈಟ್, ಪ್ರಿಸ್ಮಾಟಿಕ್ ಕಂಪಾಸ್. ಮಟ್ಟಗೋಲು, ತೂಗುಗುಂಡು, ಪ್ಲೇನ್ ಟೇಬಲ್, ಅಳೆಯುವ ಪಟ್ಟಿ ಮೊದಲಾದುವು ಮುಖ್ಯವಾದ ಉಪಕರಣಗಳು. ಉತ್ಖನನವೂ ಒಂದುಬಗೆಯ ಸರ್ವೇಕ್ಷಣವೆ.

ಪದರ ವಿನ್ಯಾಸ ವಿಧಾನ

ಮೊದಮೊದಲು ಪುರಾತತ್ತ್ವಶೋಧನೆಯಲ್ಲಿ ಬೆಂಚ್ ಲೆವಲ್ ಎಂಬ ಮಟ್ಟ ವಿಧಾನ ಬಳಕೆಯಲ್ಲಿದ್ದಿತು. ಇದಕ್ಕೆ ಸಮುದ್ರ ಮಟ್ಟವೇ ಆಧಾರ. ಶೋಧನನಿವೇಶನದಲ್ಲಿ ಯಾವುದಾದರೊಂದು ನೆಲೆಯನ್ನು ಗುರುತಿಸಿಕೊಂಡು ಅದಕ್ಕೂ ಇನ್ನೊಂದು ನೆಲೆಗೂ ನಡುವೆ ದೊರೆಯುವ ಅವಶೇಷಗಳನ್ನೆಲ್ಲ ಒಂದು ಯುಗಕ್ಕೆ ಅಥವಾ ಕಾಲಮಾನಕ್ಕೆ ಅಳವಡಿಸುವುದು ಈ ವಿಧಾನದ ಉದ್ದೇಶ. ಈ ವಿಧಾನವನ್ನೇ ಅನುಸರಿಸಿ ನಡೆಸಿದ ಉತ್ಖನನಗಳಲ್ಲಿ ಹಲವಾರು ತಪ್ಪುಗಳು ತಲೆದೋರಿದುವು. ಇದನ್ನು ಕಂಡುಕೊಂಡು ಪುರಾತತ್ತ್ವಜ್ಞರು ಈ ವಿಧಾನವನ್ನು ಬಿಟ್ಟು ಪದರ ವಿನ್ಯಾಸ ವಿಧಾನವನ್ನು ಅನುಸರಿಸಲಾರಂಭಿಸಿದರು.

ಪದರವಿನ್ಯಾಸ ಸಾಂಸ್ಕೃತಿಕಯುಗಗಳನ್ನು ಅವಲಂಬಿಸಿದ್ದು. ಒಂದು ಪ್ರದೇಶದಲ್ಲಿ ಒಂದು ಸಂಸ್ಕೃತಿ ಹರಡಿದ್ದು, ಕಾಲಾಂತರದಲ್ಲಿ ಕಾರಣಾಂತರಗಳಿಂದ ಆ ಸಂಸ್ಕೃತಿಯು ನಷ್ಟವಾಗಿ, ಅದರ ವಿವರಗಳೆಲ್ಲ ನೆಲಸಮವಾಗುತ್ತವೆ. ಅದರ ಮೇಲೆ ಮಣ್ಣು ಮುಚ್ಚಿಕೊಂಡು ಕುರುಹುಗಳು ಕಾಣದಂತೆ ಆಗಿಬಿಡುತ್ತದೆ. ಆದರೆ ಅದೇ ಸ್ಥಳದಲ್ಲಿ ಮತ್ತೊಂದು ಸಂಸ್ಕೃತಿ ಮುಂದಿನ ಕಾಲದಲ್ಲಿ ತಲೆದೋರಿದರೆ, ಕಾಲಾಂತರದಲ್ಲಿ ಈ ಸಂಸ್ಕೃತಿಯೂ ನಷ್ಟವಾಗಿ ವಿವರಗಳು ಮಣ್ಣುಪಾಲಾದರೆ, ಈ ಸಂಸ್ಕೃತಿಯ ಅವಶೇಷಗಳು

ಮೊದಲಿನ ಸಂಸ್ಕೃತಿಯ ಅವಶೇಷಗಳಿಗಿಂತ ಮೇಲಿನ ಪದರಗಳಲ್ಲಿ ಅಡಗಿಕೊಳ್ಳುವುದು ಸಹಜ.

ಹೀಗೆ ಜಗತ್ತಿನಲ್ಲಿ ರೋಮ್, ದೆಹಲಿ, ವಾರಣಾಸಿ ಮೊದಲಾದ ಮಹಾನಗರಗಳು ಮತ್ತೆ ಮತ್ತೆ ಮಣ್ಣು ಪಾಲಾಗಿ ಮತ್ತೆ ಮತ್ತೆ ತಲೆಯೆತ್ತಿಕೊಂಡುವು. ಒಂದೇ ಸ್ಥಳದಲ್ಲಿ ಏಳೆಂಟುಬಾರಿ ಪಟ್ಟಣಗಳು ಕಾಲಕ್ರಮದಲ್ಲಿ ಮೈದಳೆದಿರುವ ನಿದರ್ಶನಗಳಿವೆ. ಒಂದೊಂದು ಬಾರಿ ಮೈದಳೆದು ನಷ್ಟವಾದಾಗಲೂ ಒಂದು ಪದರ ಸಿದ್ಧವಾಗುತ್ತದೆ. ಒಂದರ ಮೇಲೊಂದು ಪದರಗಳ ವಿನ್ಯಾಸ ವಿದ್ದು ಒಂದೊಂದು ಪದರದಲ್ಲಿಯೂ ಒಂದೊಂದು ಯುಗದ ಅವಶೇಷಗಳು ಕಂಡುಬರುತ್ತವೆ. ಮೇಲಿನ ಪದರ ಕಾಲದ ದೃಷ್ಟಿ ಯಿಂದ ಈಚಿನದು; ಅದಕ್ಕೆ ಕೆಳಗಿನ ಪದರ ಇದಕ್ಕೆ ಮುಂಚಿನದು. ತೀರ ಕೆಳಗಿನ ಪದರವೇ ತುಂಬ ಪ್ರಾಚೀನ; ಎಲ್ಲಕ್ಕಿಂತಲೂ ಮೇಲಿ ರುವ ಪದರವೇ ಅರ್ವಾಚೀನ.

ಪದರಗಳೆಲ್ಲ ಒಂದೇ ಗಾತ್ರದವಲ್ಲ. ಕೆಲವು ತೆಳುವಾದ ಪದರ ಗಳು, ಕೆಲವು ದಪ್ಪನಾದವು. ಇದರಿಂದ ಕಾಲದ ನಿರ್ಧರಣೆ ಸಾಧ್ಯ ವಿಲ್ಲ; ಗಾತ್ರದಿಂದ ಸಾಂಸ್ಕೃತಿಕ ನೆಲೆಯನ್ನು ನಿರ್ದೇಶಿಸಬಹುದಷ್ಟೆ. ಪದರಗಳ ಆಕಾರವೂ ವಿಭಿನ್ನವಾಗಿರುತ್ತದೆ. ಪದರಗಳಲ್ಲಿ ಪೊಟರೆ ಗಳ ಹಳ್ಳಗಳೂ ಇರುವುದುಂಟು. ದೊಡ್ಡದೊಂದು ಮರವಿದ್ದ ಕಡೆ ಅವಶೇಷಗಳು ಸಂಗ್ರಹೀತವಾದರೆ, ಉಳಿದೆಲ್ಲ ವಿವರಗಳೂ ಮಣ್ಣು ಪಾಲಾದಾಗ ಮರ ಹಾಗೆಯೇ ಉಳಿದುಕೊಳ್ಳುತ್ತದೆ. ಮುಂದೆ ಮರವೂ ಮಣ್ಣುಪಾಲಾದಾಗ ಪದರದಲ್ಲಿ ಅಷ್ಟು ಜಾಗ ಡೊಗರಾಗುತ್ತದೆ. ಒಂದು ಹಳ್ಳ ಅಥವ ಡೊಗರಿನಲ್ಲಿ ಕೆಲವಾರು ಪದರುಗಳು ಸೇರಿಕೊಳ್ಳಬಹುದು.

ಉತ್ಖನನ ಸಂವಿಧಾನ

ಪುರಾತತ್ತ್ವ ಶೋಧನೆಯಲ್ಲಿ ಉತ್ಖನನದ ಪಾತ್ರ ದೊಡ್ಡದು. ಉತ್ಖನನಗಳಲ್ಲಿ ಸ್ಥೂಲವಾಗಿ ಎರಡು ಬಗೆಗಳು — ಲಂಬಮಾನ ಮತ್ತು ಸಮತಲ ಎಂದು. ಲಂಬಮಾನ ಉತ್ಖನನವೆಂದರೆ ಭೂಮಿಯೊಳಗೆ ಉದ್ದುದ್ದವಾಗಿ ಅಗೆದು ಕಾಲಕ್ರಮದ ಪದರಗಳನ್ನು ಅಧ್ಯಯನ ಮಾಡುವುದು. ಅವಶೇಷಗಳ ನಿವೇಶನದ ವಿಸ್ತಾರ ಸಂಕುಚಿತವಾದದ್ದಾದರೆ ಲಂಬಮಾನ ಉತ್ಖನನವೇ ಸರಿಯಾದುದು; ಹಲವಾರು ನೆಲೆಗಳಲ್ಲಿ ವಿಶಿಷ್ಟ ಸಂಸ್ಕೃತಿಗಳ ಪರಿಚಯು ಆಗುತ್ತದೆ. ನಿವೇಶನ ವಿಶಾಲವಾದುದಾದರೆ ಸಮತಲ ಉತ್ಖನನ ಸರಿಯಾ ದುದು. ಒಂದೇ ಕಡೆ ಅರಮನೆ, ದೇವಾಲಯ, ಪುಷ್ಕರಣಿ ಮೊದಲಾದ ಹಲವಾರು ಕಟ್ಟಡಗಳಿದ್ದಾಗ ಇಂಥ ಉತ್ಖನನ ನೆರವಾಗುತ್ತದೆ. ಆಳವಾಗಿ ಹೋಗುವುದು ಇಂಥ ಕಡೆ ನಿರರ್ಥಕ ವೆನಿಸುತ್ತದೆ. ಸಂಸ್ಕೃತಿ ಹರಡಿಕೊಂಡಿರುವುದು ಕಾರಣ.

ಆದರೆ ಒಂದು ನಿವೇಶನದಲ್ಲಿ ಸಮತಲ ಉತ್ಖನನವೇ ಸಮರ್ಪಕವಾದುದು, ಕೆಳಗಿನ ಪದರಗಳಲ್ಲಿ ಸ್ವಾರಸ್ಯವಾದ ಅಥವಾ ಪ್ರಮುಖವಾದ ಅವಶೇಷಗಳಿಲ್ಲ ಎಂದು ನಿರ್ಧರಿಸುವ ಮೊದಲು ಲಂಬಮಾನ ಉತ್ಖನನವನ್ನು ಸ್ವಲ್ಪಮಟ್ಟಿಗೆ ಮಾಡಿನೋಡಬೇಕಾಗು ತ್ತದೆ. ಒಂದು ಸಂಸ್ಕೃತಿಯ ಪದರದ ಆಳವನ್ನೂ, ಪದರದ ಸ್ವರೂಪವನ್ನೂ ಅವಶೇಷಗಳ ಲಕ್ಷಣಗಳನ್ನೂ ಇದು ತಿಳಿಸಿಕೊಡು ತ್ತದೆ. ಆದರೆ ಇಲ್ಲಿ ಲಂಬಮಾನ ಉತ್ಖನನ ಪ್ರಾಸಂಗಿಕವಾದುದಷ್ಟೆ. ಪ್ರಾಯೋಗಿಕವಾದುದು ಎಂದು ಹೇಳಬಹುದು.

ಪುರಾತತ್ತ್ವ ಶೋಧನೆಯಲ್ಲಿ ಎಲ್ಲಕ್ಕಿಂತ ಮುಖ್ಯವಾದುದು ಸಮರ್ಪಕವಾದ ದಾಖಲೆ. ಉತ್ಖನನ ಮಾಡುವಾಗ ದೊರೆತ ಎಲ್ಲ ಸಾಮಗ್ರಿಗಳನ್ನೂ, ಚೂರು ಪಾರು ಏನನ್ನೂ ಅಲಕ್ಷ್ಯ

ಮಾಡದೆ, ಎಲ್ಲವನ್ನೂ ಅವು ದೊರೆತ ಕ್ರಮದಲ್ಲಿಯೇ ದಾಖಲೆ ಮಾಡಬೇಕು. ಯಾವ ಪದರದಲ್ಲಿ, ಯಾವ ನೆಲೆಯಲ್ಲಿ, ಎಂಥ ಕಡೆ, ಯಾವ ಸ್ಥಿತಿಯಲ್ಲಿ, ಎಷ್ಟು ಆಳದಲ್ಲಿ ಯಾವ ಅವಶೇಷ ಇದ್ದಿತು ಎನ್ನುವುದನ್ನು ಖಚಿತವಾಗಿ ದಾಖಲೆ ತಿಳಿಸಬೇಕು. ಇಂಥ ದಾಖಲೆ 'ತ್ರಿಗಾತ್ರ ದಾಖಲೆ' ಎನಿಸಿಕೊಳ್ಳುತ್ತದೆ. ಅವಶೇಷ ಅಡಗಿದ್ದ ಸ್ಥಳವು ಪೂರ್ವ ನಿರ್ದಿಷ್ಟವಾದ ಸ್ಥಳದಿಂದ ಎಲ್ಲಿದೆ ಎಂದು ಹೇಳಲು ಉದ್ದ, ಅಗಲ, ಆಳ ಮೂರೂ ಅಳತೆಗಳು ಅಗತ್ಯ.

ದಾಖಲೆಯೊಂದಿಗೆ ದೊರೆತ ಸಾಮಗ್ರಿಗಳ ಸಮಗ್ರ ವರ್ಣನೆಯೂ ಇರಬೇಕು. ನಕ್ಷೆಯೂ ತುಂಬ ಉಪಯುಕ್ತವಾಗುತ್ತದೆ. ದೊರೆತ ಅವಶೇಷಗಳನ್ನು ಪದರ ಕ್ರಮದಲ್ಲಿಯೇ ಅಚ್ಚುಕಟ್ಟಾಗಿ ಜೋಡಿಸಿ, ಇಡುವುದು ಮುಖ್ಯ; ಅವುಗಳ ಮೇಲೆ ಸಂಕೇತಗಳನ್ನು ಮೂಡಿಸಿಡಬೇಕು. ಯಾವ ಸಾಮಗ್ರಿಯೇ ಆಗಲಿ, ಅದರ ವಿವರಗಳೆಲ್ಲ ತಟ್ಟನೆ ತಿಳಿಯುವಂತೆ ವ್ಯವಸ್ಥೆಯಿರಬೇಕು. ಕೆಲವೊಮ್ಮೆ ಅವಶೇಷಗಳನ್ನು ತೊಳೆಯಬೇಕಾಗುತ್ತದೆ. ರಾಸಾಯನಿಕ ವಿಧಾನಗಳಿಂದ ಶುದ್ಧಿ ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ಅವಶೇಷಗಳು ಒಡೆದುಹೋಗದಂತೆ, ಕರಗಿ ಹೋಗದಂತೆ, ಹಾಳಾಗದಂತೆ ಜಾಗರೂಕತೆ ವಹಿಸಬೇಕು.

ಭೂಮಿಯೊಳಗೆ ಹುದುಗಿದ್ದ ಅವಶೇಷ ಗಾಳಿಯ ಸಂಪರ್ಕ ಇಲ್ಲದಿರುವುದರಿಂದ ಪೂರ್ವಸ್ಥಿತಿಯಲ್ಲಿಯೇ ಇರುವುದುಂಟು; ಅದನ್ನು ಹೊರತೆಗೆದು ಗಾಳಿಗೆ ಬಿಟ್ಟರೆ ಅದು ನಶಿಸಿ ಹೋಗಬಹುದು, ಹಾಳಾಗಬಹುದು. ಅದನ್ನು ಸರಿಯಾಗಿ ಕಾಪಾಡುವ ವ್ಯವಸ್ಥೆಯಿಲ್ಲದಿದ್ದರೆ ಅವಶೇಷವನ್ನು ಶೋಧನೆ ಮಾಡದೆ ಭೂಮಿಯೊಳಗೇ ಬಿಡುವುದು ಒಳ್ಳೆಯದು. ಸಾವಿರಾರು ವರ್ಷಗಳು ಭೂಮಿಯಲ್ಲಿ ಚೆನ್ನಾಗಿಯೇ ಇದ್ದ ಪುರಾತತ್ತ್ವ ಸಾಮಗ್ರಿಗಳು

ಹೊರತೆಗೆದ ಕೆಲವೇ ತಿಂಗಳುಗಳಲ್ಲಿ ಹಾಳಾದ ನಿದರ್ಶನಗಳಿವೆ. ಪುರಾತತ್ತ್ವ ಶೋಧನೆಯಲ್ಲಿ ಉತ್ಖನನಕ್ಕಿಂತಲೂ ಸಂರಕ್ಷಣೆಯ ಪಾತ್ರ ದೊಡ್ಡದು. ಇದಿಲ್ಲದೆ ಪುರಾತತ್ತ್ವ ಶೋಧನೆ ಆಪಾಯಕಾರಿ.

ಶೋಧನೆಯಲ್ಲಿ ದೊರೆತ ಸಾಮಗ್ರಿಗಳ ಸ್ವರೂಪವನ್ನು ಛಾಯಾಚಿತ್ರಗಳಲ್ಲಿ ಮೂಡಿಸಿಡಬೇಕಾದುದಗತ್ಯ. ಕಾರಣಾಂತರ ಗಳಿಂದ ಸಾಮಗ್ರಿಗಳು ಹಾಳಾದರೂ ಚಿತ್ರಗಳು ಅವುಗಳನ್ನು ವರ್ಣನೆಗೆ, ಪರಿಶೀಲನೆಗೆ ಉಳಿಸಿರುತ್ತವೆ. ಪದರಗಳು, ನಿವೇಶನ, ಅವಶೇಷ ಎಲ್ಲವನ್ನೂ ವರ್ಣನೆಗೆ ಅನುಕೂಲವಾಗಿ ಅಧ್ಯಯನಕ್ಕೆ ನೆರವಾಗುವಂತೆ ಛಾಯಾಚಿತ್ರ ಹಿಡಿಯಬೇಕು. ಇದೇ ಒಂದು ಕಲೆಯೆನ್ನಬಹುದು. ಛಾಯಾಚಿತ್ರಗಳಿಗೂ ದಾಖಲೆ ಇರಬೇಕು, ವಿವರಗಳ ನಿರೂಪಣೆ ಇರಬೇಕು.

ಕಡೆಯದಾಗಿ ಶೋಧನೆ ನಡೆದ ಹೊಸದರಲ್ಲಿಯೇ ಸಮಗ್ರವಾದ ವರದಿ (ರಿಪೋರ್ಟ್) ಯನ್ನು ಸಿದ್ಧಮಾಡಬೇಕಾದುದೂ ಶೋಧ ಕನ ಕರ್ತವ್ಯ. ಕಾಲ ಕಳೆದಂತೆ ಮರೆವು ಕೆಲಸಮಾಡಿ ವಿವರಗಳಲ್ಲಿ ಲೋಪದೋಷಗಳು ಒದಗಬಹುದು. ನೆನಪು ಜೀವಂತವಾಗಿದ್ದಾ ಗಲೇ ವರದಿಯನ್ನು ತಯಾರು ಮಾಡುವುದು ಸುಲಭವೂ ಹೌದು. ಶೋಧನೆಯಲ್ಲಿ ಪಾಲ್ಗೊಳ್ಳದ ಅಸಂಖ್ಯಾತಜಿಜ್ಞಾಸುಗಳು ಅವ ಲಂಬಿಸುವುದು ವರದಿಗಳನ್ನೇ. ಆದುದರಿಂದ ವರದಿ ಸಾಧ್ಯವಾ ದಷ್ಟೂ ವಿವರಣಾತ್ಮಕವಾಗಿ, ಸಮಗ್ರವಾಗಿ, ನಿರ್ದಿಷ್ಟವಾಗಿ ಇರ ಬೇಕು.

ಪುರಾತತ್ತ್ವಕ್ಕೆ ಶಾಸ್ತ್ರಶುದ್ಧಿ

ಹಳೆಯ, ಅಳಿಸಿಹೋದ ಸಂಸ್ಕೃತಿಯ ಅವಶೇಷಗಳನ್ನು ಅಧ್ಯ ಯನ ಮಾಡಿ ಆಯಾ ಸಂಸ್ಕೃತಿಗಳ ಸ್ವರೂಪ, ಪ್ರಭಾವಗಳನ್ನು

ನಿರ್ದೇಶಿಸುವುದು ಪುರಾತತ್ತ್ವದ ಕೆಲಸ. ಒಂದು ಕಾಲಕ್ಕೆ ಸಂಪನ್ನವಾಗಿ, ಸುಭದ್ರವಾಗಿ, ಮೆರೆದ ಸಂಸ್ಕೃತಿ ಕಾರಣಾಂತರಗಳಿಂದ ಯುಗಧರ್ಮ ಮಾರ್ಪಟ್ಟಂತೆ ನಶಿಸಿ ಹೋಗುತ್ತದೆ; ಹೇಳ ಹೆಸರಿಲ್ಲ ದಂತೆ ಅಳಿಸಿ ಹೋಗುತ್ತದೆ. ಅದರ ನೆನಪು ಕೆಲವು ತಲೆಮಾರಿನವರೆಗೆ ನಿಲ್ಲಬಹುದಷ್ಟೆ; ಮುಂದೆ ಅದು ಇದ್ದಿತೆನ್ನುವ ಅರಿವೂ ಜಾರಿ ಹೋಗುತ್ತದೆ. ಈ ಸಂಸ್ಕೃತಿಯು ಪ್ರಾಕೃತ ಅವಶೇಷಗಳು ಕಾಲಕ್ರಮದಲ್ಲಿ ಶಿಥಿಲವಾಗಿ, ಇದ್ದ ಆಚಾರಗಳ ಮತ್ತು ನಡೆದ ವ್ಯವಹಾರಗಳ ಜಾಡೂ ಮಾಸಿಹೋಗುತ್ತದೆ. ಹಿಂದೆ ಜನ ಹೇಗಿದ್ದರು, ಏನು ಮಾಡಿದರು, ಜನಾಂಗದ ನೀತಿ ನಿಯಮಗಳು ಹೇಗಿದ್ದವು ಎನ್ನುವ ಕಲ್ಪನೆಯೂ ಉಂಟಾಗುವುದು ಬರುಬರುತ್ತಾ ಕಷ್ಟವೆನಿಸುತ್ತದೆ. ಅಳಿದುಳಿದ ಕೆಲವು ವಸ್ತುಗಳ ಗುರುತುಗಳ ಆಧಾರದಿಂದ ಆ ಕಾಲದ ಇತಿಹಾಸವನ್ನು ಅನುಮಾನ ಕ್ರಮದಿಂದ ಕಲ್ಪಿಸಿಕೊಳ್ಳದಿದ್ದರೆ ಆ ಕಾಲಕ್ಕೂ ನಮಗೂ ಸಂಬಂಧವೇ ಇಲ್ಲ; ಅದು ಸಂಪೂರ್ಣವಾಗಿ ಪ್ರಣಷ್ಟವಾದ ವಿವರ. ಕಾಲದ ದವಡೆಯಿಂದ ಗತವೈಭವವನ್ನು ನೆನಪಿಗೆ ತಂದುಕೊಳ್ಳುವ ಸಾಧನ ಪುರಾತತ್ತ್ವ. ಇದು ಇತಿಹಾಸ ಪದ್ಧತಿಯ ಒಂದು ಅವಶ್ಯ ಅಂಗ.

ಅವಶೇಷಗಳನ್ನು ಅವಲಂಬಿಸಿ ಪೂರ್ವ ಕಾಲದ ಸಂಸ್ಕೃತಿಯನ್ನು ಪುನರ್ನಿರ್ಮಾಣ ಮಾಡುವುದು ಸುಲಭವಾದ ಕೆಲಸವಲ್ಲ. ಭೂಖನನ, ವಸ್ತುಪರೀಕ್ಷಣ, ಕಾಲನಿರ್ಣಯ, ಉಪಲಬ್ಧ–ವಿವರಗಳ ವಿಶ್ಲೇಷಣ, ಸಂಗ್ರಹ ಇವೆಲ್ಲವೂ ವೈಜ್ಞಾನಿಕ ಪದ್ಧತಿಗಳ ನೆರವನ್ನು ಪಡೆದುಕೊಂಡು, ಪುರಾತತ್ತ್ವ ಇಂದು ಒಂದು ಶಾಸ್ತ್ರವಾಗಿ ಪರಿಣಮಿಸಿದೆ. ಅದರ ಅಧ್ಯಯನ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತದೆ; ಸರಕಾರವು ಪುರಾತತ್ತ್ವ ಶಾಖೆಯೊಂದನ್ನೇ ವ್ಯವಸ್ಥೆಗೊಳಿಸಿ ಕಾಲಕಾಲಕ್ಕೆ ಅವಶೇಷಗಳ ಅನುಸಂಧಾನವನ್ನು

ನಡೆಸುತ್ತಾರೆ. ಎಲ್ಲ ದೇಶಗಳಲ್ಲಿಯೂ ಪುರಾತತ್ತ್ವದ ಪ್ರಾಶಸ್ತ್ಯವನ್ನು ಅರಿತುಕೊಂಡು ಅದಕ್ಕೆ ಸಾಕಷ್ಟು ಉತ್ತೇಜನವನ್ನು ಕೊಡುತ್ತಿದ್ದಾರೆ. ಹೀಗಾಗಿ ಅದರ ವೈಜ್ಞಾನಿಕ ನೆಲೆ ಸ್ಪಷ್ಟವಾಯಿತು. ಶಾಸನಗಳಲ್ಲಿ, ಚರಿತ್ರೆಗಳಲ್ಲಿ ಮೂಡಿಬರುವ, ಮೊದಲು ಇದ್ದ ಇತಿಹಾಸವನ್ನು ಗುರುತಿಸಬೇಕಾದರೆ ಪುರಾತತ್ತ್ವವೊಂದೇ ಸಾಧನ ಎಂದು ಕಂಡುಕೊಂಡಾಗ ಈ ಜ್ಞಾನಭಾಗವನ್ನು ಶಾಸ್ತ್ರನಿಷ್ಠೆಯಿಂದ ಬೆಳೆಸಿದರು.

ಪುರಾತತ್ತ್ವಕ್ಕೆ ಶಾಸ್ತ್ರದ ಸಂಸ್ಕಾರ ಒದಗುವ ಮೊದಲು ಇದು ಕೆಲವು ಉತ್ಸುಕರ, ಜಿಜ್ಞಾಸುಗಳ ಹವ್ಯಾಸವಾಗಿದ್ದಿತು. ಪ್ರಾಚೀನ ವಸ್ತುಗಳು ಉಪಯೋಗವಿಲ್ಲದಿದ್ದರೂ ಸಂಗ್ರಾಹ್ಯ ಎನ್ನುವ ಮನೋಧರ್ಮವುಳ್ಳ ರಸಿಕರು ಎಲ್ಲ ಕಾಲದಲ್ಲಿಯೂ ಇರುತ್ತಾರೆ. ಹದಿನೈದನೆಯ ಶತಮಾನದಲ್ಲಿ ಐರೋಪ್ಯ ದೇಶದ ಕೆಲವು ಪಂಡಿತ ರಸಿಕರು ರೋಮಕ ಮತ್ತು ಗ್ರೀಕ ಸಂಸ್ಕೃತಿಯ ಅವಶೇಷಗಳನ್ನು ಸಂಗ್ರಹಿಸಿ ಅವನ್ನು ಅಧ್ಯಯನ ಮಾಡಲು ತೊಡಗಿದಾಗಲೇ ಈ ಪುರಾತತ್ತ್ವ ಆರಂಭವಾಯಿತು ಎನ್ನಬಹುದು. ಆ ಕಡೆ ನಡೆದ ಪುನರುಜ್ಜೀವನ (renaissance) ಆಂದೋಳನದಿಂದಾಗಿ ಐರೋಪ್ಯ ದೇಶಗಳಲ್ಲೆಲ್ಲ ವಸ್ತು ಸಂಗ್ರಹಾಲಯಗಳು ಸಿದ್ಧವಾದುವು. ಗತಕಾಲದ ಬಗ್ಗೆ ಒದಗಿದ ಈ ಕುತೂಹಲ ಈಜಿಪ್ಟ್ ಮತ್ತು ಮಧ್ಯ ಪ್ರಾಚ್ಯಗಳ ಪರಿಚಯದಿಂದ ಇನ್ನಷ್ಟು ಕೆರಳಿತು. ಹತ್ತೊಂಬತ್ತನೆಯ ಶತಮಾನದ ಸುಮಾರಿಗೆ ಪುರಾತತ್ತ್ವದ ಅಧ್ಯಯನ ಸಂವಿಧಾನ ಬೆಳೆಯತೊಡಗಿತು.

ಪುರಾತನ ಸ್ಥಳಗಳ ಖನನ (excavation) ಪದ್ಧತಿಯು ಪ್ರೌಢದೆಶೆಯನ್ನು ಮುಟ್ಟಿದ ಬಗೆ ಸೋಜಿಗವಾದುದು. ವಿದ್ವಾಂಸರಿಗಿಂತಲೂ ಜಿಜ್ಞಾಸುಗಳಿಗಿಂತಲೂ ಹೆಚ್ಚಾಗಿ ನಿಧಿಗಳ್ಳರೇ ಈ

ಪದ್ಧತಿಯನ್ನು ಪಳಗಿಸಿದವರು. ಈಜಿಪ್ಟ್ ದೇವಾಲಯಗಳಲ್ಲಿಯೂ ಪೂರ್ವದ ರಾಜರ ಸಮಾಧಿಮಂದಿರಗಳಲ್ಲಿಯೂ ಹೇರಳವಾದ ಧನ, ಒಡವೆ, ವಸ್ತು ಇರುವುದನ್ನು ತಿಳಿದು ಈ ಸಂಪತ್ತನ್ನು ದೋಚಿಕೊಳ್ಳುವ ಬಯಕೆಯಿಂದ ಹುದುಗಿದ್ದುದನ್ನೆಲ್ಲ ಸಾಹಸಿಗಳು ಹೊರ ತೆಗೆದರು. ಸತ್ತ ಅರಸನೊಂದಿಗೆ ಅವನ ವಿಶಿಷ್ಟ ಸಂಪತ್ತನ್ನೂ ಸಮೀಪವರ್ತಿಗಳನ್ನೂ ಅವನ ಶವದ ಬಳಿಯೇ ನಿಕ್ಷೇಪ ಮಾಡಿ ಭೂಮಿಯೊಳಗೆ ಅಡಗಿಸುವ ಪದ್ಧತಿ ಈಜಿಪ್ಟ್ ದೇಶದ ಜನರಲ್ಲಿ ಇದ್ದುದು ನಿಜ. ಪಿರಮಿಡ್ಡುಗಳ ಅಭೇದ್ಯವಾದ ಆವರಣವನ್ನೂ ಸಡಿಲಿಸಿ ಭೂಗತವಾದ ಶವಮಂದಿರಕ್ಕೆ ಸುರಂಗಗಳನ್ನು ಕೊರೆದು, ನಿಕ್ಷೇಪಗಳನ್ನು ಗಾಸಿಯಿಲ್ಲದೆ ಮೇಲೆತ್ತುವ ಜಾಣ್ಮೆಯನ್ನು ಪುರಾತತ್ತ್ವ ಶೋಧಕರಿಗೆ ಈ ಧನ ಪಿಶಾಚಗ್ರಸ್ತರೇ ಹೇಳಿಕೊಟ್ಟವರು. ಬೆಲೆಬಾಳುವ ಪದಾರ್ಥಗಳು ಈಗೆ ಕಣರ್ಮೆಯಾದರೂ. ಅವಶೇಷಗಳಲ್ಲಿಯೂ ಅವಶೇಷವಾದುದನ್ನು ಸಂಗ್ರಹಿಸಿ. ಪರೀಕ್ಷಿಸಿ. ಸಂರಕ್ಷಿಸುವ ಭಾರವನ್ನು ವಿದ್ವಾಂಸರು ವಹಿಸಿದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಖನನ ಶೋಧನ ಸಂವಿಧಾನವನ್ನು ಶಾಸ್ತ್ರಶುದ್ಧವಾಗಿ ವ್ಯವಸ್ಥೆ ಮಾಡಿದವರಲ್ಲಿ ಪಿಟ್-ರಿವರ್ಸ್ (1827-1900) ಮತ್ತು ಫ್ಲೆಂಡರ್ಸ್ ಪೆಟ್ರೀ (1853-1942) ಇವರು ಪ್ರಮುಖರು. ಪಿಟ್-ರಿವರ್ಸ್‌ನ ಕಾರ್ಯಕ್ಷೇತ್ರ ಇಂಗ್ಲೆಂಡ್ ದೇಶ. ಅಲ್ಲಿಯೂ ಡೋರ್ಸೆಟ್‌ನ ಬೋರ್ನ್ ಛೇಸ್ ಎನ್ನುವ ಪ್ರದೇಶ. ಪೆಟ್ರೀ ಕೆಲಸಮಾಡಿದುದು ಈಜಿಪ್ಟ್ ಅವಶೇಷಗಳ ನಡುವೆ. ಶೋಧನದಲ್ಲಿ ದೊರೆತುದನ್ನೆಲ್ಲ ಜಾಗರೂಕತೆಯಿಂದ, ಸಮಗ್ರವಾಗಿ ಅಭಿಲೇಖ ಮಾಡುವ ಅಗತ್ಯವನ್ನು ಇವರು ತೋರಿಸಿದರು. ಶೋಧದಲ್ಲಿ ದೊರೆಯುವಹು

ದಾದ ಯಾವುದೋ ಅಸದೃಶ ವಸ್ತುವಿಗಿಂತ ಪ್ರತಿರೂಪ ವಸ್ತು (typical object) ಇತಿಹಾಸದ ದೃಷ್ಟಿಯಿಂದ ಹೆಚ್ಚು ಮುಖ್ಯವಾದುದೆಂಬ ನಿರ್ದೇಶನವೂ ಇವರಿಂದಲೇ ದೊರೆಯಿತು. ಭೂಗತವಾದ ಸಮಾಧಿಸ್ಥಳಗಳನ್ನೂ, ಮನೆಮಠ ಗಳನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿದ ಈ ಇಬ್ಬರು ಸ್ತರವಿಜ್ಞಾನ (stratigraphy) ವನ್ನು ನೆಲೆಗೊಳಿಸಿದರು. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸರಿಯಾದ ಶಿಕ್ಷಣ ದೊರೆಯಬೇಕು, ಅವರ ಮೇಲ್ವಿಚಾರಣೆ ಸಮರ್ಪಕವಾಗಿರಬೇಕು, ಖನನ ಶೋಧನ ನಡೆದ ಒಡನೆಯೇ ಅವುಗಳ ಪ್ರಕಟಣೆ ಸಿದ್ಧವಾಗಬೇಕು, ಸಂಸ್ಕೃತಿ ಪ್ರತಿರೂಪಗಳ ಅನುಸಂಧಾನ ನಡೆಯಬೇಕು ಎಂದು ಈ ಇಬ್ಬರು ವಿಜ್ಞಾನಿಗಳು ಸ್ಪಷ್ಟಪಡಿ ಸಿದರು.

ಅಭಿಲೇಖನಕ್ಕೆ ಛಾಯಾಚಿತ್ರದ ಬಳಕೆ ಆಗಲೇ ಪ್ರಸ್ತಾಪಕ್ಕೆ ಬಂದಿತಷ್ಟೆ. ವಿಹಂಗಮ ಛಾಯಾಚಿತ್ರ (aerial photography) ಪದ್ಧತಿಯು ಮೊದಲನೆಯ ವಿಶ್ವಯುದ್ಧವಾದನಂತರ ತುಂಬ ಬಳಕೆಗೆ ಬಂದಿತು. ನೀರೊಳಗೆ ಇರುವ ಅವಶೇಷಗಳ ಅಧ್ಯಯನ ಮಾಡುವ ಬಗೆಯೂ ಪ್ರೌಢವಾಗಿದೆ. ಅವಶೇಷಗಳು ದೊರೆತ ಸ್ಥಳವನ್ನು ಸಮಗ್ರವಾಗಿ, ಬೇರೆಬೇರೆ ಋತುಗಳಲ್ಲಿ ಚಿತ್ರಿಸಿಕೊಂಡು, ಅಲ್ಲಿನ ಬೆಳೆ, ಭೂಮಿ ಇವುಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುವ ಪರಿಪಾಠವು ಜರ್ಮನಿ ದೇಶದಲ್ಲಿ ಮೊದಲಾ ಯಿತು. ಖನನ–ಶೋಧನಕ್ಕೆಂದು ಹೊರಡುವವರಲ್ಲಿ ಇತಿಹಾಸ ಜ್ಞರು ಮಾತ್ರವಲ್ಲದೆ ಹಲವಾರು ವಿಜ್ಞಾನಿಗಳೂ ಇರುತ್ತಾರೆ. ಭೂಮಿಯ ಪದರಗಳನ್ನು ನೋಡಿ, ಯಾವ ಪದರ ಯಾವ ಕಾಲದ್ದು, ಅವಶೇಷದ ರಾಸಾಯನಿಕ ಸ್ವರೂಪ, ಸ್ವಭಾವ

ಎಂಥಾದ್ದು, ಲೋಹ–ಶಿಲಾವಸ್ತುಗಳ ಕಾಲ ಯಾವುದು ಎಂದು ಮುಂತಾಗಿ ನಿಷ್ಕರ್ಷೆ ಮಾಡಲು ಶಾಸ್ತ್ರಪರಿಣತರೇ ಇರಬೇಕು.

ಎರಡು ದೃಷ್ಟಿಗಳು

ಹೀಗೆ ಶಾಸ್ತ್ರನಿಷ್ಠೆ ಮೂಡುವ ಮೊದಲು ಪುರಾತತ್ತ್ವಜ್ಞರು ಯುಗಾಂತರ (epochal) ಮತ್ತು ಕಲಾಚಾರಿತ್ರಿಕ (art-historical) ದೃಷ್ಟಿಗಳನ್ನೇ ಅಳವಡಿಸಿಕೊಳ್ಳುತ್ತಿದ್ದರು. ದೊರೆತ ಸಾಮಗ್ರಿಗಳನ್ನೂ ಮನುಷ್ಯ ಶರೀರದ ಅವಶೇಷಗಳನ್ನೂ ಯುಗಗಳ ಅಂತರದಲ್ಲಿ ಒದಗಿದ ವಿಕಾಸದ ನಿದರ್ಶನಗಳೆಂದು ಕಾಣುವ ವಾಡಿಕೆಯಿದ್ದಿತು. ಭೂಮಿಯು ಕಾಲಾಂತರದಲ್ಲಿ ಹಲವಾರು ಸ್ತರಗಳ ಸಮಷ್ಟಿಯಾಗಿ ಪರಿಣಮಿಸಿತು; ಯುಗ ಉರುಳಿದಂತೆ ಒಂದು ಪದರದ ಮೇಲಿದ್ದ ಜನರೂ, ಅವರ ಸಂಸ್ಕೃತಿಯೂ, ಅದರ ಅವಶೇಷಗಳೂ ಮತ್ತೊಂದು ಪದರದಿಂದ ಮುಚ್ಚಿ ಹೋಗುವುದೆಂದೂ, ಪದರಗಳ ಅಧ್ಯಯನದಿಂದ ಅವಶೇಷಗಳ ನಿರ್ದಿಷ್ಟ ಸಂಸ್ಕೃತಿಗಳ ಕಾಲವನ್ನು ಹೇಳುವುದು ಸಾಧ್ಯವೆಂದೂ ಯುಗಾಂತರ ದೃಷ್ಟಿಯ ತಾತ್ಪರ್ಯ.

ಕೆಲವೊಮ್ಮೆ ಪ್ರಾಚೀನ ಕಾವ್ಯಗಳಲ್ಲಿ, ಪುರಾಣಗಳಲ್ಲಿ, ಕಥೆಗಳಲ್ಲಿ ಇತಿಹಾಸದ ಪ್ರಕ್ರಿಯೆಯನ್ನು ಬಳಸಿಕೊಂಡಿರುವುದನ್ನೂ ಕಾಣಬಹುದು. ನಿದರ್ಶನಕ್ಕೆ ದ್ವಾರಕೆ ಸಮುದ್ರದಲ್ಲಿ ಮುಳುಗಿತೆಂದೂ ಕೃಷ್ಣ ಅದನ್ನು ಮತ್ತೆ ಕಟ್ಟಿಸಿದನೆಂದೂ ಪುರಾಣದ ಕಥೆ ಇದೆಯಷ್ಟೆ. ಡಾ॥ ಸಂಕಾಲಿಯಾ ಎನ್ನುವ ಪಂಡಿತರು ದ್ವಾರಕೆಯಲ್ಲಿ ಪುರಾತತ್ತ್ವ ಅನುಸಂಧಾನ ನಡೆಸಿ,ಭೂಮಿಯ ಪದರಗಳನ್ನು ಅಗೆಸಿ ನೋಡಿದಾಗ ಒಂದರ ಕೆಳಗೆ ಒಂದು ಹೀಗೆ ನಾಲ್ಕು ದ್ವಾರಕಾ ನಗರಗಳಿದ್ದುದು ಸ್ಪಷ್ಟವಾಯಿತು. ಮೇಲಿನಿಂದ ಹನ್ನೆರಡು ಅಡಿ ಕೆಳಗೆ ಕ್ರಿಸ್ತಾಬ್ದ

150-700ರ ವರೆಗೆ ಇದ್ದಿರಬಹುದಾದ ನಗರದ ಅವಶೇಷಗಳೂ, ಅದರ ಕೆಳಗೆ ಆರು ಅಡಿ ಮರಳನ್ನು ಅಗೆದಾಗ ಮೂರನೆಯ ಶತಮಾನಕ್ಕೆ ಸೇರಿದ ಅವಶೇಷಗಳೂ, ಹೀಗೆಯೇ ತೀರ ಕೆಳಗೆ ನಲವತ್ತು ಅಡಿಗಳವರೆಗೂ ಅಗೆದು ನೋಡಿದಾಗ ಕ್ರಿ.ಪೂ. ಮೊದಲನೆಯ ಶತಮಾನಕ್ಕೆ ಸೇರಿದ ಅವಶೇಷಗಳೂ ಹೊರ ಬಿದ್ದುವು. ಒಂದು ಪದರದಲ್ಲಿದ್ದ ನಗರಕ್ಕೂ ಮೇಲಿನ ಪದರದ ನಗರಕ್ಕೂ ನಡುವೆ ಮರಳು ತುಂಬಿದ್ದುದರಿಂದ ಸಮುದ್ರ ನಗರದ ಮೇಲೆ ನುಗ್ಗಿ ಬಂದಿತೆನ್ನುವುದು ಸಿದ್ಧವಾಯಿತು. ಹೀಗೆ ಪುರಾಣದ ಕಥೆ ಕೇವಲ ಕಾಲ್ಪನಿಕವಲ್ಲ, ಇತಿಹಾಸದ ವಿವರವೇ ಎಂಬುದನ್ನು ಪುರಾತತ್ತ್ವ ಸಂಶೋಧನೆ ಸ್ಥಿರಪಡಿಸಿತು.

ಅವಶೇಷಗಳನ್ನು ಅಧ್ಯಯನ ಮಾಡುವಾಗ, ಮನುಷ್ಯ ತನ್ನ ಕಲೆಯನ್ನು ಹೇಗೆ ಬೆಳೆಸಿಕೊಂಡ ಎನ್ನುವ ಸಮಸ್ಯೆಯನ್ನೇ ಮುಂದಿಟ್ಟುಕೊಳ್ಳುವುದು ಇನ್ನೊಂದು ದೃಷ್ಟಿಯಾಗಿದ್ದಿತು. ಅವಶೇಷಗಳಿಗೆ ಈ ದೃಷ್ಟಿಯಲ್ಲಿ ಒದಗುತ್ತಿದ್ದ ಮೌಲ್ಯ ಸೌಂದರ್ಯಕ್ಕೆ ಸಂಬಂಧಿಸಿದುದು: ಕಾಲ ನಿರ್ಣಯಕ್ಕಾಗಲೀ ಇತಿಹಾಸ ನಿರೂಪಣೆಗಾಗಲೀ ಅಷ್ಟಾಗಿ ಗಮನ ಕೊಡದೆ ಸೌಂದರ್ಯಾನುಭೂತಿ, ಸೌಂದರ್ಯಸೃಷ್ಟಿ ಇವನ್ನು ಮನುಷ್ಯ ಹೇಗೆ, ಯಾವ ಯಾವ ನೆಲೆಗಳಲ್ಲಿ, ಹಂತಗಳಲ್ಲಿ ಮಾಡಿದ ಎನ್ನುವುದನ್ನೇ ವಿವರಿಸುವುದು ಇಲ್ಲಿ ಮುಖ್ಯ ಉದ್ದೇಶ. ಸುಂದರವಲ್ಲದ, ಸುಭಗವಲ್ಲದ ವಸ್ತುಗಳಿಗೆ ಗಮನಕೊಡುವುದು ಇವರಿಗೆ ಅನಗತ್ಯವೆನಿಸಿದ್ದಿತು. ಆಧುನಿಕ ಪುರಾತತ್ತ್ವವಿಮರ್ಶಕರು ಯುಗಾಂತರ ಮತ್ತು ಕಲಾ ಚಾರಿತ್ರಿಕ ದೃಷ್ಟಿಗಳನ್ನು ಅಳವಡಿಸಿಕೊಂಡು ದಿನಂಪ್ರತಿ ಬಳಸುತ್ತಿದ್ದ ಸಾಮಗ್ರಿಗಳೂ ಗಮನಾರ್ಹವಾದುವು ಎನ್ನುತ್ತಾರೆ. ಅರಸರು, ಅಧಿಕಾರಿಗಳು ಹೇಗಿದ್ದರು

ಚಿತ್ರ 2

ಸೇನ್‌ನಲ್ಲಿ ಕಂಡುಬಂದ ಗುಹಾಚಿತ್ರ; 50,000 ವರ್ಷಗಳಷ್ಟು ಹಿಂದಿನದು

ಎಂದು ಮತ್ತೆ ಕಲ್ಪಿಸಿಕೊಳ್ಳುವುದಕ್ಕಿಂತ ಸಾಮಾನ್ಯ ಜನ ಹೇಗಿದ್ದರು ಅವರ ನಿತ್ಯೋಪಯೋಗಿ ವಸ್ತುಗಳು ಯಾವುವು ಎಂದು ಕಲ್ಪಿಸಿಕೊಳ್ಳುವುದು ಇತಿಹಾಸದ ದೃಷ್ಟಿಯಿಂದ ಮುಖ್ಯ.

ಶಿಲಾಯುಗ, ಕಾಂಸ್ಯಯುಗ, ಲೋಹ ಯುಗಗಳಲ್ಲಿ ಮನುಷ್ಯನ ಸಂಸ್ಕೃತಿ ಹೇಗೆ ಬೆಳೆದುಬಂದಿತು ಎನ್ನುವುದನ್ನು ಪುರಾತತ್ತ್ವ ಶಾಸ್ತ್ರದ ಆಧಾರದ ಮೇಲೆ ನಿರ್ಧರಿಸುವುದು ಸಾಧ್ಯವಾಗಿದೆ.

ಯೂರೋಪು ಖಂಡದ ಪ್ರಾಚೀನವಾದ ಹಲವಾರು ಸ್ಥಳಗಳಲ್ಲಿ ಖನನ – ಶೋಧನಗಳನ್ನು ನಡೆಸಿ ಪ್ರಾಗಿತಿಹಾಸದ ವಿವರಗಳನ್ನು ಸ್ಪಷ್ಟಪಡಿಸಿದ್ದಾರೆ. ರೋಮಕ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಅವಶೇಷಗಳನ್ನೂ, ಅದಕ್ಕೂ ಮುಂಚಿನ ಯತ್ರುಸ್ಕನ್ ಸಂಸ್ಕೃತಿಯ ಅವಶೇಷಗಳನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿದ ಮೇಲೆ ಐರೋಪ್ಯ ಇತಿಹಾಸದ ಹಿನ್ನೆಲೆ ಬೆಳಕಿಗೆ ಬಂದಿತು.

ಈಜಿಪ್ಟ್ ದೇಶದಲ್ಲಿ ಪುರಾತತ್ವ ಸಂಶೋಧನೆಗಳು 1798ರಲ್ಲಿಯೇ ಆರಂಭವಾದುವು. ನೆಪೋಲಿಯನ್ ಚಕ್ರವರ್ತಿ ಈಜಿಪ್ಟ್ ದೇಶವನ್ನು ಆ ವರ್ಷ ದಾಳಿಮಾಡಿದಾಗ ಈ ಸಂಶೋಧನೆಗಳನ್ನು ಆತನೇ ಅಪ್ಪಣೆ ಮಾಡಿದನು. ಮರುವರ್ಷ ಅಲೆಗ್ಸಾಂಡ್ರಿಯಾದ ಬಳಿ ದೊರೆತ ಶಾಸನವೊಂದರಲ್ಲಿ ಮೂರು ಲಿಪಿಗಳನ್ನು ಬಳಸಿದ್ದುದು ಪ್ರಾಚೀನ ಈಜಿಪ್ಟ್ ಲಿಪಿಯನ್ನು ಅರಿಯುವುದಕ್ಕೆ ನೆರವಾಯಿತು. ಶಾಂಪೊಲಿಯೋ (1778-1867), ಮಾರಿಯೆ (1821-1881), ಮಾಸ್ಕರೋ ಎನ್ನುವ ಮೂವರು ಫ್ರೆಂಚ್ ಪುರಾತತ್ತ್ವವೇತ್ತರ ನಿರ್ದೇಶನದಿಂದ ಈಜಿಪ್ಟ್ ಸಂಸ್ಕೃತಿಯ ಪ್ರಾಚೀನ ಸ್ವರೂಪ ಬೆಳಕಿಗೆ ಬಂದಿತು. ಮೊದಲಿಗೆ ಇಂಗ್ಲೀಷರಿಗೂ ಫ್ರೆಂಚರಿಗೂಮಾತ್ರ ಈಜಿಪ್ಟ್ ಪ್ರದೇಶದ ಮೇಲೆ ಪ್ರಭುತ್ವ ಇದ್ದಿತು. ಇಪ್ಪತ್ತನೆಯ ಶತಮಾನದ ವೇಳೆಗೆ ಉಳಿದ ದೇಶದವರೂ ಈಜಿಪ್ಟ್ ಜನರೂ ಖನನ ಶೋಧನೆಗಳನ್ನು ನಡೆಸಿ ಹಲವಾರು ಸ್ವಾರಸ್ಯವಾದ ವಿವರಗಳನ್ನು ಹೊರಗೆಡಹಿದರು. 1922 ರಲ್ಲಿ ಅರಸರ ಕಣಿವೆಯಲ್ಲಿ ತುತನ್‌ಖಾಮೆನ್ ಎನ್ನುವ ಕ್ರಿ.ಪೂ. 14ನೆಯ ಶತಮಾನದ ಈಜಿಪ್ಟ್ ಅರಸನ ಸಮಾಧಿಯನ್ನು ಹುಡುಕಿ, ಅಲ್ಲಿ ಸಂಶೋಧನೆಗಳನ್ನು ನಡೆಸಿದುದು ರೋಮಾಂಚಕಾರಿಯಾದುದು. ಹೊವರ್ಡ್ ಕಾರ್ಟರ್ ಮತ್ತು ಲಾರ್ಡ್ ಕಾರ್ನರ್ವನ್ ಎಂಬುವವರು ಇಲ್ಲಿಂದ

ಹೊರತೆಗೆದ ಬಂಗಾರದ ಮುಖವಾಡ ಈ ಅರಸನದೇ; ಈಗ ಅದನ್ನು ಕೈರೋ ಮ್ಯೂಸಿಯಂನಲ್ಲಿ ಇಟ್ಟಿದ್ದಾರೆ.

ಭಾರತದಲ್ಲಿ ಪುರಾತತ್ತ್ವ

ನಮ್ಮ ದೇಶದಲ್ಲಿ ಸರಕಾರವು 1863 ರಲ್ಲಿಯೇ ಪುರಾತತ್ತ್ವ ಸರ್ವೇಕ್ಷಣ ಶಾಖೆಯನ್ನು ವ್ಯವಸ್ಥೆ ಮಾಡಿತು. ಸರ್ ಅಲೆಗ್ಸಾಂಡರ್ ಕನಿಂಗ್‌ಹ್ಯಾಮ್ ಎನ್ನುವ ಪಂಡಿತನ ನೇತೃತ್ವದಲ್ಲಿ ಈ ಶಾಖೆ ತನ್ನ ಕೆಲಸವನ್ನು ಆರಂಭಮಾಡಿತು. 1902ರಲ್ಲಿ ಸರ್ ಜಾನ್ ಮಾರ್ಷಲ್ ಈ ಶಾಖೆಯ ಪುನರ್ವ್ಯವಸ್ಥೆಯನ್ನು ಮಾಡಿದನು. ಈತನ ಕಾಲದಲ್ಲಿ ನಡೆದ ಅತಿಮುಖ್ಯವಾದ ಸಂಶೋಧನೆಯೆಂದರೆ ಸಿಂಧೂ ಸಂಸ್ಕೃತಿಯ ಅವಶೇಷಗಳನ್ನು ಕುರಿತದ್ದು. ಕ್ರಿ.ಪೂ. 2400ರ ಸುಮಾರಿಗೆ ವೈಭವದಿಂದ ಮೆರೆದ ಈ ಸಂಸ್ಕೃತಿಯ ಸ್ಪಷ್ಟ ಕುರುಹುಗಳು ಪಂಜಾಬಿನ ಹರಪಾ ಮತ್ತು ಸಿಂಧೂ ಜಿಲ್ಲೆಯ ಮೊಹನ್‌ಜದಾರೋ ಎನ್ನುವ ಸ್ಥಳಗಳಲ್ಲಿ 1920ರ ಸುಮಾರಿಗೆ ದೊರೆತವು. ಇವುಗಳ ಬಗ್ಗೆ ವಿಶೇಷವಾದ ಅಧ್ಯಯನ ಮಾರ್ಷಲನ ಸಹೋದ್ಯೋಗಿಗಳಿಂದಲೂ. ಮುಂದೆ ಅಧಿಕಾರಿಯಾದ ಸರ್ ಮಾರ್ಟಿಮರ್ ವ್ಹೀಲರ್‌ನಿಂದಲೂ ನಡೆಯಿತು. ಇದಲ್ಲದೆ ತಕ್ಷಶಿಲಾ. ಅರಿಕಮೇಡು. ಬ್ರಹ್ಮಗಿರಿ, ಚಂದ್ರವಳ್ಳಿ ಮೊದಲಾದ ಪ್ರದೇಶಗಳಲ್ಲಿ ಸ್ವಾರಸ್ಯವಾದ ಸಂಶೋಧನೆಗಳು ನಡೆದಿವೆ.

ಹೀಗೆಯೇ ಚೀಣ, ಆಫ್ರಿಕ. ಜಪಾನ್, ಕೊರಿಯ, ಮಧ್ಯಪ್ರಾಚ್ಯ, ದಕ್ಷಿಣ ಅಮೆರಿಕಗಳಲ್ಲಿ ನಡೆದ ಪುರಾತತ್ತ್ವ ಸಂಶೋಧನೆಗಳು ಪುರಾತನ ಮಾನವ ಸಂಸ್ಕೃತಿಯ ಬಗ್ಗೆ ವಿಪುಲವಾದ ವಿವರಗಳನ್ನು ಒದಗಿಸಿವೆ. ಗತವೈಭವದ ಪರಿಚಯ ಮಾಡಿ

ಕೊಡುವುದು ಒಂದು ಪ್ರಯೋಜನವಾದರೆ ಮನುಷ್ಯನಿಗೂ ಅವನ ಸಂಸ್ಕೃತಿಗೂ ಇರುವ ಸಂಬಂಧ ಏನು ಎನ್ನುವುದನ್ನು ಸ್ಪಷ್ಟಪಡಿಸುವುದು ಪುರಾತತ್ತ್ವದ ಇನ್ನೊಂದು ಉದ್ದೇಶವೆನ್ನಬಹುದು. ಮನುಷ್ಯ ಜೀವನದ ವಿಕಾಸವು ಭೂಮಿಯ ಮೇಲೆ ಆದದ್ದು ಹೇಗೆ ಎಂದು ನಿರ್ದೇಶಿಸುವಲ್ಲಿ ಮಾನವ ವಿಜ್ಞಾನ (anthropology) ವೂ ಪುರಾತತ್ತ್ವ (archaeology)ವೂ ಪರಸ್ಪರ ನೆರವಾಗುತ್ತವೆ.

2. ಸಿಂಧೂ ಸಂಸ್ಕೃತಿ

1922ರಲ್ಲಿ ಆರ್. ಡಿ. ಬ್ಯಾನರ್ಜಿ ಎನ್ನುವ ಪುರಾತತ್ತ್ವ ಅನ್ವೇಷಕರು ಸಿಂದ್ ಪ್ರದೇಶದ ಬೌದ್ಧಮಂದಿರಗಳ ಅವಶೇಷವನ್ನು ಹುಡುಕುತ್ತಿದ್ದಾಗ ಕರಾಚಿಗೆ ಇನ್ನೂರು ಮೈಲಿ ದೂರವಿರುವ ಮೋಹನ್‌ಜೋದಾರೋ ಎನ್ನುವಲ್ಲಿ ಸಣ್ಣದೊಂದು ಗುಡ್ಡದ ಮೇಲೆ ವಿಚಿತ್ರವಾದ ಇಟ್ಟಿಗೆಗಳಿಂದ ಕಟ್ಟಿದ ಕಟ್ಟಡವನ್ನು ನೋಡಿದರು. ಈ ಇಟ್ಟಿಗೆಗಳಿಂದ ಅವರ ಕುತೂಹಲ ಕೆರಳಿ ಅದೇ ಸ್ಥಳದಲ್ಲೇ ಸಂಶೋಧನೆಯನ್ನು ನಡೆಸಲು. ಕ್ರಿ.ಪೂ. ಮೂರು ಸಾವಿರ ವರ್ಷಗಳ ಹಿಂದೆ ಈ ಕಡೆ ಸಂಸ್ಕೃತಿಯೊಂದು ಇದ್ದುದು ತಿಳಿದು ಬಂದಿತು. ಹಿಂದಿನ ವರ್ಷ 1921ರಲ್ಲಿ, ರಾಯ್ ಬಹದ್ದೂರ್ ದಯಾರಾಮ ಸಾಹನಿ ಎಂಬುವರು ಇಲ್ಲಿಗೆ 450 ಮೈಲಿ ದೂರದಲ್ಲಿ ಪಂಜಾಬ್ ಪ್ರಾಂತ್ಯದಲ್ಲಿದ್ದ ಹರಪ್ಪಾ ಎಂಬಲ್ಲಿ ಈ ಸಂಸ್ಕೃತಿಯ ಚಿಹ್ನೆಗಳನ್ನು ಕಂಡು ಹಿಡಿದಿದ್ದರು. ಇವರಿಬ್ಬರ ಸಂಶೋಧನೆಗಳಿಂದ ಭಾರತೀಯ ಪುರಾತತ್ತ್ವ ಪರ್ಯವೇಕ್ಷಣ ಶಾಖೆಯವರು ಪ್ರಚೋದಿತರಾಗಿ ಸರ್ ಜಾನ್ ಮಾರ್ಷಲ್‌ನ ನೇತೃತ್ವದಲ್ಲಿ ಆಯೋಗವೊಂದನ್ನು ವ್ಯವಸ್ಥೆ ಮಾಡಿ ಈ ಸಂಸ್ಕೃತಿಯ ಅವಶೇಷಗಳ ಅಧ್ಯಯನವನ್ನು ನಡೆಸಿದರು. 1923-24 ಮತ್ತು 1925-26 ರಲ್ಲಿ ಈ ಅಧ್ಯಯನ ನಡೆಯಿತು.

ಈ ಸಂಶೋಧನೆ ಮತ್ತು ಅಧ್ಯಯನಗಳು ಪುರಾತತ್ತ್ವ ಕ್ಷೇತ್ರದಲ್ಲೇ ಕ್ರಾಂತಿಯನ್ನುಂಟುಮಾಡಿತು. ಅಶೋಕನ ಕಾಲಕ್ಕೆ ಮೊದಲಿನ ಭಾರತ ದೇಶದ ಇತಿಹಾಸ ಅಸ್ಪಷ್ಟವಾಗಿದ್ದಿತು.

ಈಜಿಪ್ಟ್, ಸುಮೇರಿಯನ್, ಮೆಸೊಪೊಟೇಮಿಯನ್ ಸಂಸ್ಕೃತಿಗಳೇ ವಿಶ್ವದ ಅತಿ ಪ್ರಾಚೀನ ಸಂಸ್ಕೃತಿಗಳೆನ್ನುವ ಕಲ್ಪನೆಯಿದ್ದಿತು. ಈ ಸಂಸ್ಕೃತಿಗಳಿಗೆ ಸಮ ಸಾಮಯಿಕವಾಗಿ. ಇವಕ್ಕಿಂತಲೂ ಉತ್ಕೃಷ್ಟವಾದ ಸಂಸ್ಕೃತಿ ಭಾರತ ದೇಶದಲ್ಲಿ ಇದ್ದಿತೆನ್ನುವ ವಿಚಾರರೋಮಾಂಚಕಾರಿಯಾಯಿತು. ಆರ್ಯರ ಕಾಲಕ್ಕೂ ಮೊದಲು ಈ ದೇಶದಲ್ಲಿ ವಿಶಿಷ್ಟವಾದ. ಸುಸಜ್ಜಿತವಾದ ನಾಗರ ಸಂಸ್ಕೃತಿಯಿದ್ದುದು ತಿಳಿದು ಬಂದಿತು.

ಸಿಂದ್ (ಈಗ ಪಾಕಿಸ್ಥಾನದಲ್ಲಿರುವ ಪ್ರದೇಶ) ಮತ್ತು ಪಂಜಾಬು ಮಾತ್ರವಲ್ಲದೆ ಬಲೂಚಿಸ್ಥಾನ, ಗುಜರಾಥ. ರಾಜಪುತಾನ, ಹಿಮಾಚಲ ಪ್ರದೇಶ, ಸೌರಾಷ್ಟ್ರ ಪ್ರಾಂತ್ಯಗಳಲ್ಲೂ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಇಷ್ಟು ವಿಸ್ತೃತವಾಗಿ ಹರಡಿದ್ದ ಪ್ರಾಚೀನ ಸಂಸ್ಕೃತಿಯನ್ನು 'ಸಿಂಧೂಸಂಸ್ಕೃತಿ' ಯೆಂದು ನಿರ್ದೇಶಿಸಿದ್ದಾರೆ. ಮೊಹನ್‌ಜೊದಾರೋ ಸಿಂಧೂ ನದಿಯ ದಡದಲ್ಲಿದ್ದ ನಗರವಾಗಿದ್ದಿತು. ಸಿಂಧೂ ನದಿಯ ಶಾಖೆಯಾದ ರಾವಿ ನದಿಯ ದಡದಲ್ಲಿ ಹರಪ್ಪಾ ಇದ್ದಿತು. ಸಿಂಧೂ ನದಿಯ ಪರಿಸರದಲ್ಲೇ ಈ ಸಂಸ್ಕೃತಿಯು ಬೆಳೆಯಿತೆಂಬುದು ಖಚಿತವಾಗಿದೆ.

ಮೊಹೆನ್‌ಜೊದಾರೋವಿನ ಅವಶೇಷಗಳಿರುವ ಪ್ರದೇಶ 240 ಎಕರೆಗಳಷ್ಟು ವಿಸ್ತಾರವಾದುದು. ಮೊಹೆನ್‌ಜೊದಾರೋ ನಗರವೇ ಒಂದು ಮೈಲಿ ಚಚ್ಚೌಕವಾಗಿದ್ದಿತೆನ್ನಲು ಆಧಾರವಿದೆ. ಇಲ್ಲಿ ತಜ್ಞರು ನಡೆಸಿದ ಸಂಶೋಧನೆಗಳಿಂದ ಒಂದರ ಮೇಲೊಂದು ಮೂರು ನಗರಗಳಿದ್ದುದು ಸ್ಪಷ್ಟವಾಯಿತು. ಒಂದು ನಗರ ಯಾವುದೋ ಕಾರಣದಿಂದ ಶಿಥಿಲವಾಗಲು ಅಥವಾ ಭಗ್ನಾವಶೇಷವಾಗಲು ಅದರ ಮೇಲೆ ಮತ್ತೊಂದು ನಗರವನ್ನು ಜನರು ನಿರ್ಮಿಸಿದ ಕುರುಹುಗಳಿವೆ. ಸಿಂಧೂನದಿಯ ಪ್ರವಾಹವೇ

ನಗರವನ್ನು ಮುಳುಗಿಸಿತೋ ಏನೋ? ಅಂತೂ, ನಗರವು ಮೂರು ಬಾರಿ ನಾಶವಾಯಿತು, ಎರಡು ಬಾರಿ ಪುನರ್ನಿರ್ಮಿತ ವಾಯಿತು ಎಂದು ಊಹಿಸಲು ಅವಕಾಶವಿದೆ. ಕ್ರಿಸ್ತಪೂರ್ವ 3,300ರಿಂದ 2,700ರ ವರೆಗೆ ಈ ನಗರದಲ್ಲಿ ಜನ ವಾಸಿ ಸುತ್ತಿದ್ದರು ಎಂದು ತಿಳಿದು ಬರುತ್ತದೆ. ಅಲ್ಲಿಂದೀಚೆಗೆ ಜನವಸತಿ ಅಲ್ಲಿ ಇದ್ದುದಕ್ಕೆ ಸಾಕ್ಷ್ಯವಿಲ್ಲ: ಈ ನಗರ ಹೇಗೆ ಪಾಳುಬಿದ್ದಿತು ಎನ್ನುವುದೂ ತಿಳಿಯುವುದಿಲ್ಲ. ಇದ್ದಕ್ಕಿದ್ದಂತೆ ನಗರ ನಾಶವಾಯಿತು ಎನ್ನುವುದಕ್ಕೆ ಆಧಾರಗಳಿವೆ. ಸಾಂಕ್ರಾಮಿಕ ರೋಗವೋ, ಸಿಂಧೂ ನದಿಯ ಪ್ರವಾಹವೋ, ಪರಕೀಯರ ದಾಳಿಯೋ ಯಾವುದು ಕಾರಣವೋ ಸ್ಪಷ್ಟವಾಗಿಲ್ಲ.

ಸಿಂಧೂ ಸಂಸ್ಕೃತಿಯ ಅವಶೇಷಗಳನ್ನು ಅಧ್ಯಯನ ಮಾಡಿ ದವರು ಈ ಸಂಸ್ಕೃತಿಯಲ್ಲಿ ಅರಸನಿಗಾಗಲೀ ದೇವತೆಗಳಿಗಾಗಲೀ ಪ್ರಾಧಾನ್ಯವಿರದೆ, ಸಾಮಾನ್ಯ ಜನರ ನಿತ್ಯಜೀವನದ ಸಂಸ್ಕೃತಿ ಯಿದೆಂದು ಹೇಳುತ್ತಾರೆ. ವೈಭವದ ಕಲೆಗೂ ಇಲ್ಲಿ ಅವಕಾಶ ಇದ್ದಂತಿಲ್ಲ. ಅವಶೇಷಗಳೆಲ್ಲ ದಿನದಿನದ ವ್ಯವಹಾರಕ್ಕೆ ಸಂಬಂಧ ಪಟ್ಟುವೇ. ದೇವಸ್ಥಾನವಾಗಲೀ ಅರಮನೆಯಾಗಲೀ ಈ ನಗರ ದಲ್ಲಿ ಇದ್ದ ಗುರುತಿಲ್ಲ. ನಗರ ರಚನಾ ಸಂವಿಧಾನದಲ್ಲಿ ಆಗಿನ, ಅಲ್ಲಿನ ಜನ ಎಷ್ಟು ದಕ್ಷರಾಗಿದ್ದರೆನ್ನುವುದೇ ಈ ಅವಶೇಷಗಳ ಮುಖ್ಯ ಸಂದೇಶ.

ನಗರ ರಚನೆ

ಇಲ್ಲಿ ನಗರದ ಬೀದಿಗಳು ನೇರವಾಗಿ, ವಿಶಾಲವಾಗಿರುತ್ತಿದ್ದುವು. ಪೂರ್ವ ಪಶ್ಚಿಮ, ಉತ್ತರ ದಕ್ಷಿಣವಾಗಿಯೇ ಬೀದಿಗಳು ಇರುತ್ತಿ ದ್ದುವು. ಮಹೆಂಜೋದಾರೋವಿನ ಪ್ರಮುಖ ಬೀದಿ ಮೂವತ್ತು

ಮೂರು ಅಡಿ ಅಗಲವಾಗಿದ್ದಿತು. ಬೀದಿಯ ಎರಡೂ ಪಕ್ಕಗಳಲ್ಲಿ ಮನೆಗಳಿದ್ದುವು. ಮನೆಕಟ್ಟಲು ಸುಟ್ಟ ಇಟ್ಟಿಗೆಗಳನ್ನು ಅವರು ಬಳಸುತ್ತಿದ್ದುದು ಸ್ಪಷ್ಟವಾಗಿದೆ. ಮನೆಗಳಲ್ಲಿ ವಿಶಾಲವಾದ ಅಂಗಳ, ಬಾವಿ, ಬಚ್ಚಲುಮನೆಗಳಿರುತ್ತಿದ್ದುವು. ಆದರೆ ಮನೆಗಳಲ್ಲಿ ಅಲಂಕರಣವಿದ್ದ ಗುರುತಿಲ್ಲ. ಈ ನಗರದ ಸೋಜಿಗವಾದ ವಿವರ ವೆಂದರೆ ಅತ್ಯುತ್ತಮವಾದ ಒಳಚರಂಡಿ ವ್ಯವಸ್ಥೆ. ಮನೆಮನೆ ಗಳಿಂದಲೂ ನೀರನ್ನು ರಸ್ತೆಗೆ ಒಯ್ಯಲು ಹೆಂಚಿನ ಕೊಳವಿಗಳನ್ನು, ಮೋರಿಗಳನ್ನು, ಬಳಸುತ್ತಿದ್ದರು; ರಸ್ತೆಯ ಚರಂಡಿ ಕಲ್ಲಿನಿಂದ ಕಟ್ಟಲ್ಪಟ್ಟು ದೊಡ್ಡ ದೊಡ್ಡ ಇಟ್ಟಿಗೆಗಳಿಂದ ಮುಚ್ಚಲ್ಪಟ್ಟು ಅಚ್ಚುಕಟ್ಟಾಗಿರುತ್ತಿದ್ದಿತು. ಊರಿನ ನಡುವೆ 39 ಅಡಿ ಉದ್ದ, 23 ಅಡಿ ಅಗಲ, 8 ಅಡಿ ಆಳ ಇದ್ದ ದೊಡ್ಡ ಸ್ನಾನದ ಕೊಳ ಒಂದಿದ್ದಿತು. ಕೊಳದ ಸುತ್ತ ಇಟ್ಟಿಗೆ, ಗಾರೆಗಚ್ಚಿನಿಂದ ಮೂರು ನಾಲ್ಕು ಅಡಿ ದಪ್ಪವಾಗಿ ಗೋಡೆಯನ್ನು ಕಟ್ಟಿರುವುದು ಕಾಣುತ್ತದೆ. ಕೊಳಕ್ಕೆ ಇಳಿಯಲು ಮೆಟ್ಟಲುಗಳಿವೆ. ಐದು ಸಾವಿರ ವರ್ಷಗಳ ಹಿಂದೆ ಇದ್ದ ಊರು ಇದು!

ಜನ ಪ್ರಾಯಶಃ ಬೇಸಾಯದಿಂದಲೇ ಬದುಕುತ್ತಿದ್ದರು. ಈ ಊರಿನ, ಈ ಕಾಲದ ಅಡಿಗೆ ಮನೆ ಜಾಡಿಗಳಲ್ಲಿಟ್ಟಿದ್ದ ಗೋಧಿ, ಬಾರ್ಲಿ ಕಾಳುಗಳನ್ನೂ ಕರ್ಜೂರದ ಬೀಜಗಳನ್ನೂ ಇಂದಿಗೂ ಕಾಣಬಹುದು; ಹಲವಾರು ಬೀಸುವ ಕಲ್ಲುಗಳು ದೊರೆತಿವೆ. ಈ ಜನಕ್ಕೆ ನೇಯ್ಗೆಯ ಪರಿಚಯವಿದ್ದಿತು. ಈ ಕಾಲದ ಬಟ್ಟೆಯ ತುಂಡೊಂದು ಇಂದಿಗೂ ಉಳಿದು ಬಂದಿದೆ; ಜಗತ್ತಿನಲ್ಲೇ ಅತಿ ಪ್ರಾಚೀನವಾದ ಬಟ್ಟೆ ಇದು! ಭಾರತೀಯ ಹತ್ತಿಗೆ ಹಿಂದೆ 'ಸಿಂಧು' ಎಂದೇ ಹೆಸರಿದ್ದಿತು. ಹತ್ತಿಯ ಬಟ್ಟೆಯನ್ನು ಬಳಸಿದ ಜನರಲ್ಲಿ ಭಾರತೀಯರೇ ತುಂಬ ಪ್ರಾಚೀನರು. ಐದಂ

ಸಾವಿರ ವರ್ಷಗಳಿಂದ ನಮ್ಮಲ್ಲಿ ಹತ್ತಿ ಬೆಳೆದು ಬಟ್ಟೆಯನ್ನು ನೇಯುವ ಕೌಶಲ ಉಳಿದು ಬಂದಿದೆ.



ಚಿತ್ರ 3

ಸಿಂಧೂನದಿಯ ಅವಶೇಷಗಳಲ್ಲೊಂದಾದ ಟಗರಿನ ಗೊಂಬೆ; ಮೆರುಗು ಹಾಕಿದ ಮಣ್ಣಿನದು ಕ್ರಿ. ಪೂ. 3000.

ಜನಜೀವನ

ಸಂಶೋಧಕರು ಹೊರತೆಗೆದ ಅವಶೇಷಗಳಲ್ಲಿ ಮುದ್ರಿಕೆಗಳು ಪ್ರಮುಖವಾದುವು. ಈ ಸಂಸ್ಕೃತಿಯ ಕಾಲವನ್ನು ನಿರ್ಣಯಿಸಲು ಈ ಮುದ್ರಿಕೆಗಳೇ ನೆರವಾದುವು. ಇವುಗಳಲ್ಲಿ ಬಿಳಿ ಸುಣ್ಣಕಲ್ಲು,

ಜೇಡಿಮಣ್ಣು ಇವುಗಳಿಂದ ಮಾಡಿದುವೇ ಹೆಚ್ಚು. ಅರ್ಧ ಅಂಗುಲದಿಂದ ಎರಡೂವರೆ ಅಂಗುಲದವರೆಗೆ ಸಾಮಾನ್ಯವಾಗಿ ಚಚ್ಚೌಕವಾಗಿರುವ ಈ ಮುದ್ರಿಕೆಗಳನ್ನು ಸರದಂತೆ ಪೋಣಿಸಿ ಕುತ್ತಿಗೆಗೆ ಹಾಕಿಕೊಳ್ಳುತ್ತಿದ್ದರು, ಅಥವಾ ತಾಯಿತದಂತೆ ಭುಜಗಳಲ್ಲಿ ಕಟ್ಟಿಕೊಳ್ಳುತ್ತಿದ್ದರು ಎಂದು ತೋರುತ್ತದೆ. ಈ ಮುದ್ರಿಕೆಗಳ ಮೇಲೆ ಪ್ರಾಣಿಗಳ ಚಿತ್ರಣವೇ ಇರುವುದೂ, ಅವುಗಳು ದೇವತಾ ಸ್ಥಾನದಲ್ಲಿರುವುದೂ ಆ ಕಾಲದ ಧರ್ಮದ ಮೇಲೆ ಅಷ್ಟಿಷ್ಟು ಬೆಳಕನ್ನು ಚೆಲ್ಲುತ್ತವೆ. ಮಂತ್ರ – ಯಂತ್ರ – ಯಕ್ಷಿಣಿಯುಗದ ಕಲ್ಪನೆಗಳನ್ನು ಇಲ್ಲಿ ಕಾಣಬಹುದು. ಮಾತೃದೇವತಾರಾಧನೆಗೂ ಇಲ್ಲಿ ಸಾಕ್ಷ್ಯಗಳಿವೆ.

ಈ ಮುದ್ರಿಕೆಗಳ ಮೇಲೆ ಬರಹಗಳೂ ಇವೆ. ಆದರೆ ಈ ಲಿಪಿಯನ್ನು ಈವರೆಗೆ ಓದುವುದು ಸಾಧ್ಯವಾಗಿಲ್ಲ. ಆ ಕಾಲದ ಶಾಸನಗಳೇನು ಉಪಲಬ್ಧವಾಗಿಲ್ಲ. ಹೀಗಾಗಿ ಸಿಂಧೂ ಸಂಸ್ಕೃತಿಯ ಭಾಷೆ ಯಾವುದು ಎನ್ನುವುದು ಇಂದಿಗೂ ಬಗೆಹರಿಯದ ಸಮಸ್ಯೆಯಾಗಿದೆ; ಬಗೆಹರಿದೀತೆಂಬ ಭರವಸೆಯೂ ಇಲ್ಲವೆಂದು ತಜ್ಞರ ಅಭಿಪ್ರಾಯ

ಸಿಂಧೂ ಸಂಸ್ಕೃತಿಯು ಜೀವಂತವಾಗಿದ್ದಾಗ ಮೊಹೆಂಜೊದಾರೋ ನಗರವು ವಾಣಿಜ್ಯ ವ್ಯಾಪಾರಗಳಿಗೆ ಕೇಂದ್ರವಾಗಿದ್ದಿತು. ಹಲವಾರು ಸೀಮೆಯ ಜನರು ಇಲ್ಲಿ ನೆರೆಯುತ್ತಿದ್ದರು; ಶವಗಳ ಅವಶೇಷಗಳಲ್ಲಿ ಬಗೆಬಗೆಯ ಜನಾಂಗಗಳ ಕುರುಹಿದೆ. ಬಹುಶಃ ಬಲೂಚಿಸ್ಥಾನ, ಪರ್ಶಿಯ, ಮೆಸೊಪೊಟೇಮಿಯ, ಕಾಥಿಯವಾಡ, ದಕ್ಷಿಣ ಭಾರತಗಳೊಂದಿಗೆ ಈ ನಗರವು ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದಿತು. ಮೆಸೊಪೊಟೇಮಿಯದೊಂದಿಗೆ ಹತ್ತಿ ವ್ಯಾಪಾರ ಬಲವಾಗಿದ್ದಿರಬಹುದು. ಭಾರತದ ಹತ್ತಿಗೆ ಸಿಂಧೂ ಎಂದೇ ಹೆಸರಿದ್ದಿತೆಂದು

ಹೇಳಿದೆವಷ್ಟೆ; ಇದರಿಂದಲೇ ಗ್ರೀಕ್ ಭಾಷೆಯ 'ಸಿಂಡಾನ್' ಎನ್ನುವ ಮಾತು ಒದಗಿದೆ.

ಇಲ್ಲಿ ಗೋಧಿ, ಬಾರ್ಲಿ, ಅಕ್ಕಿ ಇವುಗಳ ಬಳಕೆ ವಿಶೇಷವಾಗಿದ್ದಿತು. ಅವರು ಮಾಂಸಾಹಾರಿಗಳು; ಮೀನು, ಹಂದಿ, ಕುರಿ, ಹಸು, ಇವುಗಳು ಆಹಾರಕ್ಕೂ ಒದಗುತ್ತಿದ್ದುವು. ಈ ಪ್ರಾಣಿಗಳ ಮೂಳೆಗಳ ಅವಶೇಷಗಳು ಮೊಹೆಂಜೊದಾರೋ ನಗರದ ಬೀದಿಗಳಲ್ಲೂ ಚರಂಡಿಗಳಲ್ಲೂ ಉಳಿದಿದ್ದುದು ಇದನ್ನು ಸೂಚಿಸುತ್ತದೆ. ಘಡಿಯಲ್ ಎನ್ನುವ ಜಾತಿಯ ಮೊಸಳೆಯ ಮಾಂಸವನ್ನು ಇವರು ಬಳಸುತ್ತಿದ್ದರು. ಆಹಾರದ ಉಳಿದ ವಿವರಗಳು ಅಷ್ಟಾಗಿ ಸ್ಪಷ್ಟವಾಗುವುದಿಲ್ಲ.

ಜನ ಸರಳವಾದ ಹತ್ತಿಬಟ್ಟೆಯನ್ನು ಉಡುತ್ತಿದ್ದರು; ಶ್ರೀಮಂತರಾದವರು ಚಿತ್ತಾರಮೂಡಿಸಿದ ಬಟ್ಟೆಗಳನ್ನು ಉಡುತ್ತಿದ್ದರೆನ್ನಲು ಅಲ್ಲಿ ದೊರೆತಿರುವ ಒಂದು ಶಿಲಾಪ್ರತಿಕೃತಿ ಆಧಾರವಾಗಿದೆ. ಈ ಪ್ರತಿಕೃತಿಯಲ್ಲಿ ಇಂದಿಗೂ ಭಾರತೀಯರು ಬಲಭುಜವನ್ನು ಮುಚ್ಚುವಂತೆ ಹೊದೆದುಕೊಳ್ಳುವ ಶಾಲಿನ ಚಿತ್ರಣವಿದೆ. ಈ ಅವಶೇಷಗಳಲ್ಲಿ ಗಂಡಸರ ಮೃಣ್ಮಯ ಮೂರ್ತಿಗಳು ನಗ್ನವಾಗಿಯೂ ಹೆಂಗಸರ ಮೂರ್ತಿಗಳು ವಸ್ತ್ರಾವೃತವಾಗಿಯೂ ಇರುವುದನ್ನು ನೋಡಬಹುದು. ಬಹುಶಃ ಈಗ ಹಳ್ಳಿಗಳಲ್ಲಿ ಕಾಣುವಂತೆ ಗಂಡಸರ ಮೇಲುಮೈ ಬರಿದಾಗಿದ್ದು ಸೊಂಟಕ್ಕೆ ದೋತರವನ್ನು ಸುತ್ತಿಕೊಳ್ಳುವ ಪದ್ಧತಿ ಇದ್ದಿರಬಹುದು. ಆ ಕಾಲದ ಈಜಿಪ್ಟ್‌ನಲ್ಲಿಯೂ ಇದೇ ಪದ್ಧತಿ ಇದ್ದಿತು. ಅವಶೇಷ.

ಹೆಂಗಸರು ನಡುವಿನಿಂದ ಕೆಳಗೆ ಲಂಗದಂತೆ ಕಾಣುವ ಉಡುಪನ್ನು ಧರಿಸಿ, ಮೇಲು ಮೈಯನ್ನು ಶಾಲಿನಿಂದ ಮುಚ್ಚಿಕೊಳ್ಳುತ್ತಿದ್ದರೆಂದು ತೋರುತ್ತದೆ. ಇಲ್ಲಿ ದೊರೆತ ವಿಗ್ರಹಗಳಲ್ಲಿ ನರ್ತಕಿಯದೊಂದು

ಚಿತ್ರ 4

ಸಿಂಧೂನದಿಯ ಅವಶೇಷಗಳಲ್ಲೊಂದು; ಸ್ಟಿಯಟೈಟ್ ಶಿಲ್ಪ ಕ್ರಿ. ಪೂ. 3000

ಹಿತ್ತಾಳೆ ಮೂರ್ತಿ ಇದೆ. ಇದು ಸಂಪೂರ್ಣವಾಗಿ ಬೆತ್ತಲೆಯಿರುವ ಹುಡುಗಿ. ಈ ಹುಡುಗಿಯ ಮುಖ ಚಹರೆಯನ್ನು ಪರಿಶೀಲಿಸಿದರೆ ನೀಗ್ರೋ ಬುಡಕಟ್ಟಿಗೆ ಸೇರಿದಂತೆ ಕಾಣುತ್ತದೆ. ಸಿಂಧೂ ಸಂಸ್ಕೃತಿಯ ವ್ಯಾಪಾರಿಗಳು ದೂರದೇಶಕ್ಕೆ ಹೋಗಿ ಹಿಂದಿರುಗಿ ಬರುವಾಗ ತಮ್ಮೊಡನೆ ಆಯಾ ದೇಶದ ನರ್ತಕಿಯರನ್ನು ಕರೆತರುವ ವಾಡಿಕೆ ಇದ್ದೀತು. ಇಂಥವರು ಆಯಾ ದೇಶದ ಪದ್ಧತಿಯನ್ನನುಸರಿಸಿ ಇರುತ್ತಿದ್ದರೆಂದು ಊಹಿಸಿಕೊಳ್ಳಬಹುದು.

ಕೇಶಾಲಂಕರಣದಲ್ಲಿ ವೈವಿಧ್ಯವಿದ್ದುದು ಅವಶೇಷಗಳಿಂದ ಸ್ಪಷ್ಟವಾಗುತ್ತದೆ. ಗಂಡಸರು ತಲೆಕೂದಲನ್ನು 'ಕ್ರಾಪಿ'ನಂತೆ ಕತ್ತರಿಸಿಕೊಂಡು, ಗಡ್ಡವನ್ನೂ ಓರಣವಾಗಿ ಕತ್ತರಿಸಿಕೊಂಡು, ಮೀಸೆಯನ್ನು ತೆಗೆಸಿಬಿಡುತ್ತಿದ್ದರು. ಉದ್ದನೆಯ ತಲೆಕೂದಲನ್ನು ಹಿಂಭಾಗದಲ್ಲಿ ಗಂಟು ಹಾಕಿಕೊಳ್ಳುವ ಪದ್ಧತಿಯೂ ಇದ್ದಿರಬಹುದು. ಹೆಂಗಸರು ಉದ್ದನೆಯ ಕೂದಲನ್ನು ತಲೆಯ ಮೇಲೆ ವಿಧವಿಧವಾಗಿ ಸಿಂಗರಿಸಿಕೊಳ್ಳುತ್ತಿದ್ದರು.

ಈ ಸಂಸ್ಕೃತಿಯ ಜನ ಅಲಂಕಾರ ಪ್ರಿಯರು. ಅವಶೇಷಗಳಲ್ಲಿ ಒಡವೆಗಳು ಹೇರಳವಾಗಿ ದೊರೆತಿವೆ. ಹಲವಾರು ಹಂತದ ಜನರ ಉಪಯೋಗಕ್ಕಾಗಿ ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಪ್ಪೆಚಿಪ್ಪು ಸುಟ್ಟ ಮಣ್ಣು ಇವುಗಳಿಂದ ಆಭರಣವನ್ನು ತಯಾರಿಸುತ್ತಿದ್ದರು. ನೆಲದ ಅಡಿಯಲ್ಲಿ ಹುದುಗಿದ್ದ ಬೆಳ್ಳಿ, ತಾಮ್ರ, ಹಿತ್ತಾಳೆ ಪಾತ್ರೆಗಳಲ್ಲಿ, ಒಡವೆಗಳನ್ನು ಇಟ್ಟಿರುವುದು ಹಾಗೆಹಾಗೆಯೇ ದೊರೆತಿವೆ. ಸರಗಳೂ, ಬಳೆಗಳೂ, ಓಲೆಗಳೂ, ನಡುಗೆಜ್ಜೆಗಳೂ, ಉಂಗುರಗಳೂ ಬೇರೆ ಬೇರೆಯೂ ದೊರೆತಿವೆಯೆನ್ನಿ. ಅಂತೂ ಬಗೆಬಗೆಯ ಒಡವೆಗಳನ್ನು ತಯಾರಿಸಲು ಹಲವಾರು ಲೋಹಗಳನ್ನು ಬಳಸುತ್ತಿದ್ದರು. ದೊರೆತಿರುವ ಒಡವೆಗಳಲ್ಲಿ ಬಂಗಾರದ ಗುಂಡು



ಚಿತ್ರ 5

ಸಿಂಧೂ ಸಂಸ್ಕೃತಿಯ ಇನ್ನೊಂದು ಅವಶೇಷ: ತಾಮ್ರದ ಪುತ್ಥಳಿ ನರ್ತಕಿಯದು. ಕ್ರಿ. ಪೂ. 3000 ವರ್ಷಗಳು

ಗಳನ್ನೂ 'ಜೇಡೈಟ್' ಎನ್ನುವ ಬೆಲೆ ಬಾಳುವ ಪದಾರ್ಥದ ಗುಂಡುಗಳನ್ನೂ ಪೋಣಿಸಿರುವ ದೊಡ್ಡ ಸರ ಸ್ವಾರಸ್ಯವಾದುದು; ಇದಕ್ಕೆ ಗೋಮೇದ (Agate) ಮತ್ತು ಸೂರ್ಯಕಾಂತ (Jasper)ದ ಪದಕಗಳಿವೆ. ತುಂಬ ಸೊಗಸಾಗಿರುವ ಈ ಸರ ಆ ಜನರ ಕಲಾದೃಷ್ಟಿಯನ್ನು ಸೂಚಿಸುತ್ತದೆ. ಮಣಿಗಳಿಗೆ ಒಳ್ಳೆ ಹೊಳಪಿರುವುದು, ಅವುಗಳನ್ನು ನೇರವಾಗಿ ಕೊರೆದಿರುವುದೂ ಆ ಜನರ ಕೌಶಲವನ್ನು ವ್ಯಕ್ತಪಡಿಸುತ್ತದೆ.

ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ದೊರತಿರುವ ಮಕ್ಕಳ ಆಟಿಗೆಗಳು ಸ್ವಾರಸ್ಯವಾದುವು. ಇವುಗಳ ಸಂಖ್ಯೆಯೇ ವಿಪುಲ! ಗೋಲಿಗಳು, ಬಂಡಿಗಳು, ಪೀಪಿಗಳು, ಆಟದ ಪಾತ್ರೆಗಳು, ಪ್ರಾಣಿಗಳು, ಪಕ್ಷಿಗಳು ಮೊದಲಾದುವೆಲ್ಲ ಮಕ್ಕಳ ಪ್ರಪಂಚಕ್ಕೆ ಸೇರಿದ ಅವಶೇಷಗಳು. ಈ ಜನಕ್ಕೆ ಮಕ್ಕಳ ಮೇಲೆ ತುಂಬ ಅಭಿಮಾನವಿದ್ದಿತೆನ್ನುವುದು ಸಹಜವಾಗಿ ಒದಗುವ ಸೂಚನೆ. ನರ್ತಕಿಯೊಬ್ಬಳ ಸುಂದರ ಭಂಗಿ ಹಿತ್ತಾಳೆಯ ಪ್ರತಿಮೆಯೊಂದರಲ್ಲಿ ಉಳಿದು ಬಂದಿದೆ. ಇಲ್ಲಿನ ಮುದ್ರಿಕೆಗಳಲ್ಲಿ ಹಲವಾರು ಬಗೆಯ ಸಂಗೀತ ವಾದ್ಯಗಳು ಮೂಡಿ ಬಂದಿವೆ. ಸಿಂಧೂ ಸಂಸ್ಕೃತಿಯ ಜನಕ್ಕೆ ಸಂಗೀತ, ನೃತ್ಯದಲ್ಲಿ ಆಸಕ್ತಿಯಿದ್ದಿತೆನ್ನಲು ಬೇರೆ ನಿದರ್ಶನ ಬೇಕೆ?

ಅವಶೇಷಗಳಲ್ಲಿ ಹಿತ್ತಾಳೆ ಕನ್ನಡಿಗಳೂ, ದಂತದ ಬಾಚಣಿಗೆಗಳೂ ಇವೆ. ಹೆಂಗಸರು ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿದ್ದರು. ಅವರು ಮುಖವನ್ನು ಸಿಂಗರಿಸಿಕೊಳ್ಳುತ್ತಿದ್ದ ಸಾಧನಗಳೂ ದೊರೆತಿವೆ. ತಾಮ್ರದ ಕಡ್ಡಿ, ಕೆಂಪು ಹುಡಿ, ಹಸಿರು ಮಣ್ಣು, ಕಾಡಿಗೆ ಕಡ್ಡಿ ಇವೆಲ್ಲ ಬಳಕೆಯಲ್ಲಿದ್ದುವು.

ಮನೆಯಲ್ಲಿ ಮರದ ಮಂಚಗಳೂ, ಬೆತ್ತದ ಮಣೆಗಳೂ, ಕಡ್ಡಿ ಚಾಪೆಗಳೂ ಇರುತ್ತಿದ್ದುವು. ಅಡಿಗೆ ಪಾತ್ರೆಗಳು ಮಣ್ಣಿನ ಪಾತ್ರೆಗಳೇ ಎಂದು ತಜ್ಞರು ಊಹಿಸಿದ್ದಾರೆ. ಸಿಂಧೂ ಸಂಸ್ಕೃತಿಯಲ್ಲಿ ಕುಂಬಾರ ಪ್ರಮುಖನಾದ ಕೆಲಸಗಾರ; ಊರಿನಲ್ಲಿ ಬೇರೆಯಾಗಿ ಒಂದು ಕುಂಬಾರ ಗೇರಿಯೇ ಇದ್ದಂತೆ ಸ್ಪಷ್ಟವಾಗುತ್ತದೆ. ಮಣ್ಣಿನ ಆಟಿಗೆಗಳು ಸಿಂಧೂ ಅವಶೇಷಗಳಲ್ಲಿ ಸ್ವಾರಸ್ಯವಾದುವು. ಬಗೆಬಗೆಯ ಆಟದ ಸಾಮಾನುಗಳು ಇಲ್ಲಿ ದೊರೆತಿವೆ. ಮಕ್ಕಳಿಗೆ ಈ ಜನ ತೋರಿಸಿದ ಅದರ ನಿರ್ವಿವಾದವಾದುದು. ವಾಹನಕ್ಕೆಂದು ಎತ್ತಿನ ಗಾಡಿಯನ್ನು ವಿಶೇಷವಾಗಿ ಬಳಸುತ್ತಿದ್ದರು. ಈ ಬಂಡಿಯ ಮಣ್ಣಿನ, ಹಿತ್ತಾಳೆಯ ಪ್ರತಿಕೃತಿಗಳು ಹಲವಾರು ದೊರೆತಿವೆ. ಮಕ್ಕಳು ಆಟವಾಡಲು ಬಂಡಿಗಳನ್ನು ಮಾಡಿದಾಗ ಎತ್ತುಗಳನ್ನೂ ತಲೆಯಾಡಿಸುವಂತೆ ಮಾಡುತ್ತಿದ್ದುದು ಕಂಡುಬಂದಿದೆ. ನಾಯಿ, ಕೋತಿ, ಖಡ್ಗಮೃಗ ಮೊದಲಾದ ಪ್ರಾಣಿಗಳ ಗೊಂಬೆಗಳೂ ದೊರೆತಿವೆ.

ಸಂಸ್ಕೃತಿಯ ನೆಲೆ

ಈ ಜನರ ಕಲಾಭಿರುಚಿ ಹೆಚ್ಚಿನದಾಗಿದ್ದಿತು. ನೃತ್ಯವಲ್ಲದೆ ಸಂಗೀತದಲ್ಲಿಯೂ ಅವರ ಪರಿಶ್ರಮ ಸ್ಪಷ್ಟವಾಗಿದೆ. ಮೃದಂಗಕ್ಕೂ ವೀಣೆ ಮೊದಲಾದ ತಂತೀ ವಾದ್ಯಗಳಿಗೂ ಸಿಂಧೂ ಸಂಸ್ಕೃತಿಯೇ ಮೂಲ. ಮನುಷ್ಯನೊಬ್ಬನ ಮೃಣ್ಮಯ ಮೂರ್ತಿಯಲ್ಲಿ ಕೊರಳಿನಿಂದ ಇಳಿಬಿದ್ದ ಡೋಲು ಕಾಣುತ್ತದೆ; ಮೃದಂಗದ ಪ್ರತಿಕೃತಿಗಳೂ ಇಲ್ಲಿ ದೊರೆತಿವೆ. ಕರತಾಳವೂ ಬಳಕೆಯಲ್ಲಿದ್ದಿತು. ಶಿಲ್ಪದಲ್ಲಿ ಅವರಿಗಿದ್ದ ಜಾಣ್ಮೆ ಅದ್ಭುತವೆಂದೇ ಹೇಳಬೇಕು; ಪ್ರಾಣಿಗಳಾಗಲೀ, ಮನುಷ್ಯರಾಗಲೀ, ದೇವತಾ ಮೂರ್ತಿಗಳಾಗಲೀ ಅವರ ಕೈ ಕೆಲಸ

ನೈಜವಾದುದು, ಸುಂದರವಾದುದು. ಮಣ್ಣಿನ ಮೂರ್ತಿಗಳನ್ನು ಮೈ ದುಂಬಿಸುವ ಕಲೆಯಲ್ಲಿ ಅವರು ಸಿದ್ಧ ಹಸ್ತರು.

ಧರ್ಮದಲ್ಲಿ ಅವರ ನಿಲುವು ಏನಿದ್ದಿತು ಎಂಬುದು ವಿವಾದಾಸ್ಪದ ವಾಗಿದೆ. ನಗರದ ಅವಶೇಷಗಳಲ್ಲಿ ಊರಿಗೊಂದು ಗುಡಿ ಇದ್ದ ಸೂಚನೆಯಿಲ್ಲ. ಇಲ್ಲಿ ದೊರೆತ ಮೃಣ್ಮಯ ಮೂರ್ತಿಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಈ ಜನರಲ್ಲಿ ಮಾತೃದೇವತೆಯ ಆರಾಧನೆ ಬಲವಾಗಿದ್ದಿತೆಂದು ಸೂಚಿಸಿದ್ದಾರೆ. ಇದಲ್ಲದೆ ವೃಕ್ಷ ಪೂಜೆ, ನಾಗಪೂಜೆ, ಪಶುಬಲಿ ಇವೂ ಬಳಕೆಯಲ್ಲಿದ್ದಂತೆ ತೋರುತ್ತದೆ. ಒಂದು ಸಣ್ಣ ಫಲಕದಲ್ಲಿ ಮಧ್ಯೆ ತ್ರಿಮುಖ ದೇವತೆಯೊಬ್ಬನ ಸುಖಾಸೀನ ಚಿತ್ರವೂ, ಸುತ್ತಲೂ ಆನೆ, ಹುಲಿ, ಎಮ್ಮೆ, ಖಡ್ಗಮೃಗ ಗಳ ಚಿತ್ರಗಳೂ ಇರುವುದರಿಂದ ಇದು ಪಶುಪತಿ ಶಿವನ ಪ್ರಾಚೀನ ಚಿತ್ರಣವೆಂದು ಕೆಲವು ಪಂಡಿತರು ಊಹಿಸಿದ್ದಾರೆ. ಶಿವಪೂಜೆ ಬಳಕೆಯಲ್ಲಿ ಇದ್ದಿತೆನ್ನುವುದು ನಿಜವಾದರೂ ಅವರು ಲಿಂಗಪೂಜಕರಲ್ಲ; ಶಿವನ ಮೂರ್ತಿಯನ್ನೇ ಪೂಜಿಸುತ್ತಿದ್ದ ಜನ. ನರಬಲಿಯೂ ಆಗಾಗ ವಾಡಿಕೆಯಲ್ಲಿದ್ದಿರಬಹುದು.

ಸತ್ತವರನ್ನು ಊರಿನ ಹೊರಗೆ ನದಿಯ ದಡದಲ್ಲಿ ಸುಟ್ಟು, ಬೂದಿಯನ್ನೂ ಅಸ್ಥಿಯನ್ನೂ ತಂದು ಮನೆಯ ಆವರಣದಲ್ಲಿ ಹೂಗಿಡುತ್ತಿದ್ದರೆಂದು ಊಹಿಸಿಕೊಳ್ಳಬಹುದು. ಅವರ ಶವಸಂಸ್ಕಾರವಿಧಾನಗಳ ಬಗ್ಗೆ ಸಾಕಷ್ಟು ಸಾಕ್ಷ್ಯವಿಲ್ಲ. ಪಾರ್ಥಿವ ಶರೀರವನ್ನು ಕೆಡದಂತೆ ಉಳಿಸಿಕೊಳ್ಳುವ ಕಾತರ ಆ ಕಾಲದ ಸುಮೇರ್, ಈಜಿಪ್ಟ್ ಮೊದಲಾದ ಇತರ ಸಂಸ್ಕೃತಿಗಳಲ್ಲಿ ಕಾಣ ಬರುತ್ತದೆ; ಆದರೆ ಈ ಕಾತರ ನಮ್ಮ ಸಿಂಧೂ ಸಂಸ್ಕೃತಿಯ ಜನರಿಗಿರಲಿಲ್ಲ. ಈ ಸಂಸ್ಕೃತಿಯ ಅವಶೇಷಗಳಲ್ಲಿ ನಿರ್ದಿಷ್ಟ ರುದ್ರಭೂಮಿಯಿದ್ದುದಾಗಲೀ, ಸಮಾಧಿಮಂದಿರಗಳಿದ್ದಂದಾಗಲೀ

ವ್ಯಕ್ತವಾಗುವುದಿಲ್ಲ. ಹರಪ್ಪಾದಲ್ಲಿ ಮೂಳೆ. ಕಪಾಲಗಳಿಂದ ತುಂಬಿದ ಗಡಿಗೆಗಳು ನೂರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ದೊರೆತಿವೆ. ಈ ಗಡಿಗೆಗಳನ್ನು ನೆಲದಲ್ಲಿ ಹೂಳುತ್ತಿದ್ದ ಪದ್ಧತಿ ಇದ್ದಿತು. ಹೆಣಗಳನ್ನು ಸುಡುವುದೇ ತುಂಬ ಬಳಕೆಯಲ್ಲಿದ್ದ ಪದ್ಧತಿಯೆನ್ನುವುದ ರಲ್ಲಿ ಸಂಶಯವಿಲ್ಲ.

ಮೊಹೆಂಜೊದಾರೋ ನಗರ

ಸಿಂಧೂ ಸಂಸ್ಕೃತಿಯ ಹರವಿನಲ್ಲಿ ಪಂಜಾಬು ಪ್ರಾಂತ್ಯದ ಹರಪ್ಪಾ ಮತ್ತು ಸಿಂಧ್ ಪ್ರದೇಶದ ಮೊಹೆಂಜೊದಾರೋ ಇವು ಮುಖ್ಯ ನಗರಗಳಾಗಿದ್ದುವು. 5,000 ವರ್ಷಗಳ ಹಿಂದೆ ನಗರ ಜೀವನಕ್ಕೆ ಸಂಬಂಧಿಸಿದ ಹಲವಾರು ವಿವರಗಳು ಈ ನಗರಗಳ ಅವಶೇಷ ಗಳಿಂದಲೇ ಸ್ಪಷ್ಟವಾಗುತ್ತವೆ. ಹರಪ್ಪಾ ಅವಶೇಷಗಳಿಗಿಂತಲೂ ಮೊಹೆಂಜೊದಾರೋ ಅವಶೇಷಗಳು ಸಮಗ್ರವಾಗಿವೆ, ಸ್ವಾರಸ್ಯ ವಾಗಿವೆ.

ಮೊಹೆಂಜೊದಾರೋ ನಗರದ ವಿನ್ಯಾಸ, ವ್ಯವಸ್ಥೆಗಳು ಹೇಗಿದ್ದು ವೆಂದು ಊಹಿಸಿಕೊಳ್ಳಲು ಸಾಕಷ್ಟು ಸಾಕ್ಷ್ಯಗಳಿವೆ. ಮಟ್ಟಸವಾದ ಈ ಪ್ರದೇಶದಲ್ಲಿ ನಗರ ನಿರ್ಮಾಣ ಅಚ್ಚುಕಟ್ಟಾಗಿದ್ದಿತು. ಈ ಪ್ರದೇಶವು ಸಿಂಧೂನದಿ ಮತ್ತು ಮತ್ತೊಂದು ನದಿಯ ನಡುವೆ ಇದ್ದು 'ದ್ವೀಪ' ವೆನಿಸಿಕೊಂಡಿದ್ದಿತು. ನದಿಯ ಪ್ರವಾಹದಿಂದ ನಗರಕ್ಕೆ ತೊಂದರೆ ಆಗದಿರಲೆಂದು ನದಿಗೆ ಅಡ್ಡಕಟ್ಟೆಯನ್ನು ಕಟ್ಟಿದ್ದರು. ಊರಿನ ಸುತ್ತ ಬಲವಾದ ಮಣ್ಣುಕೋಟೆಗಳೂ ಇದ್ದುವು. ಈ ನಗರವಿದ್ದ ದಿಬ್ಬವು ಸುಮಾರು ಒಂದು ಮೈಲಿ ಚದರದ ಅವಶೇಷಗಳಲ್ಲಿ ಅಡಕವಾಗಿದೆ.

ಈ ನಗರದ ರಸ್ತೆಗಳು ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ

ವಾಗಿದ್ದು, ಇಡೀ ಪ್ರದೇಶವನ್ನು ಹಲವಾರು 'ಬ್ಲಾಕ್'ಗಳಾಗಿ ವಿಭಜಿಸಿದ್ದರು. ಹೆಚ್ಚುಕಡಿಮೆ ಈ 'ಬ್ಲಾಕ್' ಗಳೂ ಒಂದೇ ವಿಸ್ತಾರದವು, ಸಮಕೋಣದ ಆಯತಾಕಾರದವು. ಪೂರ್ವ-ಪಶ್ಚಿಮವಾಗಿ 800, ಅಡಿ ಉತ್ತರ-ದಕ್ಷಿಣವಾಗಿ 1200 ಅಡಿ ವಿಸ್ತೀರ್ಣವಿದ್ದ ಈ ನಗರದಲ್ಲಿ ಏಳು 'ಬ್ಲಾಕ್' ಗಳನ್ನು ನಿರ್ದೇಶಿಸಿದ್ದಾರೆ. ರಸ್ತೆಗಳು ವಿಶಾಲವಾಗಿದ್ದುವು. ದೊಡ್ಡ ದೊಡ್ಡ ರಸ್ತೆಗಳು ಸುಮಾರು 30 ಅಡಿ ಅಗಲವಾಗಿದ್ದುವು. ಮನುಷ್ಯರೂ, ಗಾಡಿಗಳೂ. ಸರಾಗವಾಗಿ ಸಾಗಿಹೋಗಬಹುದಾಗಿದ್ದಿತು. ಈ ದೊಡ್ಡ ರಸ್ತೆಗಳನ್ನು ಸಮನಾಗಿ ಹಾದುಹೋಗುವ ಬೀದಿಗಳು ಸುಮಾರು 18 ಅಡಿ ಅಗಲವಾಗಿದ್ದವು.

ಕೆಲವು ಕಡೆ ರಸ್ತೆಗಳ ಮೇಲೆ ಜೇಡಿ ಮಣ್ಣನ್ನು ಹರಡಿ ಅದರ ಮೇಲೆ ಇಟ್ಟಿಗೆ ಚೂರುಗಳನ್ನು ಹೆಂಚಿನ ಬಕ್ಕರಿಗಳನ್ನು ಬಲವಾಗಿ ಕೂಡಿಸುವ ಪದ್ಧತಿ ಇದ್ದಿತು. ರಸ್ತೆಗಳು ಚೊಕ್ಕಟವಾಗಿದ್ದುವೆಂದೂ ಧೂಳನ್ನು ಅಡಗಿಸಲು ಆಗಾಗ ರಸ್ತೆಗಳ ಮೇಲೆ ನೀರನ್ನು ಚೆಲ್ಲುತ್ತಿದ್ದರೆಂದೂ ಊಹಿಸಿಕೊಳ್ಳಲು ಅವಕಾಶವಿದೆ.

ದೊಡ್ಡ ರಸ್ತೆಗಳಿಗಿಂತಲೂ ಚಿಕ್ಕ ಬೀದಿಗಳು ಅಚ್ಚುಕಟ್ಟಾಗಿ ಉಳಿದು ಬಂದಿವೆ. ಬಹುಶಃ ಬೀದಿಗಳಲ್ಲಿ ಗಾಡಿಗಳ, ಮನುಷ್ಯರ ಓಡಾಟ ಅಷ್ಟಾಗಿ ಇರಲಿಲ್ಲವಾದುದರಿಂದ ಇವುಗಳಿಗೆ ಹೆಚ್ಚಿನ ಗಾಸಿ ಒದಗಿಲ್ಲ. ಬೀದಿಯ ಇಕ್ಕೆಲಗಳಲ್ಲಿಯೂ ಮನೆಗಳನ್ನು ಕಟ್ಟುವ ಪದ್ಧತಿ ಇದ್ದುದೂ ಸ್ಪಷ್ಟವಾಗಿದೆ. ಮನೆಗೂ ಬೀದಿಗೂ ನಡುವೆ ಎತ್ತರದ ಇಟ್ಟಿಗೆ ಗೋಡೆಗಳಿದ್ದಂತೆ ತೋರುತ್ತದೆ. ಕೆಲವು ರಸ್ತೆಗಳಲ್ಲಿ ಇಂಥ ಗೋಡೆಗಳ ಎತ್ತರ 25 ಅಡಿಗಳಷ್ಟು. ಈ ಗೋಡೆಗಳಲ್ಲಿ ಬಾಗಿಲು ಬಿಟ್ಟು ಇನ್ನೇನು ಇರುತ್ತಿರಲಿಲ್ಲ; ಕಿಟಕಿಗಳಿದ್ದುದಕ್ಕೆ ನಿದರ್ಶನವಿಲ್ಲ! ಎರಡೂ ಕಡೆ ಹೀಗೆ ಗೋಡೆ

ಗಳಿದ್ದು ನಡುವೆ ಬೀದಿಯ ಮೇಲೆ ಓಡಾಡುವ ಜನರ ಮನೋವೃತ್ತಿ ಹೇಗಿದ್ದಿತೋ!

ಮನೆಗಳನ್ನು ಕಟ್ಟಲು ಚೆನ್ನಾಗಿ ಸುಟ್ಟ ಇಟ್ಟಿಗೆಗಳನ್ನು ಬಳಸುತ್ತಿದ್ದರು. ಸಾಮಾನ್ಯವಾಗಿ ಒಂದೊಂದು ಇಟ್ಟಿಗೆ 11 ಅಂಗುಲ ಉದ್ದವಿದ್ದು $5\frac{1}{4}$ ಅಂಗುಲ ಅಗಲವಿರುತ್ತಿದ್ದಿತು; ಅದರ ದಪ್ಪ ಎರಡೂ ಕಾಲು ಅಂಗುಲದಿಂದ ಎರಡೂಮುಕ್ಕಾಲು ಅಂಗುಲದವರೆಗೂ ಇರುತ್ತಿದ್ದಿತು. ಪ್ರಾಚೀನ ಯುಗದಲ್ಲಿ ಇಷ್ಟು ಉಪಯುಕ್ತವಾದ ಪ್ರಮಾಣದಲ್ಲಿ ಇಟ್ಟಿಗೆಗಳನ್ನು ಮಾಡಿ ಅವನ್ನು ಸುಡುತ್ತಿದ್ದುದು ಆಶ್ಚರ್ಯವೇ. ಮೊಹೆಂಜೊದಾರೋ ನಗರವಿದ್ದ ಕಡೆ ಕಲ್ಲು ದೊರೆಯುವುದು ಕಷ್ಟವಾಗಿದ್ದು, ನದೀಪಕ್ಕದ ಜೇಡಿಮಣ್ಣು ಇಟ್ಟಿಗೆಗಳ ತಯಾರಿಕೆಗೆ ಅನುಕೂಲವಾಗಿದ್ದಿತು.

ಮನೆಗಳ ವಿನ್ಯಾಸ

ಇಟ್ಟಿಗೆ ಗೋಡೆಗಳ ಮೇಲೆ ಒಳಗೂ ಹೊರಗೂ ಮಣ್ಣಿನ ಲೇಪನವನ್ನು ಬಳಿಯುತ್ತಿದ್ದರು. ಮನೆಗಳು ಮುಖ್ಯವಾಗಿ ವಾಸಕ್ಕೆ ಅನುಕೂಲವಾಗಿರಬೇಕು, ಅಲಂಕರಣವು ಅನಗತ್ಯ ಎನ್ನುವ ಕಲ್ಪನೆ ಆ ಕಾಲದಲ್ಲಿದ್ದಂತೆ ತೋರುತ್ತದೆ. ಮನೆಗಳಲ್ಲಿ ಕಿಟಕಿಗಳು ಕೂಡ ಇದ್ದಂತೆ ತೋರುವುದಿಲ್ಲ. ಬಾಗಿಲುಗಳು ಸುಮಾರು ಮೂರು ಅಡಿ ನಾಲ್ಕು ಅಂಗುಲ ಇರುತ್ತಿದ್ದುವು. ಪಕ್ಕದ ಓಣಿಯಿಂದ ಮನೆಯ ಹೆಬ್ಬಾಗಿಲನ್ನು ಸೇರಬೇಕಾಗಿದ್ದುದು ಈ ಮನೆಗಳ ವೈಶಿಷ್ಟ್ಯ.

ಸಾಮಾನ್ಯವಾಗಿ ಸಣ್ಣಮನೆಯ ವಿಸ್ತಾರ 30×27 ಅಡಿ ಇರುತ್ತಿದ್ದಿತು; ನಾಲ್ಕೈದು ಕೋಣೆಗಳಿರುತ್ತಿದ್ದುವು. ದೊಡ್ಡ ಮನೆಗಳೆಂದರೆ ಇದಕ್ಕೆ ಎರಡರಷ್ಟು ವಿಸ್ತಾರವಾಗಿರುತ್ತಿದ್ದುವು; ಇಮ್ಮಡಿ

ಸಂಖ್ಯೆಯ ಕೋಣೆಗಳಿರುತ್ತಿದ್ದುವು. 30 ಕೋಣೆಗಳಿದ್ದ ಮನೆಗಳೂ ಇದ್ದುದಕ್ಕೆ ನಿದರ್ಶನವಿದೆ. ಮರದ ತೊಲೆಗಳಿಂದ ಚಾವಣಿಯನ್ನು ನಿಲ್ಲಿಸುತ್ತಿದ್ದರೆಂದು ಊಹಿಸಿಕೊಳ್ಳಬಹುದು. ಎರಡು ಮನೆಗಳ ನಡುವೆ ಸ್ವಲ್ಪ ಖಾಲೀ ಜಾಗವಿರುತ್ತಿದ್ದುದು ಸ್ಪಷ್ಟವಾಗಿದೆ. ಮಹಡಿ ಇದ್ದ ಮನೆಗಳಲ್ಲಿ ಮೆಟ್ಟಿಲುಗಳ ಅವಶೇಷವನ್ನೂ ಕಾಣಬಹುದು.

ಮನೆಯ ವಿನ್ಯಾಸದಲ್ಲಿ ನಡುಮನೆ (ಹಜಾರ) ಕೇಂದ್ರ ಸ್ಥಾನ ದಲ್ಲಿದ್ದಿತು. ಪ್ರತಿಯೊಂದು ಮನೆಯಲ್ಲಿಯೂ ಬಚ್ಚಲು ಮನೆ ಯಿದ್ದುದು ಸ್ವಾರಸ್ಯವಾದ ವಿವರ. ಈ ಸ್ನಾನದ ಮನೆಗಳಲ್ಲಿ ನೆಲವನ್ನು ಗಟ್ಟಿಯಾಗಿ, ಓರಣವಾಗಿ ಮಾಡಿದ್ದುದೂ, ಬೀದಿಗೆ ನೀರು ಹರಿದು ಹೋಗುವಂತೆ ಚರಂಡಿಗಳಿದ್ದುದೂ ಸ್ಪಷ್ಟವಾಗಿದೆ. ಸ್ನಾನದ ಮನೆಯ ನೆಲದ ಮಟ್ಟ ಒಂದು ಮೂಲೆಯಲ್ಲಿದ್ದ ಚರಂಡಿಯ ಕಡೆ ಇಳಿಜಾರಾಗಿರುತ್ತಿದ್ದಿತು. ತಗ್ಗಿಗೆ ನೀರನ್ನು ಹರಿಸಲು ಸುಟ್ಟಮಣ್ಣಿನ ಕೊಳವೆಗಳನ್ನೂ ಅವರು ಬಳಸುತ್ತಿದ್ದರು. ಒಳಚರಂಡಿಗಳ ವ್ಯವಸ್ಥೆ ಈ ಪುರಾತನ ನಗರದಲ್ಲಿದ್ದುದು ಸೋಜಿಗ ವನ್ನುಂಟುಮಾಡುತ್ತದೆ. ರಸ್ತೆಗಳ ಕೆಳಗೆ ಮನೆಯಿಂದ ಬಂದ ನೀರನ್ನು ಒಯ್ಯುವ ಚರಂಡಿಗಳಿದ್ದುವು. ಮುಖ್ಯ ರಸ್ತೆಗಳಲ್ಲಿ ಈ ಚರಂಡಿಗಳ ಮೇಲೆ ದೊಡ್ಡ ದೊಡ್ಡ ಇಟ್ಟಿಗೆಗಳನ್ನು ಇಟ್ಟು ಮುಚ್ಚುತ್ತಿದ್ದರು; ಬೇಕೆಂದಾಗ ಚರಂಡಿಯನ್ನು ತೊಳೆಯು ವುದಕೆ ಅನುಕೂಲವಾಗಿದ್ದಿತು.

ಕೊಳ, ಬಾವಿ

ಪ್ರತಿಮನೆಯಲ್ಲಿಯೂ ಇದ್ದ ಸ್ನಾನದ ಕೋಣೆಯಲ್ಲದೆ ಊರಿನಲ್ಲಿ ದೊಡ್ಡ ಕೊಳವೊಂದಿದ್ದಿತು. ಅದರ ಉದ್ದ 40 ಅಡಿ. ಅಗಲ23 ಅಡಿ ಆಳ 8 ಅಡಿ. ಕೊಳದ ಮೇಲ್ಭಾಗದಲ್ಲಿ ನಾಲ್ಕು ಕಡೆ ಏಳಡಿ

ಅಗಲದ ಓಣಿಯೂ ಅದರ ಪಕ್ಕದಲ್ಲಿ ಹಲವಾರು ಕೋಣೆಗಳೂ ಇದ್ದುವು. ಕೊಳದ ಕಟ್ಟಡದಲ್ಲಿ ನೀರು ಸೇರದಂತೆ ಡಾಮರ (ಬಿಟ್ಯುಮನ್) ವನ್ನು ಗಾರೆ ಗಚ್ಚಿನಲ್ಲಿ ಸೇರಿಸಿರುವುದನ್ನು ಕಾಣಬಹುದು. ಸಮೀಪದಲ್ಲಿದ್ದ ಮೂರು ಬಾವಿಗಳಿಂದ ಕಾಲಕಾಲಕ್ಕೆ ಈ ಕೊಳದಲ್ಲಿ ನೀರು ತುಂಬಿಸುತ್ತಿದ್ದರು; ಕೊಳದ ಒಂದು ಮೂಲೆಯಲ್ಲಿ ಇದ್ದ ಸುರಂಗದಿಂದ ನೀರನ್ನು ಸಂಪೂರ್ಣವಾಗಿ ಕೊಳದಿಂದ ಹೊರಗೆ ಹಾಯಿಸುವ ವ್ಯವಸ್ಥೆಯೂ ಇದ್ದಿತು. ಈ ಸುರಂಗ ಚಚ್ಚೌಕವಾಗಿದ್ದು, ಅದರ ಮಾರ್ಗದಲ್ಲಿ ಒಬ್ಬ ಮನುಷ್ಯ ನಡೆದು ಹೋಗುವಷ್ಟು ಎತ್ತರವಾಗಿದೆ.

ಈ ನಗರದ ಇನ್ನೊಂದು ಮುಖ್ಯ ವಿವರವೆಂದರೆ ಬಾವಿಗಳು. ಸಾವಿರಾರು ವರ್ಷಗಳ ಹಿಂದೆ ಸಿದ್ಧವಾದ ಈ ಬಾವಿಗಳು ಇಂದಿಗೂ ಅಚ್ಚುಕಟ್ಟಾಗಿರುವುದು ವಿಶೇಷ. ಈ ಪ್ರದೇಶದಲ್ಲಿ ಖನನ, ಅಧ್ಯಯನಗಳನ್ನು ನಡೆಸಿದ ನಮ್ಮ ಕಾಲದ ಜನರು ಈ ಬಾವಿಗಳಿಂದಲೇ ನೀರನ್ನು ಬಳಸಿದರು! ಬಾವಿಗಳ ಕಟ್ಟಡ ಅಷ್ಟು ಚೆನ್ನಾಗಿದೆ. ಅವುಗಳಿಗೆಂದೇ ವಿಶೇಷ ರೀತಿಯಲ್ಲಿ ಇಟ್ಟಿಗೆಗಳನ್ನು ಮಾಡಿದ್ದಾರೆ. ಹಲವಾರು ಮನೆಗಳಲ್ಲಿ ಸ್ವಂತ ಉಪಯೋಗಕ್ಕೆಂದು ಬಾವಿಗಳನ್ನು ಕಟ್ಟಿಕೊಂಡಾಗಲೂ, ಬೇರೆಯವರು ಬಳಸಲು ಅನುಕೂಲವಾಗುವಂತೆ ಬೀದಿಯಿಂದ ಬಾವಿಗೆ ಓಣಿಯನ್ನು ಬಿಟ್ಟಿರುವುದು ಗಮನಾರ್ಹವಾದ ವಿವರ. ಇಂಥ ಬಾವಿಗಳ ಸುತ್ತಲೂ ಇಟ್ಟಿಗೆಗಳಿಂದಲೇ ಕಟ್ಟಿದ ಜಗುಲಿಗಳನ್ನು ಕಾಣಬಹುದು. ಬಾವಿಗಳು ಜನಜೀವನದ ಕೇಂದ್ರವಾಗಿದ್ದಿರಬೇಕು.

ಮನೆಯ ಹೊರಗೆ ಬೀದಿಗೆ ಸೇರಿದಂತೆ ಆಯತಾಕಾರದ ಕಸದ ತೊಟ್ಟಿಗಳಿರುತ್ತಿದ್ದುವು. ಮನೆಯವರು ಕಸಕಡ್ಡಿಯ ಇದರೊಳಗೇ ಹಾಕುತ್ತಿದ್ದರೆಂದೂ, ಊರಿನ ಆಡಳಿತ ವರ್ಗದವರು

ಈ ಕಸವನ್ನು ಊರಿನಾಚೆ ಸಾಗಿಸುವ ವ್ಯವಸ್ಥೆ ಮಾಡುತ್ತಿದ್ದರೆಂದೂ ಊಹಿಸಬಹುದು. ಅಂತೂ ಮಹೆಂಜೊದಾರೋ ನಗರದಲ್ಲಿ ನೈರ್ಮಲ್ಯಕ್ಕೆ ಹೆಚ್ಚಿನ ಪುರಸ್ಕಾರವಿದ್ದುದು ಅವಶೇಷಗಳಿಂದ ಸ್ಪಷ್ಟ ವಾಗುತ್ತದೆ. ಮನೆಗಳಲ್ಲಿನ ಓರಣ, ರಸ್ತೆಗಳ ಅಚ್ಚುಕಟ್ಟು, ಕೊಳದ ವ್ಯವಸ್ಥೆ, ಬಾವಿಗಳ ಸುತ್ತ ನೆಲದ ಗುಣ ಇವನ್ನೆಲ್ಲಾ ಇಂದಿಗೂ ಅಲ್ಲಿ ನಿಂತು ಕಲ್ಪಿಸಿಕೊಳ್ಳಬಹುದು.

ಈ ಪ್ರದೇಶದಲ್ಲಿ ಶೋಧ ನಡೆಸಿದ ಪೌರ್ವಾತ್ಯ, ಪಾಶ್ಚಾತ್ಯ ಪಂಡಿತರು ಇಷ್ಟು ಪುರಾತನ ಸಂಸ್ಕೃತಿಯಲ್ಲಿ ಕಾಣಬಹುದಾದ ಆಧುನಿಕತೆಗೆ ಬೆರಗಾಗಿದ್ದಾರೆ. ನಗರ ನಿರ್ಮಾಣಕ್ಕೆ ಮೊಹೆಂಜೊ ದಾರೋ ಆದರ್ಶವಾಗಿದೆ ಎಂದು ಅವರ ಅಭಿಮತ.

ಶವಸಂಸ್ಕಾರ

ಪ್ರಾಚೀನ ಜನಾಂಗಗಳಲ್ಲಿ ಶವಸಂಸ್ಕಾರವಿಧಿ ಸ್ವಾರಸ್ಯವಾದುದು. ಹುಟ್ಟು ಸಾವು ಎರಡನ್ನೂ ಅದ್ಭುತ ಪ್ರಸಂಗಗಳೆಂದು ಬಗೆದು. ಅವುಗಳ ಬಗ್ಗೆ ವಿಚಿತ್ರವಾದ ಕಲ್ಪನೆಗಳನ್ನೂ ಸಂಸ್ಕಾರಗಳನ್ನೂ ಮೂಡಿಸಿಕೊಂಡಿರುತ್ತಿದ್ದರು. ನಮ್ಮ ದೇಶದಲ್ಲಿ ಐದಾರು ಸಾವಿರ ವರ್ಷಗಳ ಹಿಂದೆ ಸಿಂಧೂ ಸಂಸ್ಕೃತಿಯು ಊರ್ಜಿತ ವಾಗಿದ್ದಾಗ ಬಳಕೆಯಲ್ಲಿದ್ದ ಶವಸಂಸ್ಕಾರವಿಧಿಗಳು ಯಾವುವು?

ಇದರಬಗ್ಗೆ ಸ್ಪಷ್ಟವಾದ, ಖಚಿತವಾದ ವಿವರಗಳೇನೂ ದೊರೆತಿಲ್ಲ ವಾದರೂ ಅವಶೇಷಗಳ ಆಧಾರದಮೇಲೆ ಕೆಲವಾರು ಊಹೆಗಳನ್ನು ಮಾಡಿದ್ದಾರೆ. ಈಗ ಹರಪ್ಪಾ ಮ್ಯೂಸಿಯಂ ಇರುವ ಸ್ಥಳದಿಂದ ಸುಮಾರು 150 ಗಜ ದೂರದಲ್ಲಿ ಪ್ರಾಚೀನವಾದ ಸ್ಮಶಾನ ವಿದ್ದುದು 1927ರಲ್ಲಿ ಪತ್ತೆಯಾಯಿತು. ಆ ಕಡೆ ಪ್ರತಿ ವರ್ಷವೂ ಮಳೆಗಾಲದಲ್ಲಿ ಅಗಾಧವಾದ ಪ್ರವಾಹ ಬಂದು ಗುಡ್ಡಗಳನ್ನೂ

ಕರಗಿಸಿಬಿಡುತ್ತದೆ; ಭೂಮಿಯ ಮೇಲು ಪದರಗಳನ್ನು ಕೊಚ್ಚಿಸಿ ಬಿಡುತ್ತದೆ. ಸಾವಿರಾರು ವರ್ಷಗಳಿಂದ ಇದು ನಡೆದು 1927ರ ಮಳೆಗಾಲ ನಿಂತಾಗ ಕೆಲವು ಮಣ್ಣಿನ ಗಡಿಗೆಗಳ ಮೇಲ್ಭಾಗ ಬಯಲಾಯಿತು; ಭೂಮಿಯಲ್ಲಿ ಹುದುಗಿದ್ದ ಈ ಗಡಿಗೆಗಳು ಆಗ ಬೆಳಕಿಗೆ ಬಂದುವು.

ಲಾಹೋರಿನ ಪ್ರಾಕ್ತನ ಸರ್ವೇಕ್ಷಣದ ಮುಖ್ಯಾಧಿಕಾರಿಯಾಗಿದ್ದ ಎಮ್. ಎಸ್ ವತ್ಸ ಮತ್ತು ಅವರ ಸಹೋದ್ಯೋಗಿಯಾಗಿದ್ದ ಕೆ. ಎನ್ ಶಾಸ್ತ್ರಿ ಇವರು ಈ ಗಡಿಗೆಗಳನ್ನು ಪರಿಶೀಲಿಸಿ ಇವು ಶವಕರಂಡಗಳೆಂದು ಪತ್ತೆ ಮಾಡಿದರು. 1937 ರಲ್ಲಿ ಇದೇ ರೀತಿಯ ಇನ್ನೊಂದು ಪ್ರದೇಶವೂ ಸ್ವಾರಸ್ಯವಾದ ಸಂಶೋಧನೆಗಳಿಗೆ ಎಡೆಮಾಡಿಕೊಟ್ಟಿತು. ಮೊದಲ ಪ್ರದೇಶವನ್ನು Cemetery H ಎಂದೂ ಎರಡನೆಯದನ್ನು Cemetery R 37 ಎಂದೂ ನಿರ್ದೇಶಿಸಿದರು. ಎರಡನೆಯದು ಮೊದಲನೆಯದಕ್ಕಿಂತ ಪ್ರಾಚೀನವಾದುದು ಎಂದು ತಿಳಿದು ಬಂದಿತು.

ಹರಪ್ಪಾ ಸ್ಮಶಾನದಲ್ಲಿ ಎರಡು ಸ್ತರಗಳು ಕಾಣುತ್ತವೆ. ಮೇಲಿನ ಸ್ತರದಲ್ಲಿ 135 ಸಮಾಧಿಕರಂಡಗಳು ದೊರೆತವು. ಕೆಳಗಿನ ಸ್ತರದಲ್ಲಿ ಹೆಣಗಳನ್ನು ಹಾಗೆಯೇ ಹೂಳಿದ್ದರು; ಹತ್ತಿರದಲ್ಲಿ ಮಡಕೆ ಚೂರುಗಳಿದ್ದುವು. ಸಮಾಧಿ ಕರಂಡಗಳು ಮೂರು ಆಕಾರಗಳಲ್ಲಿದ್ದುವು; 9.75 ಅಂಗುಲದಿಂದ 23.75 ಅಂಗುಲಗಳವರೆಗೆ ಈ ಕರಂಡಗಳ ಎತ್ತರ ಇದ್ದಿತು. ದುಂಡನೆಯ ಕರಂಡಗಳ ಮೇಲೆ ಚಿತ್ರಮೂಡಿಸಿದ್ದುದೂ ವ್ಯಕ್ತವಾಯಿತು. ಕರಂಡವು ಭದ್ರವಾಗಿ ನಿಲ್ಲುವಂತೆ ಅದರ ಅಡಿಯಲ್ಲಿ ಪೀಠವನ್ನೂ ಮಾಡಿ, ಸುತ್ತಲೂ ಇಟ್ಟಿಗೆಗಳನ್ನು ಇಡುವ ಪದ್ಧತಿ ಇದ್ದಿತು. ಈ ಮಡಕೆಗಳನ್ನು ಮಾಡುವಾಗ ಕುಂಬಾರ ಗಾಲಿಯನ್ನು ಬಳಸಿದುದು

ಸ್ಪಷ್ಟವಾಗಿದೆ.

ಶವಕರಂಡದಲ್ಲಿ ಒಂದು ಕಡೆ ತಲೆಬುರುಡೆಯನ್ನೂ ಇನ್ನೊಂದು ಕಡೆ ಕಾಲಿನ ಮತ್ತು ತೋಳಿನ ಮೂಳೆಗಳನ್ನೂ ನಿಲ್ಲಿಸುವ ಪದ್ಧತಿಯಿದ್ದಂತೆ ತೋರುತ್ತದೆ. ಹೆಣದ ಎಲ್ಲ ಮೂಳೆಗಳನ್ನೂ ಕರಂಡದಲ್ಲಿ ಇಡುತ್ತಿರಲಿಲ್ಲ; ಇಡುವುದು ಸಾಧ್ಯವೂ ಇರಲಿಲ್ಲ. ಕರಂಡದಲ್ಲಿನ ಮೂಳೆಗಳನ್ನೆಲ್ಲಾ ತೆಗೆದು ಅಸ್ಥಿಪಂಜರವನ್ನು ಮೊದಲಿನಂತೆ ಜೋಡಿಸಲು ಮಾಡಿದ ಪ್ರಯತ್ನ ವಿಫಲವಾಯಿತು. ಕೆಲವೇ ಮೂಳೆಗಳನ್ನು ಇಲ್ಲಿ ತುರುಕಿದ್ದುದು ಏಕೆ?

ಹೆಣವನ್ನು ಊರಿನಾಚೆ ಒಯ್ದು, ನಿರ್ಜನ ಪ್ರದೇಶವೊಂದರಲ್ಲಿ ಕೆಲವು ಕಾಲ, ಸುಮಾರು ಒಂದು ತಿಂಗಳು, ಬಯಲಿನಲ್ಲಿ ಇಟ್ಟಿರುತ್ತಿದ್ದರು. ಇಲ್ಲಿ ಗಾಳಿ, ಮಳೆ, ಬಿಸಿಲು, ಹೆಣಕ್ಕೆ ಮೊದಲ ಸಂಸ್ಕಾರ ಮಾಡುತ್ತಿದ್ದುವು; ನಾಯಿ, ನರಿ, ಹದ್ದು, ಕಾಗೆ ಹೆಣದ ಮೃದು ಭಾಗವನ್ನೆಲ್ಲಾ ಕಿತ್ತು ತಿಂದನಂತರ ಮೃತನ ನೆಂಟರು ಹೋಗಿ ಮೂಳೆಗಳನ್ನು ಆಯ್ದುಕೊಂಡು ಬರುತ್ತಿದ್ದರು. ಈ ಮೂಳೆಗಳಲ್ಲಿ ಕೆಲವನ್ನು ಹಾಗೆಯೇ ಹೂಳಿ ಮತ್ತೆ ಕೆಲವನ್ನು ಮಡಕೆಯೊಳಗೆ ತುರುಕಿ ಮಡಕೆಯನ್ನೂ ಹೂಳುತ್ತಿದ್ದರು.

ಮಣ್ಣಿನಿಂದ ಮಾಡಿದ ಮಡಕೆಯನ್ನು ಬೆಂಕಿಯಲ್ಲಿಟ್ಟು ಕೆಂಪು ಬಣ್ಣಕ್ಕೆ ಕಾಸಿ ಗಟ್ಟಿಮಾಡುತ್ತಿದ್ದರು; ಈಗಲೂ ಒಂದಕ್ಕೊಂದು ತಾಕಿದರೆ ಅವು ಲೋಹದಂತೆ ಶಬ್ದಮಾಡುತ್ತವೆ. ಮೂಳೆತುಂಬಿದ ಮಡಕೆ ಬಾಯಿಯನ್ನು ಮುಚ್ಚಲು ಬಟ್ಟಲಿನ ಆಕಾರದ ಮುಚ್ಚಳವನ್ನೂ ಬಳಸುತ್ತಿದ್ದರು. ಮಕ್ಕಳ ಮೂಳೆಗಳನ್ನು ಇಡುವ ಮಡಕೆಗಳೇ ಬೇರೆ ರೀತಿಯಲ್ಲಿರುತ್ತಿದ್ದುವು; ಇವುಗಳಲ್ಲಿ ಇಡೀ ಅಸ್ಥಿಪಂಜರವನ್ನು ಅಡಗಿಸುತ್ತಿದ್ದರು.

ಕೆಲವು ಕರಂಡಗಳಲ್ಲಿ ಇಬ್ಬರ ಮೂಳೆಗಳು ಒಟ್ಟಿಗೆ ತುರುಕಿದ್ದುದು

ಕಂಡುಬಂದರೂ ಸಾಮಾನ್ಯವಾಗಿ ಒಂದು ಕರಂಡ ಒಂದು ಹೆಣಕ್ಕೇ ಸೀಮಿತವಾಗಿರುತ್ತಿದ್ದಿತು. ಒಂದು ಕರಂಡದಲ್ಲಿ ಮಗುವಿನ ಮೂಳೆಗಳ ಜೊತೆಗೆ ಒಂದು ಪ್ರಾಣಿಯ ಮೂಳೆಗಳೂ ಸೇರಿವೆ. ಬಹುಶಃ ಮಗು ಸತ್ತನಂತರ ಅದಕ್ಕೆ ಪ್ರಿಯವಾಗಿದ್ದ ಪ್ರಾಣಿಯನ್ನೂ ಕೊಂದು ಅದೇ ಮಡಕೆಯಲ್ಲಿ ತುಂಬಿದರೆಂದು ತೋರುತ್ತದೆ. ಈ ಪದ್ಧತಿ ಪ್ರಾಚೀನ ಜನಾಂಗಗಳಲ್ಲಿ ಇದ್ದಿತು.

ಒಂದು ಶವ ಕರಂಡ ತುಂಬ ಸ್ವಾರಸ್ಯವಾದಂದು. ಇದನ್ನು Jar No. H 149 ಎಂದು ನಿರ್ದೇಶಿಸಿದ್ದಾರೆ. ಇದರಲ್ಲಿ ಸುಟ್ಟ ಮೂಳೆಗಳಲ್ಲದೆ ಮಣ್ಣು, ಇದ್ದಿಲು, ಸುಟ್ಟ ಮಡಕೆ ಚೂರುಗಳು, ಮಣ್ಣಿನ ಪಾನ ಪಾತ್ರೆ, ಯಾವುದೋ ಪಕ್ಷಿಯ (ನವಿಲಿನ?) ಮೂಳೆಯೊಂದು, ತಟ್ಟೆ, ಬಳೆ, ಇವೂ ತುಂಬಿದ್ದುವು. ಹೆಣವನ್ನು ಸುಡುವ ಪದ್ಧತಿಯೂ ಈ ಜನದಲ್ಲಿ ಇದ್ದಿರಬಹುದು; ಅಲ್ಲದೆ ಸತ್ತವನ ಸೊತ್ತನ್ನೆಲ್ಲಾ ಅವನೊಂದಿಗೆ ಪರಲೋಕಕ್ಕೆ ಕಳುಹಿಸಬೇಕೆಂಬ ಕಲ್ಪನೆಯೂ ಇದ್ದಿರಬಹುದು.

ಹನ್ನೊಂದು ಶವ ಕರಂಡಗಳು ಮಕ್ಕಳ ಮೂಳೆಗಳಿಂದ ತುಂಬಿವೆ. ಈ ಮೂಳೆಗಳನ್ನು ಗರ್ಭಾಕೃತಿಯಲ್ಲಿ ಅಳವಡಿಸಿ, ಬಟ್ಟೆಯಿಂದ ಮುಚ್ಚಿ ಸರಳವಾದ ಮಡಕೆಗಳಲ್ಲಿ ತುಂಬಿದ್ದಾರೆ; ಈ ಮಡಕೆಗಳ ಮೇಲೆ ಚಿತ್ರವಾಗಲೀ, ಮತ್ತೆ ಯಾವ ವಿನ್ಯಾಸವಾಗಲೀ ಇಲ್ಲ. ಮಕ್ಕಳಿಗೆ ಪರಲೋಕಯಾತ್ರೆ ಅಷ್ಟು ದೀರ್ಘವಲ್ಲ ಎನ್ನುವ ಕಲ್ಪನೆ ಇದ್ದಿರಬಹುದು.

ಇದು ಮೇಲಿನ ಸ್ತರದಲ್ಲಿ ಕಾಣಬಹುದಾದ ಶವಕರಂಡಗಳ ವಿವರವಾದರೆ, ಇದಕ್ಕೆ ಮೂರು, ನಾಲ್ಕು ಅಡಿ ಕೆಳಗಿನ ಸ್ತರದಲ್ಲಿ ಶವಗಳನ್ನೇ ಹೂಳಿದ್ದುದು ಕಾಣಬರುತ್ತದೆ. ಇಂಥ ಹದಿನಾರು ಸಮಾಧಿಗಳನ್ನು ಪತ್ತೆ ಮಾಡಿದ್ದಾರೆ; ಇವುಗಳಲ್ಲಿ ಹದಿಮೂರು

ಸುಮಾರು ಸಂಪೂರ್ಣವಾದ ಅಸ್ಥಿಪಂಜರಗಳು. ಸಾಮಾನ್ಯವಾಗಿ ಹೆಣಗಳನ್ನು ನೈಋತ್ಯ ದಿಕ್ಕಿಗೆ ತಲೆ, ವಾಯುವ್ಯ ದಿಕ್ಕಿಗೆ ಕಾಲು ಮಾಡಿ ಮಲಗಿಸುವ ವಾಡಿಕೆ ಇದ್ದಂತೆ ತೋರುತ್ತದೆ. ನೈಋತ್ಯ ದಿಕ್ಕಿನಲ್ಲೇ ಪರಲೋಕವಿರುವುದೆಂಬ ಕಲ್ಪನೆ ಆ ಕಾಲದಲ್ಲಿಯೂ ಪ್ರಚುರವಾಗಿದ್ದಿರಬಹುದು. ಹೆಣವನ್ನು ಪಕ್ಕಕ್ಕೆ ತಿರುಗಿಸಿ, ಕಾಲುಗಳನ್ನು ಮಡಿಸಿ, ಕೈಗಳನ್ನು ಮುಖದ ಮೇಲೆ ಬಗ್ಗಿಸಿ ಹೂಳುವ ಪದ್ಧತಿ ಇದ್ದಿತೆನ್ನಬಹುದು. ಕೈಗಳನ್ನು ಹೊಟ್ಟೆಯ ಮೇಲೆ ಇರಿಸುವುದೂ ಕೆಲವು ಹೆಣಗಳಲ್ಲಿ ಕಾಣಬಹುದು.

ಹೆಣದ ಸಮೀಪದಲ್ಲಿ ಮಡಕೆ, ಕೂಜ, ತಟ್ಟೆ ಮೊದಲಾದ ಪಾತ್ರೆಗಳನ್ನು ಇಡುತ್ತಿದ್ದರು: ಈ ಪಾತ್ರೆಗಳ ಮೇಲೆ ನವಿಲು, ಮೇಕೆ, ಬಸವ, ಮೀನು, ಪಕ್ಷಿಗಳು, ವೃಕ್ಷಗಳು ಇವುಗಳನ್ನು ಬಣ್ಣದಿಂದ ಬಿಡಿಸುವ ಪದ್ಧತಿ ಇದ್ದಿತು; ಹಲವಾರು ಇತರ ಸ್ವಾರಸ್ಯವಾದ ವಿನ್ಯಾಸಗಳನ್ನೂ ಈ ಮಡಕೆಗಳ ಮೇಲೆ ಕಾಣಬಹುದು. ಕೆಂಪನೆಯ ಮಡಕೆಯ ಮೇಲೆ ಕರಿ ಬಣ್ಣದಲ್ಲಿ ಮೂಡಿಸಿದ ಚಿತ್ರಗಳೇ ವಿಶೇಷವಾಗಿವೆ.

ಒಮ್ಮೊಮ್ಮೆ ಮನುಷ್ಯರ ಅಸ್ಥಿಗಳ ಜೊತೆ ಪ್ರಾಣಿಗಳ ಮೂಳೆಗಳೂ ದೊರೆತಿರುವುದು ಕುತೂಹಲಕಾರಿಯಾಗಿದೆ. H 698 ಎಂದು ನಿರ್ದಿಷ್ಟವಾಗಿರುವ ಸಮಾಧಿಯನ್ನು ಇಲ್ಲಿ ಉಲ್ಲೇಖಿಸಬಹುದು. ಇಲ್ಲಿ ಮಧ್ಯ ವಯಸ್ಸಿನ ಮನುಷ್ಯನೊಬ್ಬನ ಅಸ್ಥಿಪಂಜರ ಎಡ ಪಕ್ಕಕ್ಕೆ ಮಲಗಿದ್ದು, ಬಲ ಶ್ರೋಣಿ ಪ್ರದೇಶದಲ್ಲಿ ಕೈಗಳು ಮಡಿಸಲ್ಪಟ್ಟಿವೆ. ಇದರ ಪಕ್ಕದಲ್ಲೇ ಒಂದು ಪ್ರಾಣಿಯ (ಬಹುಶಃ ಮೇಕೆಯೊಂದರ) ಮೂಳೆಗಳೂ ಇವೆ. ಈ ಪ್ರಾಣಿಯ ಪಕ್ಕೆ ಎಲುಬುಗಳನ್ನು ಸತ್ತ ಮನುಷ್ಯ ಕೈಗಳಲ್ಲಿ ಹಿಡಿದಂತಿದೆ. ಸಮಾಧಿ ಮಾಡುವ ಮೊದಲು ಪ್ರಾಣಿಗಳನ್ನು ಬಲಿ ಕೊಡುವ

ಪದ್ಧತಿ ಬಳಕೆಯಲ್ಲಿದ್ದಿತೆಂದು ಊಹಿಸಿದ್ದಾರೆ.

ಮರಣಾನಂತರವೂ ಜೀವ ಉಳಿಯುತ್ತದೆ, ಪರಲೋಕಕ್ಕೆ ಹೋಗುತ್ತದೆ ಎನ್ನುವ ನಂಬಿಕೆ ಈ ಜನರಲ್ಲಿದ್ದಿತು ಎನ್ನಬಹುದು. ಸತ್ತನಂತರ ಜೀವವು ಹಲವಾರು ರೂಪಗಳನ್ನು ತಳೆದು ಕೊನೆಗೆ ಸ್ವರ್ಗವನ್ನು ಸೇರುತ್ತದೆ ಎಂದೂ, ಅಲ್ಲಿ ಶಾಶ್ವತವಾದ ಶಾಂತಿಯನ್ನು ಅನುಭವಿಸುವುದೆಂದೂ ನಂಬಿದ್ದರು. ಆದರೆ ಅಲ್ಲಿಗೆ ಹೋಗುವ ದಾರಿ ಮಾತ್ರ ದುರ್ಗಮವಾದುದು, ಕಷ್ಟಸಾಧ್ಯವಾದುದು ಎಂದು ಬಗೆದು ಮೃತಕನಿಗೆ ನೆರವಾಗಲು ಹಲವಾರು ಉಪಕರಣಗಳನ್ನೂ, ಸಾಮಗ್ರಿಗಳನ್ನೂ ಸಮಾಧಿಯಲ್ಲಿ ಇಡುತ್ತಿದ್ದರು. ಶವ ಸಂಸ್ಕಾರದ ಸಮಯದಲ್ಲಿ ಪಶುಬಲಿಯೂ ಇದೇ ಕಾರಣಕ್ಕೆ ನಡೆಯುತ್ತಿದ್ದಿತು.

ಶವಕರಂಡಗಳ ಮೇಲೂ, ಶವ ಸಂಸ್ಕಾರಕ್ಕೆ ಬಳಸಿದ ಮಡಕೆ ಮೊದಲಾದ ಪಾತ್ರೆಗಳ ಮೇಲೂ ನವಿಲಿನ ಚಿತ್ರ ಬಹುವಾಗಿ ಬಳಕೆಯಲ್ಲಿದೆ. ಸತ್ತವನು ನವಿಲಾಗಿ ಮಾರ್ಪಡುತ್ತಾನೆ, ಅವನ ಪರಲೋಕ ಪ್ರಯಾಣದಲ್ಲಿ ನವಿಲೇ ಮಾರ್ಗದರ್ಶಿಯಾಗಿ ಅವನಿಗೆ ನೆರವಾಗುತ್ತದೆ ಎನ್ನುವ ಕಲ್ಪನೆಯಿದ್ದಿತು. H 206 ಎಂದು ನಿರ್ದಿಷ್ಟವಾದ ಮಡಕೆಯ ಮೇಲೆ ಮೂರು ನವಿಲುಗಳು ಸತ್ತವನ ಚೇತನವನ್ನು ನಕ್ಷತ್ರ ಲೋಕಕ್ಕೆ ಒಯ್ದು ಹಾರುತ್ತಿರುವ ಚಿತ್ರವಿದೆ. ನವಿಲನ್ನು ಮೃತಕನ ವಾಹನವೆಂದೂ ಇಲ್ಲಿ ಕೆಲವೆಡೆ ಕಾಣಿಸಿದ್ದಾರೆ.

ಸೂರ್ಯಲೋಕಕ್ಕೆ ಮನುಷ್ಯ ಹೋಗಿ ಸೇರುವನೆಂದೂ, ಅಶ್ವತ್ಥ ವೃಕ್ಷದೊಂದಿಗೆ ಸೇರಿಹೋಗುವನೆಂದೂ ಕಲ್ಪನೆಗಳಿದ್ದುವು. ಇಲ್ಲಿನ ಮನುಷ್ಯರು ಪರಲೋಕದಲ್ಲಿ ವಿವಿಧ ಪಶುಪಕ್ಷಿಗಳ ಆಕಾರವನ್ನು ತಳೆದು ವಿಹರಿಸುವರೆಂದು ನಂಬಿದ್ದರೆಂದು ಕಾಣುತ್ತದೆ.

ಅಂತೂ ದೇಹ ಸತ್ತರೂ ಆತ್ಮಸಾಯದೆ ಉಳಿಯುತ್ತದೆ ಎನ್ನುವ ಕಲ್ಪನೆ ಈ ದೇಶದಲ್ಲಿ ಐದಾರು ಸಾವಿರ ವರ್ಷಗಳ ಹಿಂದೆಯೇ ರೂಢಮೂಲವಾಗಿದ್ದಿತು. ಇಂದಿನಂತೆ ಅಂದಿನ ಶವಸಂಸ್ಕಾರ ವಿಧಿಗಳಲ್ಲಿಯೂ ಈ ಕಲ್ಪನೆ ದೃಢವಾಗಿದ್ದಿತು. ಇದು ಅವಶೇಷ ಗಳಿಂದ ಸ್ಪಷ್ಟವಾಗುತ್ತದೆ.

3 ಪ್ರಾಚೀನ ಈಜಿಪ್ಟ್

ಕ್ರಿಸ್ತಯುಗದಿಂದಲೇ ಪಾಶ್ಚಾತ್ಯರ ಸಂಸ್ಕೃತಿ ಹೆಚ್ಚೂಕಡಮೆ ಆರಂಭವಾಗುವುದು. ಆದರೆ ಪೌರ್ವಾತ್ಯ ದೇಶಗಳಲ್ಲಿ ಆ ವೇಳೆಗಾಗಲೇ ಸಂಸ್ಕೃತಿ ಬೆಳೆದು ಹಿರಿದಾಗಿ ಹಬ್ಬಿ ಮರೆಯಾದುದೂ ಉಂಟು. ನಿದರ್ಶನಕ್ಕೆ ಈಜಿಪ್ಟ್ ದೇಶದ ಸಂಸ್ಕೃತಿ. ಕ್ರಿಸ್ತ ಹುಟ್ಟುವುದಕ್ಕೆ ಸುಮಾರು ಮೂರು ಸಾವಿರ ವರ್ಷಗಳಷ್ಟು ಹಿಂದೆಯೇ ಇದ್ದ ಮೇಲ್ತರದ ಸಂಸ್ಕೃತಿಯಿದು.

ಪ್ರಾಚೀನ ಈಜಿಪ್ಟ್ ಹೊರಗಣ ದೇಶಗಳೊಂದಿಗೆ ಯಾವ ನೆಂಟನ್ನೂ ಉಳಿಸಿಕೊಳ್ಳದೆ ತನ್ನ ಪಾಡಿಗೆ ತಾನು ಒಂದು ರಾಜ್ಯವಾಗಿ ಅರಸೊತ್ತಿಗೆಯನ್ನು ಉಳಿಸಿಕೊಂಡಿದ್ದಿತು. ಜಗತ್ತಿನಲ್ಲಿ ಅತಿ ದೀರ್ಘಕಾಲ ಯಾವುದಾದರೂ ಅರಸೊತ್ತಿಗೆ ಉಳಿದಿದ್ದರೆ ಅದು ಇಲ್ಲಿಯೇ ಉಳಿದಿದ್ದಿತು. ಕ್ರಿ.ಪೂ. 3100 ರಿಂದ ಕ್ರಿ.ಪೂ. 525ರ ವರೆಗೆ ಈ ದೇಶವನ್ನು 'ಫೇರೋ' ಎಂಬ ರಾಜರು ಆಳುತ್ತಿದ್ದರು. ಇವರೆಲ್ಲರೂ ಒಂದೇ ವಂಶಕ್ಕೆ ಸೇರಿದವರಲ್ಲ. ಏನಿಲ್ಲವೆಂದರೂ ಇಪ್ಪತ್ತಾರು ಬೇರೆ ಬೇರೆ ಮನೆತನಗಳಿಗೆ ಸೇರಿದ 'ಫೇರೋ' ಗಳು ರಾಜರಾಗಿದ್ದರು. ಕ್ರಿ.ಪೂ. 525ರಲ್ಲಿ ಈ ದೇಶವನ್ನು ಪರ್ಷಿಯಾ ದೇಶವು ಆಕ್ರಮಿಸಿಕೊಂಡು ಈ ರಾಜರ ಸಂತತಿಯನ್ನು ನಿಲ್ಲಿಸಿತು.

ಈ ಅವಧಿಯಲ್ಲಿ ಈ ದೇಶವು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನೂ ಬೆಳೆಸಿಕೊಂಡಿತು. ಕಲೆ. ವಾಸ್ತುಶಿಲ್ಪ, ಸಾಹಿತ್ಯ ಇವು ತುಂಬ ಮೇಲ್ಮಟ್ಟದವಾಗಿ ಮೆರೆದುವು. ಪಾಶ್ಚಾತ್ಯ ಜಗತ್ತು ಆಗಿನ್ನೂ ಆದಿವಾಸಿಗಳ ನೆಲೆಯಲ್ಲಿಯೇ ಇದ್ದಿತು.

ಪೌರ್ವಾತ್ಯ ದೇಶಗಳಲ್ಲಿ ಸಂಸ್ಕೃತಿ ಇದ್ದಿತಾದರೂ ಇಷ್ಟು ವೈಭವದಿಂದ ಮೆರೆಯಲಿಲ್ಲವೆನ್ನಬಹುದು. ನಮ್ಮ ದೇಶದ ಸಿಂಧೂ ಕಣಿವೆ ಸಂಸ್ಕೃತಿಯೇನೋ ಆ ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು.

ಈಜಿಪ್ಟ್ ದೇಶದ ವಾತಾವರಣದಲ್ಲಿ ಶಾಶ್ವತತೆಯ ಕಳೆಯಿದೆ. ಅರೇಬಿಯಾ ಮರುಭೂಮಿ, ಲಿಬ್ಯ ಮರುಭೂಮಿಗಳ ನಡುವೆ ಹರಿಯುವ ನೈಲ್ ನದಿ ಮೆಡಿಟರೇನಿಯನ್ ಸಾಗರವನ್ನು ಸೇರುವ ಮುನ್ನ ಈ ಅದ್ಭುತ ಸಂಸ್ಕೃತಿಯ ತವರಾಯಿತು. ಎಲ್ಲಿಯೂ ಮುಗಿಯದ ಮರಳು, ಹೆಚ್ಚು ವ್ಯತ್ಯಾಸವಿಲ್ಲದ ಹವೆ, ಅನಾದಿ ಕಾಲದಿಂದಲೂ ಎಡೆಬಿಡದೆ ಹರಿಯುವ ನೈಲ್ ನದಿ, ಅಚ್ಚಳಿಯದೆ ಎಂದೆಂದಿಗೂ ನಿಲ್ಲುವ ಪಿರಮಿಡ್ಡುಗಳು, ಯಾವ ಕಾಲಕ್ಕೂ ಬಿಡಿಸಲಾಗದ ಸ್ಫಿಂಕ್ಸ್ ಒಗಟು—ಇವೆಲ್ಲ ಈಜಿಪ್ಟ್ ಜನರಲ್ಲಿ ಒಂದು ಬಗೆಯ ಶಾಶ್ವತತೆಯ ಕಲ್ಪನೆಯನ್ನು ಮೂಡಿಸಿದುವು. ಆ ಪ್ರದೇಶವನ್ನು ಇಂದು ನೋಡಿದವರಿಗೂ ಈ ಭಾವನೆ ಉಂಟಾಗದೆ ಇರದು.

ಪೂರ್ವಕ್ಕೂ ಪಶ್ಚಿಮಕ್ಕೂ ವಿಶಾಲವಾದ ಮರಳುಗಾಡು, ಉತ್ತರಕ್ಕೆ ಸಾಗರ, ದಕ್ಷಿಣಕ್ಕೆ ನುಬಿಯ (ಈಗಿನ ಸೂಡಾನ್) ಈ ಮೇರೆಗಳಲ್ಲಿಯೇ ಸ್ವಾರಸ್ಯವಿದೆ. ಈಜಿಪ್ಟ್ ಸುರಕ್ಷಿತವಾಗಿದ್ದಿತು. ಅಲ್ಲಿನ ಜನರಿಗೆ ಯಾವ ದಾಳಿಯ ಆತಂಕವೂ ಇರಲಿಲ್ಲ; ನೆಮ್ಮದಿಯಿಂದಿದ್ದರು. ಹೊರಗಿನ ಸಂಪರ್ಕವೂ ಅಷ್ಟಾಗಿ ಇರಲಿಲ್ಲ. ಜನರ ಸಂಸ್ಕೃತಿಯಲ್ಲಿ ಮಾರ್ಪಾಟು ಬೇಗನೆ ಅಥವ ಸುಲಭವಾಗಿ ಆಗುವುದು ಸಾಧ್ಯವಿರಲಿಲ್ಲ. ಈಜಿಪ್ಟ್ ಜನ ಹೆಚ್ಚು ಬದಲಾಯಿಸದೆ ಎರಡು ಸಾವಿರ ವರ್ಷಗಳಿಗೂ ಮೀರಿ ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡುಬಂದರು. ಇದೊಂದು ಈ ದೇಶದ ಇತಿಹಾಸದ ವೈಶಿಷ್ಟ್ಯ.

ಈಜಿಪ್ಟ್ ದೇಶದ ಸುದೀರ್ಘವಾದ ಇತಿಹಾಸವನ್ನು ಮೂರು ಭಾಗಗಳಾಗಿ ವಿಂಗಡಿಸುವುದು ವಾಡಿಕೆ. ಮೊದಲನೆಯದು ಪ್ರಾಚೀನ ರಾಜ್ಯಯುಗ. ಎರಡನೆಯದು ಮಧ್ಯ ರಾಜ್ಯಯುಗ. ಕಡೆಯದು ನೂತನ ರಾಜ್ಯಯುಗ. ಪ್ರಾಚೀನ ರಾಜ್ಯಯುಗ ಆರಂಭವಾದುದು ಈಗ್ಗೆ ಐದುಸಾವಿರ ವರ್ಷಗಳ ಹಿಂದೆ. ನೂತನ ರಾಜ್ಯಯುಗ ಮುಗಿಯುವುದು ಕ್ರಿ. ಪೂ. 525ರಲ್ಲಿ.

ಪ್ರಾಚೀನ ರಾಜ್ಯ ಮೂಡಿಬಂದ ಕಾಲದಲ್ಲಿ ನೈಲ್ ನದಿಯ ದಡದಲ್ಲಿ ವಾಸಮಾಡುತ್ತಿದ್ದ ಹಲವಾರು ಆದಿವಾಸಿ ಜನರು ಒಬ್ಬ ನಾಯಕನ ಅಧೀನರಾಗಿ ಒಕ್ಕೂಟದಲ್ಲಿ ಸೇರಿದರು. ಹೀಗೆ ಈ ಕಾಡು ಜನರನ್ನೆಲ್ಲ ಒಟ್ಟುಗೂಡಿಸಿ ಅವರಲ್ಲಿ ರಾಜ್ಯದ ಕಲ್ಪನೆಯನ್ನು ಬಿತ್ತಿದ ಯಶಸ್ಸು 'ಮಿನಿಸ್' ಎನ್ನುವ ರಾಜನಿಗೆ ಸಲ್ಲಬೇಕು. ಇವನೇ ಮೊದಲನೆಯ ಫೇರೋ. ಇವನ ಬಗ್ಗೆ ಹೆಚ್ಚು ವಿವರಗಳು ಉಳಿದಿಲ್ಲ. ಇವನು ಕಾಡುಜನರನ್ನೆಲ್ಲ ಕೂಡಿಸಿ ರಾಜ್ಯವನ್ನು ಕಟ್ಟಿದುದು ಹೇಗೆ ಎನ್ನುವುದೂ ಸಮಸ್ಯೆಯಾಗಿಯೇ ಉಳಿದಿದೆ.

ಆದರೆ ಹೀಗೊಂದು ಒಕ್ಕೂಟವನ್ನು ಮಾಡಿ ರಾಜ್ಯವನ್ನು ಕಟ್ಟಿದುದರಿಂದ ದೇಶಕ್ಕೆ ತುಂಬ ಪ್ರಯೋಜನವಾಯಿತೆನ್ನುವುದೇನೋ ನಿಜ. ಈ ದೇಶದ ಸಂಸ್ಕೃತಿಯಲ್ಲಿ ನೈಲ್ ನದಿಯೇ ಮುಖ್ಯ ವಿವರ: ಇದೇ ಅಲ್ಲಿನ ಜನರ ಜೀವಾಧಾರ. ಆ ದೇಶದ ಆರ್ಥಿಕ ವ್ಯವಸ್ಥೆಯಲ್ಲ ಈ ನದಿಯನ್ನೇ ಅವಲಂಬಿಸಿದುದು. ಅದರ ದಡದಲ್ಲಿನ ಭೂಮಿ ತುಂಬ ಫಲವತ್ತಾದುದು; ಬೆಳೆ ವಿಪುಲವಾಗಿರುತ್ತದೆ. ಈ ನದಿಯ ಪ್ರಯೋಜನವನ್ನು ಹೆಚ್ಚಿನ ಪ್ರದೇಶಗಳಿಗೆ ಒದಗಿಸಲು ನದಿಯಿಂದ ಕೊಳಗಳನ್ನು ಮಾಡಿಸಿ, ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿ, ನಾಲೆಗಳನ್ನು ತೆಗೆದು ಶ್ರಮಪಡ

ಬೇಕಾಯಿತು. ಈ ಉದ್ಯಮ ಎಲ್ಲ ಆದಿವಾಸಿಗಳೂ ಒಟ್ಟಾಗಿ ಕಲೆತರೇ ಸಾಧ್ಯವೆನ್ನುವುದನ್ನರಿತು ಮೊದಲನೆಯ ಫೇರೋ ಒಕ್ಕೂಟದ ರಾಜ್ಯವನ್ನು ನಿರ್ಮಿಸಿದನು.

ಅವನೇ ಮೆಂಫಿಸ್ ನಗರವನ್ನು ಕಟ್ಟಿಸಿ ಈಜಿಪ್ಟ್ ದೇಶದ ರಾಜಧಾನಿಯನ್ನಾಗಿ ಮಾಡಿಕೊಂಡವನು. ಅಲ್ಲಿಂದ ಮುಂದೆ ಆರು ಮನೆತನಗಳ ರಾಜರು ಇಲ್ಲಿ ರಾಜ್ಯವಾಳಿದರು. ಈ ಅವಧಿಯಲ್ಲಿ ದೇಶ ಸುಭಿಕ್ಷವಾಗಿದ್ದಿತು; ಶಾಂತವಾಗಿದ್ದಿತು. ನೆರೆಹೊರೆಯ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಹೆಚ್ಚಿತು. ಆವರೆಗೆ, ಈಜಿಪ್ಟ್ ಜನರಿಗೆ ಪರಿಚಯವಿರದಿದ್ದ ಮರಮಟ್ಟು, ಲೋಹಗಳು. ಉಷ್ಟ್ರಪಕ್ಷಿಯ ರೆಕ್ಕೆ–ಪುಕ್ಕ–ದಂತ, ಸಾಂಬ್ರಾಣಿ ಮೊದಲಾದ ಪದಾರ್ಥಗಳು ಜನಜೀವನದಲ್ಲಿ ವಿಶೇಷವಾಗಿ ಬಳಕೆಗೆ ಬಂದುವು ಧಾರ್ಮಿಕ ಕ್ರಿಯೆಗಳೂ ಬಲಗೊಂಡವು.

ರಾಜವಂಶಗಳು

ಈ ಮೊದಲನೆಯ ಚಕ್ರಾಧಿಪತ್ಯದಲ್ಲಿ ಸಾಧಿಸಿದ ಒಂದು ಸಾಹಸವೆಂದರೆ ಪಿರಮಿಡ್ಡುಗಳನ್ನು ನಿರ್ಮಿಸಿದುದು. ಜಗತ್ತಿನ ಅದ್ಭುತಗಳಲ್ಲಿ ಪಿರಮಿಡ್ಡು ಒಂದೆಂದು ಪ್ರಸಿದ್ಧವಾಗಿದೆಯಷ್ಟೆ. ತೀರಿಕೊಂಡ ಅರಸರ ಸಮಾಧಿಮಂದಿರಗಳಾದ ಇವು ಮರಳು ಕಾಡಿನ ಮರಳು ಹರವಿನ ಮೇಲೆ ಅದ್ಭುತ ಪ್ರಮಾಣದಲ್ಲಿ ಮೈ ಚಾಚಿ ನಿಂತಿವೆ. ನಾಲ್ಕನೆಯ ರಾಜವಂಶದ ಚಿಯೋಪ್ಸ್, ಚೆಫ್ರೆನ್ ಮತ್ತು ಮೈಸೀರಿನಸ್ ಎಂಬ ರಾಜರು ಗಿಜಾ ಪ್ರದೇಶದ ಅದ್ಭುತ ಪಿರಮಿಡ್ಡುಗಳ ನಿರ್ಮಾಣಕ್ಕೆ ಕಾರಣರಾದರು. ಚೆಫ್ರೆನ್ ರಾಜನ ಇನ್ನೊಂದು ಗಮನಾರ್ಹವಾದ ನಿರ್ಮಾಣವೆಂದರೆ ಸ್ಫಿಂಕ್ಸ್ ದೇವತೆಯ ಶಿಲ್ಪಕೃತಿ. ಇದೂ ಅದ್ಭುತಗಳಲ್ಲಿ ಅದ್ಭುತ; ಇದರ

ಒಗಟನ್ನು ಬಿಡಿಸುವುದು ಇನ್ನೂ ಸಾಧ್ಯವಾಗಿಲ್ಲ. ಸಿಂಹದ ಮೈ ಹೆಂಗಸಿನ ಮುಖದ ಬೃಹತ್ತಾದ ಮೂರ್ತಿ ಇದು. ಜಗತ್ತಿನಲ್ಲೇ ಇದರಂಥ ಶಿಲ್ಪ ಇನ್ನೊಂದಿಲ್ಲ.

ಮೊದಲನೆಯ ಚಕ್ರಾಧಿಪತ್ಯ ಕ್ರಿಸ್ತಪೂರ್ವ 3100ರಿಂದ 2200ರ ವರೆಗೂ ನಡೆಯಿತು. ಆರನೆಯ ರಾಜವಂಶ ದುರ್ಬಲವಾಗಿ ಸಾಮಂತರೂ, ಅಧಿಕಾರಿಗಳೂ ಬಲವಾದರು; ಆಡಳಿತವೆಲ್ಲ ಅವರ ಕೈಗೆ ಬಂದಿತು. ಮುಂದೆ ಹನ್ನೊಂದನೆಯ ರಾಜವಂಶದವರೆಗೂ (ಎಂದರೆ 2150ರವರೆಗೂ) ಅನಾಯಕತ್ವ, ಅರಾಜಕತೆಗಳೇ ತಾಂಡವವಾಡಿದವು. ಥೀಟ್ಸ್ ಪ್ರದೇಶದವನಾಗಿದ್ದ ಮೆಂಟುಹೋಪ್ಟೆ ಎಂಬ ರಾಜನು ಕ್ರಿಸ್ತ ಪೂರ್ವ 2150ರಲ್ಲಿ ಈಜಿಪ್ಟಿನ ಫೇರೋ ಚಕ್ರವರ್ತಿಯಾಗಿ ಆಡಳಿತವನ್ನು ವಹಿಸಿಕೊಂಡ ನಂತರ ದೇಶದಲ್ಲಿ ನೆಮ್ಮದಿ ನೆಲೆಸಿತು. ಈ ರಾಜನ ಆಳ್ವಿಕೆಯಲ್ಲಿ ಈಜಿಪ್ಟಿನ ರಾಜಧಾನಿ ಥೀಬ್ಸ್ ನಗರವಾಯಿತು. ವಿಜಯಾಕಾಂಕ್ಷಿಯಾದ ಈತನು ನೆರೆ ನಾಡಾದ ನುಬಿಯ ಪ್ರದೇಶವನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ ನಂತರ ರಾಷ್ಟ್ರದ ವಿಸ್ತಾರ ಹೆಚ್ಚಲಾರಂಭಿಸಿತು.

ಈ ಮನೆತನದ ರಾಜರು ದೂರದರ್ಶಿಗಳಾಗಿದ್ದರು. ಆರ್ಥಿಕ ವ್ಯವಧಾನಗಳು ರೂಪುಗೊಂಡವು. ಅಮ್ಮೆನೆಮೆಸಿಲ್ (ಕ್ರಿ.ಪೂ. 1842–1797) ಎಂಬ ಫೇರೋ ಕಾಲದಲ್ಲಿ ಮೊಎರಿಸ್ ಕೆರೆ ಮೈದಳೆಯಿತು. ತುಂಬ ವಿಶಾಲವಾದ ಈ ಕೆರೆಯನ್ನು ಅತಿ ಸಾಹಸದಿಂದ ನಿರ್ಮಾಣ ಮಾಡಿದರು. ನೈಲ್ ನದಿಗೇ ನೀರನ್ನು ಒದಗಿಸಲೆಂದು ಈ ಕೆರೆಯನ್ನು ಕಟ್ಟಲಾರಂಭಿಸಿದರಂತೆ!

ಬರುಬರುತ್ತ ಈ ರಾಜವಂಶವೂ ದುರ್ಬಲವಾಗಿ, ಏಷ್ಯಾ ದೇಶದ ಹೈಕ್ಸೋಸ್ ಎನ್ನುವ ಅಲೆಮಾರಿ ಜನ ಹೇಗೋ ಇಲ್ಲಿಗೆ

ಬಂದು ರಾಜ್ಯವನ್ನು ದಕ್ಕಿಸಿಕೊಂಡುಬಿಟ್ಟರು. ಅವರೇನು ಸೇನೆಯನ್ನು ತಂದು ಮೊದಲಿನ ರಾಜರನ್ನು ಸೆಣಸಿ ತಾವು ರಾಜರಾಗಲಿಲ್ಲ. ಕ್ರಮಕ್ರಮವಾಗಿ ತಮ್ಮ ಪ್ರಭಾವವನ್ನು ಜನರಲ್ಲಿಯೂ ಆಡಳಿತದಲ್ಲಿಯೂ ಮೂಡಿಸಿಕೊಂಡು ಪ್ರಬಲರಾದರು. ಕ್ರಿ. ಪೂ. 1575ರಲ್ಲಿ ಮೊದಲನೆಯ ಅಹ್ಮೋಸ್ ಎನ್ನುವ ಫೇರೋ ಇವರನ್ನು ಹೊಡೆದಟ್ಟುವವರೆಗೂ ಇವರ ಪ್ರಾಬಲ್ಯವಿದ್ದಿತು.

ಈ ಹೈಕ್ಸೋಸ್ ಜನರನ್ನು ಓಡಿಸಿದನಂತರ ಹೊಸಯುಗ ಆರಂಭವಾಯಿತು. ಸೇನೆಯ ಪ್ರಾಬಲ್ಯವೇ ಈ ಯುಗದ ಮುಖ್ಯ ವಿವರ. ದೇಶದ ಬಲ ಹೆಚ್ಚಿ ಅಕ್ಕಪಕ್ಕದ ದೇಶಗಳೂ ಈಜಿಪ್ಟ್‌ಗೆ ಸೇರಿದುವು. ಪ್ಯಾಲೆಸ್ಟೈನ್ ಮತ್ತು ಸಿರಿಯಾ ದೇಶಗಳು ಈಜಿಪ್ಟ್ ಅರಸರ ಆಳ್ವಿಕೆಗೆ ಒಳಪಟ್ಟುವು. ಮುಮ್ಮಡಿ ಥುಟ್ಮೋಸ್ ಎಂಬ ಫೇರೋ ಕಾಲದಲ್ಲಿ (ಎಂದರೆ ಕ್ರಿಸ್ತಪೂರ್ವ 1496ರಿಂದ 1442ರ ವರೆಗೆ) ಈಜಿಪ್ಟ್ ಚಕ್ರಾಧಿಪತ್ಯ ಯೂಫ್ರೆಟಿಸ್‌ವರೆಗೂ ಹಬ್ಬಿತು!

ಹೀಗೆ ಗೆದ್ದ ರಾಷ್ಟ್ರಗಳ ಆರ್ಥಿಕ . ಸಾಮಾಜಿಕ ವ್ಯವಸ್ಥೆಯ ಕಡೆಗೆ ಈ ರಾಜರು ಗಮನವನ್ನೇನೂ ಕೊಡಲಿಲ್ಲ. ಅವರಿಂದ ಕಪ್ಪ–ಕಾಣಿಕೆಗಳನ್ನು ಪಡೆದುಕೊಳ್ಳುವುದಷ್ಟೇ ಅವರ ಆಸಕ್ತಿಯಾಗಿದ್ದಿತು. ಈಜಿಪ್ಟ್‌ನ ಬೊಕ್ಕಸ ತುಂಬಿತು. ಆದರೆ ಜನಗಳಲ್ಲಿ ಅಸಮಾಧಾನವು ಹೆಚ್ಚಿತು. ಗಡಿನಾಡಿನಲ್ಲಿ ಗಲಭೆಗಳು ನಡೆಯುತ್ತಲೇ ಇದ್ದುವು. ಕ್ರಿಸ್ತ ಪೂರ್ವ 1300ರಲ್ಲಿ ಏಷ್ಯಾ ಮೈನರ್‌ನ ಹಿಟ್ಟೈಟ್ ಎನ್ನುವ ಜನ ಈಜಿಪ್ಟ್‌ನ ರಾಜ್ಯದ ಗಡಿಯನ್ನು ಆಕ್ರಮಿಸಿಕೊಂಡು ರಾಜ್ಯದ ವಿಸ್ತಾರವನ್ನು ಮೊದಲಿನಷ್ಟೇ ಕುಗ್ಗಿಸಿದರು.

ಈ ಹಿಟ್ಟೈಟ್ ಜನರ ವಿರುದ್ಧ ಇಮ್ಮಡಿ ರ್‍ಯಾಮ್ಸೆಸ್ ಎನ್ನುವ

ಚಿತ್ರ 6
ಮುಮ್ಮಡಿ ಥುಥ್‌ಮೋಸಸ್ ಫೇರೋ; ಕೆಂಪುಕಲ್ಲಿನ ಶಿಲ್ಪ ಕ್ರಿ. ಪೂ. 1055ರದು

ಸುಪ್ರಸಿದ್ಧ ಫೇರೋ ಯುದ್ಧವನ್ನಾರಂಭಿಸಿದನು. ಹೀಗೆ ಆರಂಭವಾದ ಯುದ್ಧ ಹೆಚ್ಚೂಕಡಮೆ ಹದಿನಾರು ವರ್ಷಗಳು ನಡೆಯಿತು. ಯಾವ ಪಕ್ಷಕ್ಕೂ ಗೆಲುವಾಗಲೀ ಸೋಲಾಗಲೀ ಸಂಭವಿಸಲಿಲ್ಲ. ಕಡೆಗೆ ಎರಡೂ ಪಕ್ಷಗಳೂ ಒಪ್ಪಂದ ಮಾಡಿಕೊಂಡವು. ಈಜಿಪ್ಟ್ ಜನರೂ ಹಿಟ್ಟೈಟ್ ಜನರೂ ಅಣ್ಣತಮ್ಮಂದಿರಂತೆ ಇರಬೇಕೆಂದೂ ಶಾಂತಿಯಿಂದ ಬಾಳಬೇಕೆಂದು ಒಪ್ಪಂದವಾಯಿತು!

ಆದರೆ ಇದರಿಂದಾಗಿ ನೂತನ ರಾಜ್ಯಯುಗ ಮುಗಿಯುತ್ತ ಬಂದಿತು. ಈಜಿಪ್ಟ್ ಸಂಸ್ಕೃತಿ ಸಾವಿರಾರು ವರ್ಷಗಳವರೆಗೂ ಬದಲಾಗದೆ ನಿಂತುದು ಅದರ ಅವನತಿಗೆ ಕಾರಣವಾಯಿತು. ನೆರೆಹೊರೆಯ ರಾಜ್ಯಗಳು ಪ್ರಗತಿಪಥದಲ್ಲಿದ್ದವು. ಅಲ್ಲಿನ ಸಮಾಜ ಧರ್ಮ, ವಿಜ್ಞಾನ ಎಲ್ಲವೂ ಬದಲಾಗುತ್ತಿದ್ದುವು. ಇವು ಕಡೆಗೆ ಈಜಿಪ್ಟ್ ದೇಶವನ್ನು ವಶಪಡಿಸಿಕೊಳ್ಳುವುದು ಸಾಧ್ಯವಾಯಿತು. ಬೇರೆಬೇರೆ ದೇಶದ ಸೈನಿಕರು ದಾಳಿಮಾಡಿ ಈಜಿಪ್ಟ್‌ನ ವೈಭವವನ್ನು ಮಣ್ಣುಗೂಡಿಸಿದರು.

ಕ್ರಿಸ್ತಪೂರ್ವ 730ರ ಸುಮಾರಿಗೆ ದಕ್ಷಿಣ ದಿಗ್ಭಾಗದ ನುಬಿಯನ್ ಜನ ಈಜಿಪ್ಟ್ ದೇಶವನ್ನು ವಶಪಡಿಸಿಕೊಂಡರು. ಕ್ರಿ. ಪೂ. 671 ರಿಂದ 665ರವರೆಗೂ ಅಸ್ಸೀರಿಯನ್ ಜನ ದಾಳಿಮಾಡಿದರು. ಅಸ್ಸೀರಿಯನ್ ನಾಯಕರಾದ ಎಸ್ಸರ್‌ಹಾಡ್ಡನ್ ಮತ್ತು ಅಸ್ಸುರ್ ಬನಿಪಾಲ್ ಚರಿತ್ರೆಯ ಮಹಾ ಪುರುಷರಾಗಿ ಉಳಿದಿದ್ದಾರೆ. ಈಜಿಪ್ಟ್ ಚಕ್ರಾಧಿಪತ್ಯದ ಪರಾಭವಕ್ಕೆ ಇವರೇ ಮುಖ್ಯಕಾರಣ ಎಂದರೆ ತಪ್ಪಲ್ಲ. ಫೇರೋಗಳು ಈಜಿಪ್ಟ್ ದೇಶದ ರಾಜಧಾನಿಯನ್ನು ಇನ್ನಷ್ಟು ಹಿಂದಕ್ಕೆ ಸಯಸ್‌ನಲ್ಲಿ ತಳ್ಳಿಕೊಳ್ಳಬೇಕಾಯಿತು. ಆದರೂ ದಾಳಿಗಳು ತಪ್ಪಲಿಲ್ಲ.

ಕ್ರಿ.ಪೂ. 525ರಲ್ಲಿ ಪರ್ಷಿಯನ್ ಜನರು ಈಜಿಪ್ಟ್ ದೇಶವನ್ನು

ವಶಪಡಿಸಿಕೊಂಡಂದು ಈ ದೇಶದ ಸ್ವತಂತ್ರಯುಗ ಮುಗಿಯಿತು. ಈಜಿಪ್ಟ್ ಪರಾಧೀನವಾಯಿತು. ಕ್ರಿಸ್ತಪೂರ್ವ 332ರಲ್ಲಿ ಅಲೆಗ್ಝಾಂಡರನು ತನ್ನ ವಿಶಾಲ ಚಕ್ರಾಧಿಪತ್ಯದಲ್ಲಿ ಈಜಿಪ್ಟನ್ನು ಸೇರಿಸಿಕೊಂಡುಬಿಟ್ಟನು. ಕ್ರಿ.ಪೂ. 30ರ ಸುಮಾರಿಗೆ ಈಜಿಪ್ಟ್ ರೋಮನ್ ಚಕ್ರಾಧಿಪತ್ಯದ ಅಧೀನ ರಾಷ್ಟ್ರವಾಗಿ ತನ್ನ ಪ್ರಾಮುಖ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡಿತು.

ಸ್ವರ್ಗದ್ವಾರ

ವಿಶ್ವದ ಅದ್ಭುತಗಳಲ್ಲಿ ಪಿರಮಿಡ್ಡುಗಳು ಸೇರಿವೆ. ಪ್ರಾಚೀನ ಈಜಿಪ್ಟ್ ದೇಶದ ಜನ ತಮ್ಮ ದೊರೆಯನ್ನು ದೇವರ ಅಂಶವೆಂದು ಬಗೆದು ಅವನನ್ನು ದೇವರಂತೆಯೇ ಪೂಜಿಸುತ್ತಿದ್ದರು. ದೊರೆಗಳನ್ನು 'ಫೇರೋ' (Pharaoh) ಎಂದು ಕರೆಯುವುದುವಾಡಿಕೆಯಾಗಿದ್ದಿತು. ಮೆಂಫಿಸ್, ಥೀಬ್ಸ್, ಅಬುಸಿಮೆಲ್‌ಮೊದಲಾದ ದೇವರುಗಳಿಗೆ ಸರಿಸಮನಾಗಿಯೇ ಫೇರೋ ಪೂಜೆಗೊಳ್ಳುತ್ತಿದ್ದನು.

ಈ ದೊರೆಗಳು ಬದುಕಿದ್ದಾಗ ತುಂಬ ವೈಭವದಿಂದ ಇರುತ್ತಿದ್ದರು; ಸತ್ತಮೇಲೂ ತಮ್ಮ ಗೌರವಕ್ಕೆ ಕುಂದು ಬರಬಾರದೆಂದು ಮೊದಲೇ ತಮ್ಮ ಸಮಾಧಿಗಳನ್ನು ಅದ್ಭುತ ಪ್ರಮಾಣದಲ್ಲಿ ಕಟ್ಟಿಸಿಕೊಳ್ಳುತ್ತಿದ್ದರು. ಈಜಿಪ್ಟ್ ಜನರು ಈ ದೊರೆಗೆ ಸಾಮಾನ್ಯ ಜನರಿಗೆ ಬಂದಂತೆ ಸಾವು ಬರುವುದಿಲ್ಲವೆಂದೂ, ಅವರು ಅಜರಾಮರರಾಗಿಯೇ ಉಳಿಯುವರೆಂದೂ ನಂಬಿದ್ದರು. ಈ ದೊರೆಗಳ ಸಮಾಧಿಮಂದಿರದಲ್ಲಿ "ಸಾಮಾನ್ಯ ಜನರು ಪ್ರವೇಶ ಮಾಡಲಾರದ ಸ್ವರ್ಗದ್ವಾರ ನಿನಗಾಗಿ ತೆರೆದಿದೆ" ಎನ್ನುವ ಶಾಸನವನ್ನೂ ಮೂಡಿಸುತ್ತಿದ್ದರು. ಈ ದೊರೆಗಳ ದೇಹವನ್ನೂ 'ಮಮ್ಮಿ' ಮಾಡಿ ಕೆಡದಂತೆ ಉಳಿಸಿಡುತ್ತಿದ್ದರು.

ಚಿತ್ರ 7

ಹಾಥೋರ್ ದೇವತೆ ಸಮ್ಮೇಟಿಕಸ್ ಫೇರೋನನ್ನು ರಕ್ಷಿಸುತ್ತಿರುವ ಶಿಲ್ಪ: ಕ್ರಿ. ಪೂ. 572ರ ಸುಮಾರಿನದು

ಹೀಗೆ 'ಮಮ್ಮಿ' ಮಾಡಿದ ಕಳೇಬರದ ಮೇಲೆ ಈಜಿಪ್ಟ್ ಜನ ಕಟ್ಟುತ್ತಿದ್ದ ಸಮಾಧಿ ಮಂದಿರಕ್ಕೆ 'ಪಿರಮಿಡ್' ಎಂದು ಹೆಸರು. ಸಾವು ವ್ಯಕ್ತಿಯ ಪ್ರಾಣವನ್ನು ಕೊಂಡೊಯ್ದರೂ ಅವನ ಕೀರ್ತಿಯನ್ನಾಗಲೀ, ವೈಭವವನ್ನಾಗಲೀ, ಸಂಪತ್ತನ್ನಾಗಲೀ, ಮುಟ್ಟಲಾರದಂತೆ ಈ ಪಿರಮಿಡ್‌ಗಳು ವ್ಯವಸ್ಥೆಗೊಳಿಸುತ್ತಿದ್ದುವು. ಇವುಗಳೊಳಗೆ ರಾಜನ ಮೃತ ದೇಹವನ್ನಿಟ್ಟು ಅದರ ಬಳಿಯೇ ಅವನ ಆಭರಣ, ಆಯುಧ, ವಸ್ತ್ರ, ಸ್ವತ್ತುಗಳನ್ನೂ, ಆಹಾರ-ಪಾನೀಯಗಳನ್ನೂ, ಕೆಲವೊಮ್ಮೆ ಅವನ ಹತ್ತಿರದ ಬಂಟರನ್ನೂ ಇಟ್ಟು ಪಿರಮಿಡ್ಡುಗಳನ್ನು ಮುಚ್ಚಿಬಿಡುತ್ತಿದ್ದರು.

ಒಂದೊಂದು ಪಿರಮಿಡ್ಡಿನಲ್ಲೂ ಅಪಾರವಾದ ಧನ ಹೀಗೆ ಸಂಗ್ರಹವಾಗುತ್ತಿದ್ದಿತು. ಕಳ್ಳಕಾಕರರು ಇದನ್ನು ಒಡೆದು ಒಳಗೆ ನುಗ್ಗುತ್ತಿದ್ದುದೂ ಉಂಟು. ಅವರಿಗೆ ಕಳೇಬರವಾಗಲೀ, ನಿಧಿ ನಿಕ್ಷೇಪವಾಗಲೀ ಇಟ್ಟಿರುವ ಸ್ಥಳ ಪತ್ತೆಯಾಗಬಾರದೆಂದು ಕಳ್ಳ ದಾರಿಗಳನ್ನು ಗುಪ್ತವಾದ ಸುರಂಗಮಾರ್ಗಗಳನ್ನೂ ವ್ಯವಸ್ಥೆ ಮಾಡುತ್ತಿದ್ದರು.

ಪಿರಮಿಡ್ಡುಗಳು

ಈಗ ಸುಮಾರು ಎಪ್ಪತ್ತು ಪಿರಮಿಡ್ಡುಗಳು ಈಜಿಪ್ಟ್ ದೇಶದಲ್ಲಿ, ನೈಲ್‌ನದಿಯ ಆಸುಪಾಸಿನಲ್ಲಿ ಉಳಿದಿವೆ. ಕೈರೋ ಬಳಿಯಿರುವ ಗಿಸೆ ಪ್ರದೇಶದ ಮೂರು ಪಿರಮಿಡ್ಡುಗಳು ವಿಶ್ವ ವಿಖ್ಯಾತವಾಗಿವೆ. ಇವುಗಳಲ್ಲಿ ಛಿಯೋಪ್ಸ್ (Cheops) ಪಿರಮಿಡ್ ಎನ್ನುವುದು 482 ಅಡಿ ಎತ್ತರದ ಬೃಹತ್ ಸ್ಮಾರಕ; ಒಟ್ಟು ಹದಿಮೂರು ಎಕರೆಯಷ್ಟು ಭೂಮಿಯನ್ನು ಆವರಿಸಿರುವ ಈ ಪಿರಮಿಡ್ಡನ್ನು ಹಳೆಯ ಕಾಲದ ಸಪ್ತಾದ್ಭುತಗಳಲ್ಲಿ ಒಂದು

ಎಂದು ಪರಿಗಣಿಸಿದ್ದರು. ಇದರಲ್ಲಿ 2,300,000 ಕಲ್ಲುಚಪ್ಪಡಿಗಳನ್ನು ಬಳಸಿದ್ದಾರೆ. ಇದರ ತೂಕ ಸುಮಾರು 5,500,000 ಟನ್‌ಗಳಾದೀತೆಂದು ಊಹಿಸಿದ್ದಾರೆ. ಅದರ ಅಡಿವಿನ್ಯಾಸದ ಒಂದೊಂದು ಬಾಹುವೂ 756 ಅಡಿ ಉದ್ದ. "ಕಲ್ಲಿನ ದೊಡ್ಡ ಬೆಟ್ಟ ಇದು; ಇಡೀ ದೇಶದ ಜನ ಒಬ್ಬ ವ್ಯಕ್ತಿಗಾಗಿ ನಿರ್ಮಿಸಿರುವ ಸ್ಮಾರಕ" ಎಂದು ಈ ಪಿರಮಿಡ್ಡನ್ನು ಬಣ್ಣಿಸಿದ್ದಾರೆ.

ಖಿಯೋಪ್ಸ್ ಕ್ರಿಸ್ತಪೂರ್ವ 2700 ವರ್ಷಗಳ ಹಿಂದೆ, ಎಂದರೆ ಈಗ್ಗೆ ಸುಮಾರು 4,700 ವರ್ಷಗಳ ಹಿಂದೆ, ಈಜಿಪ್ಟ್ ದೇಶವನ್ನಾಳುತ್ತಿದ್ದನು. ಗ್ರೀಕರ ಇತಿಹಾಸಕಾರ ಹಿರೋಡೋಟಸ್ ಇವನ ವಿಚಾರ ಬರೆದಿದ್ದಾನೆ. ದೇಶದಲ್ಲಿದ್ದ ಗುಡಿಗಳನ್ನೆಲ್ಲ ಮುಚ್ಚಿಸಿ, ಪೂಜೆ ಪುನಸ್ಕಾರಗಳನ್ನು ನಿಲ್ಲಿಸಿ, ದೇಶದ ಜನರೆಲ್ಲರೂ ತನ್ನ ಪಿರಮಿಡ್ ಕಟ್ಟಲು ನೆರವಾಗಬೇಕೆಂದು ಅಪ್ಪಣೆ ಮಾಡಿದನಂತೆ ಈ ರಾಜ. ಪ್ರತಿ ಮೂರುತಿಂಗಳ ಕಾಲ ಒಂದು ಲಕ್ಷ ಜನ ಅಹರ್ನಿಶಿ ಕಲ್ಲುಗಳನ್ನು ತಂದು ಈ ಪಿರಮಿಡ್ಡನ್ನು ಕಟ್ಟಬೇಕೆಂದು ವ್ಯವಸ್ಥೆ ಮಾಡಿದ. ಹೀಗೆ ಮೂವತ್ತು ವರ್ಷಗಳು ಜನ ಎಡೆಬಿಡದೆ ದುಡಿದು ಈ ಪಿರಮಿಡ್ಡನ್ನು ಕಟ್ಟಿ ಮುಗಿಸಿದರು. ರಾಜನ ಸ್ವಾಭಿಮಾನಕ್ಕೆ ಎಣೆಯುಂಟೆ? ಅಂತೂ ವಿಶ್ವದಲ್ಲೇ ಅದು ಅದ್ಭುತ ಸ್ಮಾರಕವಾಯಿತು. ಈ ಖಿಯೋಪ್ಸ್ ಪಿರಮಿಡ್ಡಿನ ಬಳಿಯೇ ಇರುವ ಛೆಫ್ರೆನ್ ಪಿರಮಿಡ್ 471 ಅಡಿ ಎತ್ತರವಿದೆ. ಮೈಸಿರಿನಸ್ ಪಿರಮಿಡ್ 215 ಅಡಿ ಎತ್ತರವಿದೆ.

ಪಿರಮಿಡ್ಡುಗಳು ಭೂಮಿಯಿಂದ ತ್ರಿಕೋಣಾಕೃತಿಯಲ್ಲಿ ಎದ್ದು ನಿಲ್ಲುತ್ತವೆ. ಅವುಗಳ ತಳವಿನ್ಯಾಸವೇನೋ ಚಚ್ಚೌಕವೇ. ಕಲ್ಲು ಚಪ್ಪಡಿಗಳನ್ನು ಜೋಡಿಸಿ ಪಕ್ಕಗಳನ್ನು ಇಳಿಜಾರು ಮಾಡುತ್ತಾರೆ. ಮೇಲ್ಭಾಗದಲ್ಲಿ ಕಟ್ಟಡ ಬಿಂದುವಿನಲ್ಲಿ ಮುಗಿಯುತ್ತದೆ; ಪಿರ

ಮಿಡ್ಡಿನ ಆಕಾರ ಸರಳವಾದುದು; ಕಟ್ಟಲು ಜಾಣ್ಮೆಯೂ ಹೆಚ್ಚಾಗಿ ಬೇಕಾಗಿಲ್ಲ. ಶಿಲ್ಪವಾಗಲೀ ಅಲಂಕರಣವಾಗಲೀ ಏನೂ ಇರದು. ಪ್ರವೇಶದ್ವಾರದಿಂದ ಒಳಹೊಕ್ಕರೆ ಸುರಂಗ ಮಾರ್ಗದ ಮೂಲಕ ಸಮಾಧಿಗೃಹವನ್ನು ಸೇರಬಹುದು. ಅಲ್ಲಿ ರಾಜನ ಅಥವಾ ರಾಣಿಯ ಕಳೇಬರವನ್ನು 'ಮಮ್ಮಿ' ಮಾಡಿ ಒಂದು ಕರಂಡದಲ್ಲಿ (sacrophagus) ಇಟ್ಟಿರುತ್ತಾರೆ. ಬಂಗಾರ, ಮುತ್ತು, ರತ್ನ, ವಜ್ರಗಳನ್ನು ಇದರ ಮೇಲೆ ಮೂಡಿಸಿರುವುದೂ



ಚಿತ್ರ 8

ಖಿಯೋಪ್ಸ್ ಪಿರಿಮಿಡ್ಡಿನ ರಚನೆ

1. ರಾಜನ ಸಮಾಧಿ; 2. ರಾಣಿಯ ಸಮಾಧಿ; 3. ಗಾಳಿ-ಬೆಳಕಿನ ದಾರಿ; 4. ಗುಟ್ಟುದಾರಿ (ಪ್ರವೇಶ); 5. ಸುಳ್ಳು ಸಮಾಧಿ; 6. ತಪ್ಪು ದಾರಿ

ಉಂಟು. ಒಳಗೆ ಕೆಲಸ ಮಾಡುವಾಗ ಕೆಲಸಗಾರರಿಗೆ ಗಾಳಿ, ಬೆಳಕು ಬರಲು ರಂಧ್ರಗಳನ್ನು ಮಾಡಿರುವುದೂ ಕಾಣುತ್ತದೆ. ಕಟ್ಟಡವೆಲ್ಲ ಮುಗಿದು ಕಳೇಬರವನ್ನು ಒಳಗಿಟ್ಟ ನಂತರ ಈ ಬಾಗಿಲುಗಳನ್ನೂ ಸುರಂಗಗಳನ್ನೂ ಮುಚ್ಚಿಬಿಡುತ್ತಾರೆ. ಇಡೀ ಪಿರಮಿಡ್ಡಿನ ಮೇಲ್ಭಾಗಗಳಲ್ಲಿ ಹಾಲುಗಲ್ಲಿನ ಚಪ್ಪಡಿಗಳನ್ನು ಸಮನಾಗಿ ಕತ್ತರಿಸಿ ಜೋಡಿಸುತ್ತಾರೆ. ಮರುಭೂಮಿಯಲ್ಲಿ ಎಂಥ ದೃಶ್ಯವಾಗಿದ್ದಿರಬಹುದು!

ಕಳ್ಳರು ಕಳೇಬರದ ಕೋಣೆಯನ್ನು ಕಾಣದಿರುವಂತೆ, ಅವರಿಗೆ ಜಾಡು ತಪ್ಪಿಸಲು ತಪ್ಪುದಾರಿಗಳನ್ನೂ ಮಾಡಿರುತ್ತಾರೆ. ಛಿಯೋಪ್ಸ್ ಪಿರಮಿಡ್ಡಿನಲ್ಲಿ ಇದನ್ನು ಸ್ವಾರಸ್ಯವಾಗಿ ಮೂಡಿಸಿರುವುದನ್ನು ಕಾಣಬಹುದು. ನಕಲಿ ಶವಕರಂಡ, ಕಳೇಬರದ ಕೋಣೆಗಳನ್ನು ಹೀಗೆಯೇ ಮಾಡಿರುತ್ತಾರೆ.

ಮೃತನಾದ ರಾಜನಿಗೆ ಪರಲೋಕದಲ್ಲಿ ಅಗತ್ಯವೆನಿಸಿದ ಆಹಾರ, ಪಾನೀಯ, ಹಣ, ಆಭರಣ, ಆಸನ ಮತ್ತಿತರ ಸಾಮಗ್ರಿಗಳನ್ನು ಪ್ರತ್ಯೇಕವಾದ ಸಮಾಧಿಮಂದಿರದಲ್ಲಿ ಇಡುತ್ತಿದ್ದರು. ಪಿರಮಿಡ್ಡಿನ ಪೂರ್ವಕ್ಕೆ ಸಮಾಧಿಮಂದಿರ ಬೇರೆಯಾಗಿರುತ್ತಿದ್ದಿತು. ಈ ಮಂದಿರಕ್ಕೂ ಪಿರಮಿಡ್ಡಿಗೂ ಸೇರಿದಂತೆ ದಾರಿಯೂ ಕೋಣೆಗಳು ಇರುತ್ತಿದ್ದುವು.

ಪಿರಮಿಡ್ಡು ಬಳಕೆಗೆ ಬರುವ ಮುನ್ನ ಈಜಿಪ್ಟ್ ಜನ ಬೆಂಚಿನ ಆಕಾರದ 'ಮಸ್ತಬ'ಗಳನ್ನು ಸಮಾಧಿಮಂದಿರವಾಗಿ ಕಟ್ಟುತ್ತಿದ್ದರು. ಅರಾಬಿಕ್ ಭಾಷೆಯಲ್ಲಿ 'ಮಸ್ತಬ' ಎಂದರೆ ಬೆಂಚು. ಈಜಿಪ್ಟಿನ ಹಳ್ಳಿಗಳಲ್ಲಿ ಇಂದಿಗೂ ಈ ಆಕಾರದ ಮಣ್ಣುಬೆಂಚುಗಳನ್ನು ಬಳಸುತ್ತಾರೆ. ಮಸ್ತಬದ ನಡುವೆ ಭೂಮಿಯೊಳಗೆ ಸುರಂಗವನ್ನು ತೋಡಿ ಕೆಳಗೆ ಸಮಾಧಿಯ ಕೋಣೆಯನ್ನು ಕಟ್ಟಿ ಅದ

ರೊಳಗೆ ಕಳೇಬರವನ್ನು, ಮೃತನ ಸಾಮಾನು ಸರಂಜಾಮುಗಳನ್ನೂ ಇಟ್ಟು ಗೋಡೆಯಿಂದ ಕೋಣೆಯ ಬಾಗಿಲನ್ನು ಮುಚ್ಚಿಬಿಡು ತ್ತಿದ್ದರು. ಮಸ್ತಬದ ಪದ್ಧತಿಯಲ್ಲಿ ಸಮಾಧಿಮಂದಿರ ಪ್ರತ್ಯೇಕ ವಾಗಿರುತ್ತಿರಲಿಲ್ಲ. ಬಂಡೆಯ ಮೇಲೆ ಮಸ್ತಬವನ್ನು ಕಟ್ಟು ವುದು ಸಾಮಾನ್ಯವಾಗಿದ್ದಿತು. ಸುರಂಗವನ್ನು ಬಂಡೆಯಲ್ಲಿ ಕೊರೆದೇ ನಿರ್ಮಿಸುತ್ತಿದ್ದರು.

ಕ್ರಿಸ್ತಪೂರ್ವ 3000ರ ಸುಮಾರಿಗೆ ಜೀವಿಸಿದ್ದ ದೊರೆ ಜೋಸ್‌ರ್ ಎನ್ನುವವನು ಹಿಂದೆ ಯಾರಿಗೂ ಇರದ ಅದ್ಭುತ ಸಮಾಧಿಯನ್ನು ತನಗೆಂದು ಕಟ್ಟಿಸಿಕೊಂಡನು. ಇವನ ಕಾಲದಲ್ಲಿ ಪಿರಮಿಡ್ಡು ಇನ್ನೂ ಪ್ರೈದಳೆದಿರಲಿಲ್ಲ. ಮಸ್ತಬವೇ ಬಳಕೆಯ ಲ್ಲಿದ್ದಿತು. ಒಂದು ಮಸ್ತಬದ ಮೇಲೆ ಇನ್ನೊಂದು ಹೀಗೆ ಆರು ಮಸ್ತಬಗಳನ್ನು ಏರಿಸಿ ಜೋಸ್‌ರ್ ಸಮಾಧಿ ನಿರ್ಮಿತವಾಗಿದೆ. ಆಯತಾಕಾರದ ತಳವಿನ್ಯಾಸ 344 ಅಡಿ ಅಗಲ, 413 ಅಡಿ ಉದ್ದವಿದೆ; ಸಮಾಧಿಯ ಎತ್ತರ 200 ಅಡಿ. ಮೇಲ್ಭಾಗ ಮಟ್ಟಸವಾಗಿದೆ.

ಇವನ ನಂತರ ಬಾಳಿದ ಸ್ನೆಫ್ರು ಎನ್ನುವ ರಾಜ ಇಂಥದೇ ಮಸ್ತಬ ಗಳ ಸಮಾಧಿಯನ್ನು ಕಟ್ಟಿಸಿಕೊಂಡು ಅದರ ಪಕ್ಕಗಳನ್ನು ಇಳಿ ಜಾರು ಮಾಡಿಸಿದನು. ಇದೇ ಪಿರಮಿಡ್ಡಿನ ಮೊದಲ ಪ್ರಯೋಗ. ಅಲ್ಲಿಂದ ಮುಂದೆ ಪಿರಮಿಡ್ಡುಗಳೇ ವಿಶೇಷವಾಗಿ ಬಳಕೆಗೆ ಬಂದುವು.

ಪಿರಮಿಡ್ಡುಗಳ ಒಳಗೆ ಸುರಂಗಮಾರ್ಗಗಳ ಗೋಡೆಯ ಮೇಲೆ ಶಾಸನಗಳನ್ನೂ ಮೂಡಿಸುವ ವಾಡಿಕೆಯಿದ್ದಿತು. ಮೃತನ ಜೀವವು ಪರಲೋಕಕ್ಕೆ ತೆರಳುವಾಗ ಅದಕ್ಕೆ ಅಗತ್ಯವಾದ ಶಿಕ್ಷಾ ಪಾಠವನ್ನು ತಿಳಿಸುವುದು ಈ ಶಾಸನಗಳ ಉದ್ದೇಶ; ಪರಲೋಕದ

ಮಾರ್ಗದಲ್ಲಿ ಒದಗಿಬರಬಹುದಾದ ಅಡ್ಡಿ–ಆತಂಕಗಳನ್ನೂ ವಿವರಿಸುತ್ತವೆ ಈ ಲೇಖಗಳು. ಇವುಗಳನ್ನು ಬರೆದಿರುವ ಲಿಪಿ ಸುಲಭವಾಗಿ ಅರ್ಥವಾಗುವುದಿಲ್ಲ; ಚಿತ್ರಲಿಪಿಯಂತಿರುವ ಇದನ್ನು 'ಹೈರೋಗ್ಲಿಫಿಕ್' ಎನ್ನುತ್ತಾರೆ. ನೆಪೋಲಿಯನ್ ಚಕ್ರವರ್ತಿ 1798 ರಲ್ಲಿ ಈಜಿಪ್ಟ್ ದೇಶದಲ್ಲಿ ದಂಡಯಾತ್ರೆ ನಡೆಸಿದಾಗ ರೊಸೆಟ್ಟ ಕಲ್ಲೊಂದು ದೊರೆತು ಅದರಲ್ಲಿ ಎರಡು ಲಿಪಿಗಳಿದ್ದ ಒಂದೇ ಶಾಸನವನ್ನು ವಿದ್ವಾಂಸರು ಪರಿಶೀಲಿಸಿ ಅದರ ನೆರವಿನಿಂದ ಮೇಲೆ ಹೇಳಿದ ಲಿಪಿಯನ್ನು ಅರ್ಥಮಾಡಿಕೊಂಡರು.

4 ಮೆಸೊಪೊಟೇಮಿಯ

ಕ್ರಿಸ್ತ ಹುಟ್ಟಲು 4,000 ವರ್ಷಗಳ ಮೊದಲೇ ಚೀನದಲ್ಲಿ ಭವ್ಯವಾದ ಸಂಸ್ಕೃತಿಯಿದ್ದಿತು. ಅದು ಕ್ರಮೇಣ ಏಷ್ಯಾಖಂಡ ದಲ್ಲೆಲ್ಲಾ ಪಸರಿಸಿತು. ಪಶ್ಚಿಮ ಯೂರೋಪನ್ನೂ ಇದು ಮುಟ್ಟಿತು. ನೈಲ್ ನದಿಯ ದಡದಲ್ಲಿ ಈಜಿಪ್ಟ್ ಸಂಸ್ಕೃತಿಯೂ, ಯೂಫ್ರೆಟಿಸ್ ನದೀತೀರದಲ್ಲಿ ಬೇಬಿಲೋನಿಯ ಸಂಸ್ಕೃತಿಯೂ ಬೆಳೆದದ್ದು ಇದರ ನಂತರವೇ. ಇವೆರಡೂ ವಿಶ್ವದ ಮುಖ ಸಂಸ್ಕೃತಿಗಳಲ್ಲಿ ಸೇರಿವೆ.

ಮೆಸೊಪೊಟೇಮಿಯ ಎನ್ನುವ ಪ್ರದೇಶ ಯೂಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ನಡುವೆ ಇದೆ; ಇಲ್ಲಿ ಬೆಳೆದದ್ದೇ ಬೇಬಿ ಲೋನಿಯದ ಸಂಸ್ಕೃತಿ. 'ಮೆಸೊಪೊಟೇಮಿಯ' ಎನ್ನುವ ಮಾತಿಗೆ 'ನದಿಗಳ ನಡುವೆ ಇರುವ ಸ್ಥಳ' ಎಂದೇ ಅರ್ಥ. ಈ ಪ್ರದೇಶದಲ್ಲಿ ಎರಡು ಸಹಜ ವಿಭಾಗಗಳಿವೆ. ದಕ್ಷಿಣದಲ್ಲಿ ಮಟ್ಟಸ ವಾದ, ಕೆಳನೆಲೆಯಲ್ಲಿರುವ ಭಾಗ; ಇಲ್ಲಿ ಬೇಬಿಲೋನಿಯ ಸಂಸ್ಕೃತಿ ಬೆಳೆಯಿತು. ಉತ್ತರದಲ್ಲಿ ಗುಡ್ಡಗಾಡು ಭೂಮಿ; ಇಲ್ಲಿ ಅಸ್ಸೀರಿಯ ಸಂಸ್ಕೃತಿ ಬೆಳೆಯಿತು. ಎರಡೂ ಸ್ಪರ್ಧಿಗಳಾದ ರಾಜ್ಯಗಳೇ; ಒಮ್ಮೆ ಒಂದು, ಒಮ್ಮೆ ಇನ್ನೊಂದು ಮೆಸೊಪೊ ಟೇಮಿಯ ಪ್ರದೇಶದಲ್ಲಿ ಪ್ರಬಲವಾಗಿರುತ್ತಿದ್ದುವು.

ಪಾಶ್ಚಾತ್ಯ ಐರೋಪ್ಯ ಸಂಸ್ಕೃತಿಯಲ್ಲಿ ಈ ಪ್ರದೇಶಕ್ಕೆ ತುಂಬ ಮಾನ್ಯತೆಯಿದ್ದಿತು. ಇಲ್ಲಿಯೇ ಆಡಂ ಮತ್ತು ಈವ್ ಇದ್ದ ಏಡನ್ ಉದ್ಯಾನವಿದ್ದಿತೆಂದು ಜನ ನಂಬಿದ್ದರು. ನದಿಗಳಿಂದಾಗಿ ಪ್ರದೇಶವೆಲ್ಲ ಫಲವತ್ತಾಗಿದ್ದಿತು. ನಾಲೆಗಳನ್ನು ತೆಗೆದು ಬೇಸಾ

ಯಕ್ಕೆ ಬಳಸುತ್ತಿದ್ದರು. ಹೀಗಾಗಿ ಅಲ್ಲಿನ ಜನ ಅಲ್ಲಿಯೇ ನೆಲೆ ನಿಂತು ಸಮೃದ್ಧವಾದ ಬಾಳನ್ನು ನಡೆಸುವುದು ಸಾಧ್ಯವಾಯಿತು. ಬಾಳು ಸಮೃದ್ಧಿಯಿಂದಿದ್ದಾಗ ಕಲೆಗಳೂ, ವಿಜ್ಞಾನವೂ ಬೆಳೆ ಯುವುದು ಸಹಜವಷ್ಟೆ. ಬರೆಯುವ ಕಲೆ, ಕಟ್ಟಡಗಳನ್ನು ಕಟ್ಟುವ ಉದ್ಯಮ, ನ್ಯಾಯಾಂಗ ನಿರ್ಮಾಣ ಮೊದಲಾದುವೆಲ್ಲ ಇಲ್ಲಿಯೇ ಶುರುವಾಗಿ ಕ್ರಮೇಣ ಯೂರೋಪಿಗೆಲ್ಲ ಹರಡಿದುವು.

ಈ ಪ್ರದೇಶದ ಸಮೃದ್ಧಿಯೇ ಅಸ್ಸೀರಿಯ ಜನರಿಗೂ ಬೇಬಿ ಲೋನಿಯ ಜನರಿಗೂ ತಿಕ್ಕಾಟಕ್ಕೆ ಕಾರಣವಾಯಿತು. ಅವರು ಮಾತ್ರವಲ್ಲ, ಹೊರಗಿನ ಹಿಟ್ಟೈಟ್ ಜನ, ಈಜಿಪ್ಟ್ ದೇಶದ ಜನ, ಪರ್ಶಿಯನ್ ಜನ ಇವರೆಲ್ಲರ ಕಣ್ಣನ್ನು ಕುಕ್ಕಿ ಅವರ ದಾಳಿಗೆ ಎಡೆಮಾಡಿಕೊಟ್ಟಿತು. ಕ್ರಿಸ್ತಪೂರ್ವ 539 ರ ಸುಮಾರಿಗೆ ಪರ್ಶಿ ಯನ್ ಜನ ಈ ಪ್ರದೇಶವನ್ನು ತಮ್ಮ ಸಾಮ್ರಾಜ್ಯದಲ್ಲಿ ಸೇರಿಸಿ ಕೊಂಡುಬಿಟ್ಟರು.

ಸುಮೇರಿಯ ದೊರೆಗಳು

ಮೆಸೊಪೊಟೇಮಿಯದ ಪ್ರಾಚೀನ ಇತಿಹಾಸದಲ್ಲಿ ಸುಮೇರಿ ಯನ್ ಜನರ ಮತ್ತು ಅಕ್ಕೇಡಿಯನ್ ಜನರ ಪಾತ್ರ ಹಿರಿದಾದುದು. ಊರ್, ಲಗಾಶ್, ಅಕ್ಕೇಡಿಯ ಮೊದಲಾದ ನಗರಗಳಲ್ಲಿ ಇವರು ನೆಲೆಸಿ, ಅವರ ಆಳ್ವಿಕೆಯಲ್ಲಿಯೇ ಬೇಬಿಲೋನಿಯಜಿಲ್ಲೆ ವೈಭವಿಸಿತು. ಬರವಣಿಗೆ ಆರಂಭವಾದುದೂ, ಅಂಕಿಗಳು ಬಳಕೆಗೆ ಬಂದುದೂ, ಉತ್ತುಂಗ ಶಿಖರದ (ziggurat) ಕಟ್ಟಡಗಳು ಮೂಡಿದುದೂ ಸುಮೇರಿಯ ಜನರಿಂದಲೇ. ಅರೇಬಿಯ ಮರುಭೂಮಿಯಿಂದ ಬಂದ ಅಕ್ಕೇಡಿಯ ಜನರೊಂದಿಗೆ ಸೆಣಸಿ, ತಮ್ಮ ಚಕ್ರಾಧಿಪತ್ಯ ವನ್ನು ಇಡೀ ಮೆಸೊಪೊಟೇಮಿಯದಲ್ಲೆಲ್ಲ ಸ್ಥಾಪಿಸಿದವರು

ಉರ್ ನಗರದ ಸುಮೇರಿಯನ್ ಜನರೇ. ಇವರ ಸಾಮ್ರಾಜ್ಯದಲ್ಲಿ ಉರ್ ಮುಖ್ಯ ನಗರವಾಗಿದ್ದಿತು. ಅಲ್ಲಿ ಸಂಸ್ಕೃತಿ ವಿಶಿಷ್ಟವಾಗಿ ಬೆಳೆಯಿತು. ಇನ್ನೂರು ವರ್ಷಗಳು ವೈಭವದಿಂದ ಮೆರೆದ ಈ ಸುಮೆರೀಯ ದೊರೆಗಳನ್ನು ಎಲಮೈಟ್ ಜನ ಸೋಲಿಸಿದರು. ರಾಜ್ಯ ಇಸಿನ್, ಲಾರ್ಸಾ ಎಂದು ಎರಡಾಗಿ ಒಡೆಯಿತು.

ಕ್ರಿಸ್ತಪೂರ್ವ 1800 ರ ಸುಮಾರಿಗೆ ಹಮ್ಮುರಬಿ ಎಂಬ ದೊರೆ ಇಸಿನ್, ಲಾರ್ಸಾ ವಿಭಾಗಗಳನ್ನು ಒಂದುಗೂಡಿಸಿ ಬೇಬಿಲೋನಿಯನ್ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಅವನು ಆಳಿದ 43 ವರ್ಷಗಳು ಪ್ರಾಚೀನ ಬೇಬಿಲೋನ್ ಸಂಸ್ಕೃತಿಯ ಸುವರ್ಣ ಸಂಧಿಯೆನ್ನಬಹುದು. ಯೂಫ್ರೆಟಿಸ್ ನದಿಯ ದಡದ ಮೇಲಿನ ಬೇಬಿಲೋನ್ ಅವನ ರಾಜಧಾನಿಯಾಗಿದ್ದಿತು. ಈ ನಗರದ ದೇವತೆ ಮರ್ಡುಕ್ ದೇವಾಧಿದೇವನೆಂದೂ ಸಾಮ್ರಾಜ್ಯದ ಅಭಿಮಾನಿ ದೇವತೆಯೆಂದೂ ಪರಿಗಣಿತನಾದ. ಈ ನಗರ ಸುಪ್ರಸಿದ್ಧ ವ್ಯಾಪಾರ ಕೇಂದ್ರವಾಯಿತು.

ಸೂಸದಲ್ಲಿ ದೊಡ್ಡದೊಂದು ಕರಿಬಂಡೆಯ ಮೇಲೆ ಹಮ್ಮುರಬಿ ತನ್ನ ಶಾಸನಗಳನ್ನು ಕಡೆಯಿಸಿದನು. ಹಮ್ಮುರಬಿಯ ನ್ಯಾಯ ಕಠೋರವಾಗಿದ್ದಿತು; ಕೊಳ್ಳುವಾಗ, ಮಾರುವಾಗ, ಅನ್ಯಾಯ ನಡೆಸಿದವರಿಗೆ ಮರಣದಂಡನೆಯಾಗುತ್ತಿದ್ದಿತು. ಶ್ರೀಮಂತರು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಹೆಚ್ಚಿನದು; ಬಡವರು, ಕೂಲಿಕಾರರು ಇವರ ತಪ್ಪಿಗೆ ಶಿಕ್ಷೆ ಕಡಮೆ. ಹಮ್ಮುರಬಿಯ ಶಾಸನ ಇಂದು ಜಗತ್ಪ್ರಸಿದ್ಧವಾಗಿದೆ.

ಈತನು ತೀರಿಕೊಂಡ ನಂತರ ಸಿರಿಯದಿಂದ ಹಿಟ್ಟೈಟ್ ಜನರೂ, ಸಗ್ರೋಸ್ ಬೆಟ್ಟದಿಂದ ಕಸ್ಸೈಟ್ ಜನರೂ ಬಂದು ಈ ಸಾಮ್ರಾಜ್ಯವನ್ನು ದಾಳಿ ಮಾಡಿದರು. ಇದರಿಂದಾಗಿ ಉತ್ತರದ

ಚಿತ್ರ 9

ಇಮ್ಮಡಿ ಅಷುರ್‌ನಸಿರ್‌ಪಲ್ – ಅಸ್ಸಿರಿಯ ಚಕ್ರರ್ವತಿಯ ಅರ್ಧಶಿಲ್ಪಫಲಕ

ಕ್ರಿ. ಪೂ. 883 ರದು

ಅಸ್ಸೀರಿಯನ್ ಜನ ತಮ್ಮ ರಾಜ್ಯವನ್ನು ವಿಸ್ತರಿಸಿಕೊಳ್ಳುವುದು ಸಾಧ್ಯವಾಯಿತು. ಇವರ ರಾಜ ಅಸ್ಸುರ್‌ನಸಿಪಾಲ್ ಮೆಡಿಟರೇನಿಯನ್ ತೀರದವರೆಗೂ ದಂಡಯಾತ್ರೆ ಮಾಡಿದ. ಇವನ ಕಾಲದಲ್ಲಿ ಅಸ್ಸೀರಿಯ ಜನ ತುಂಬ ಕ್ರೂರಿಗಳೆಂಬ ಕುಖ್ಯಾತಿ ಜಗತ್ತಿನಲ್ಲೆಲ್ಲ ಹರಡಿತು. ಬೇಬಿಲೋನಿಯದಲ್ಲೇ ಪಟ್ಟಾಭಿಷಿಕ್ತನಾದ ಅಸ್ಸೀರಿಯನ್ ದೊರೆ ತಿಗ್ಲತ್ ಪಿಲೆಸರ್ (ಮುಮ್ಮಡಿ), ಅವನ ನಂತರ ರಾಜನಾದ ಶಲ್‌ಮನೆರ್, ಇಮ್ಮಡಿ ಸರ್ಗಾನ್, ಸೆನ್ನಚೆರಿಬ್, ಅಸ್ಸುರ್ ಬನಿಪಾಲ್ ಇವರೆಲ್ಲರೂ ಅಸ್ಸೀರಿಯದ ಕೀರ್ತಿಯನ್ನು ಹೆಚ್ಚಿಸಿದರು. ಏಷ್ಯಾ ಮೈನರ್ ಪ್ರದೇಶವೆಲ್ಲ ಇವರ ಪ್ರಭಾವದಲ್ಲಿದ್ದಿತು. ಟೈಗ್ರಿಸ್ ನದೀ ತೀರದ ನಿನೆವೇ ಎನ್ನುವ ಊರು ಅವರ ರಾಜಧಾನಿ.

ಇವರು ಯೂಫ್ರೆಟಿಸ್ ನದಿಯನ್ನೇ ತಿರುಗಿಸಿ ಬೇಬಿಲೋನ್ ಪಟ್ಟಣವನ್ನು ಮುಳುಗಿಸಿಬಿಟ್ಟರು! ಸಿರಿಯ ರಾಜ್ಯಗಳೆಲ್ಲ ಇವರ ಕ್ರೌರ್ಯಕ್ಕೆ ಬೆದರಿ ಕಂಗಾಲಾದುವು. ಅಸ್ಸೀರಿಯ ಜನ ಯುದ್ಧಪ್ರಿಯರು ಮಾತ್ರವಲ್ಲ, ಸೊಗಸಾದ ಕಟ್ಟಡಗಳನ್ನು ಕಟ್ಟಿದರು, ಶಿಲ್ಪಗಳನ್ನು ಕಡೆಯಿಸಿದರು. ಆ ರಾಜರಲ್ಲಿ ತುಂಬ ಪ್ರಸಿದ್ಧನಾದ ಅಸ್ಸುರ್ ಬನಿಪಾಲ್ (ಕ್ರಿ.ಪೂ. 669–626) ನ ಗ್ರಂಥಭಂಡಾರದಲ್ಲಿ ಜೇಡಿಮಣ್ಣಿನ ಹಲಗೆಗಳಲ್ಲಿ ಬರೆದಿಟ್ಟ 22,000 ಗ್ರಂಥಗಳಿದ್ದುವು. ಬ್ರಿಟಿಷ್ ಮ್ಯೂಸಿಯಂನಲ್ಲಿ ಇಂದಿಗೂ ಅವನ್ನು ಕಾಣಬಹುದು.

ಎರಡನೆಯ ಬೇಬಿಲೋನ್ ಸಾಮ್ರಾಜ್ಯ

ಅಸ್ಸೀರಿಯ ರಾಜರು 500 ವರ್ಷಗಳಿಗೂ ಮೀರಿ ಮೆರೆದ ನಂತರ ಬೇಬಿಲೋನಿಯನ್ ಜನ ಮತ್ತೆ ಪ್ರಬಲರಾಗಿ ಇವರನ್ನು

ಹಿಮ್ಮೆಟ್ಟಿಸಿದರು. ಕ್ರಿಸ್ತಪೂರ್ವ 612ರಲ್ಲಿ ಬೇಬಿಲೋನಿಯದ ನಬೊಪೋಲಸ್ಸರ್ ಎನ್ನುವ ರಾಜ ನಿನೆವೇ ನಗರವನ್ನು ನೆಲಸಮ ಮಾಡಿಬಿಟ್ಟ; ಅಸ್ಸೀರಿಯ ಸಾಮ್ರಾಜ್ಯದ ರಾಜಧಾನಿಯಾಗಿದ್ದ ನಗರ ಅದು. ಅವನ ವಂಶದವರು ಒಂದು ನೂರು ವರ್ಷಗಳ ವರೆಗೆ ಬೇಬಿಲೋನ್ ಸಾಮ್ರಾಜ್ಯವನ್ನು ಬೆಳಗಿದರು.

ನಬೊಪೋಲಸ್ಸರ್ ರಾಜನ ಮಗ ನೆಬುಚಡ್ನೆಸ್ಸಾರ್ ಎಂಬು ವನು ಸಿರಿಯ ಮತ್ತು ಜೆರುಸಲೆಂಗಳನ್ನು ಗೆದ್ದು ಬೇಬಿಲೋನ್ ನಗರದ ವೈಭವವನ್ನು ಹೆಚ್ಚಿಸಿದನು. ಯೆಹೂದ್ಯರಿಗೆ ಈ ನಗರ ದಲ್ಲಿ ಆಶ್ರಯವನ್ನಿತ್ತನು. ಈ ರಾಜನು ಬೇಬಿಲೋನ್‌ನಲ್ಲಿ ಕಟ್ಟಿಸಿದ 'ಸಿಗ್ಗುರತ್' ಕಟ್ಟಡ ಪ್ರಪಂಚದಲ್ಲೇ ಅದ್ಭುತವಾದ ಕಟ್ಟಡವೆಂದು ಪ್ರಖ್ಯಾತವಾಗಿದೆ. ಯೆಹೂದ್ಯರು ಅದನ್ನು 'ಬೇಬೆಲ್ ಗೋಪುರ' ಎಂದು ಕರೆದರು. ಬೇಬಿಲೋನಿಯದಲ್ಲೇ 'ತೂಗುದ್ಯಾನ' (Hanging gardens) ಇದ್ದಿತು. ಇದೂ ಈ ರಾಜನ ಕಲ್ಪನೆಯೇ.

ಈ ರಾಜನು ತೀರಿಕೊಂಡ ತರುವಾಯ ಅವನ ವಂಶವೂ ನಿರ್ನಾಮವಾಯಿತು. ಬೇಬಿಲೋನಿಯಾದ ಕಡೆಯ ರಾಜ ನಬೋನಿಡಸ್ ಕ್ರಿಸ್ತಪೂರ್ವ 556 ರಿಂದ 539 ರವರೆಗೆ ಆಳಿದನು. ಅವನು ಬಹುಕಾಲ ಅರೇಬಿಯದಲ್ಲೇ ಇದ್ದುಬಿಟ್ಟ. ಬೇಬಿಲೋನಿ ಯನ್ ಸಾಮ್ರಾಜ್ಯದ ಅಭಿಮಾನದೇವತೆಯಾದ ಮರ್ದುಕ್ ನನ್ನು ಬಿಟ್ಟು ಈ ರಾಜನು ಚಂದ್ರನನ್ನೇ ದೇವಾಧಿದೇವತೆಯೆಂದು ಆರಿಸಿಕೊಂಡುದು ಈ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿ ತಂತೆ!

ಕ್ರಿಸ್ತಪೂರ್ವ 539 ರ ಸುಮಾರಿಗೆ ಬೇಬಿಲೋನಿಯನ್ ಸಾಮ್ರಾಜ್ಯ ತುಂಬ ದುರ್ಬಲವಾಗಿದ್ದಿತು. ಪರ್ಶಿಯ ದೇಶದ

ಅರಸನಾಗಿದ್ದ ಕೈರಸ್ ಬೇಬಿಲೋನಿಯಂದ ಮೇಲೆ ದಂಡೆತ್ತಿ ಬಂದ. ಆಗ ಬೇಬಿಲೋನಿಯಾದ ರಾಜಕುಮಾರ ಬೆಲ್ ಷಸ್ಸಾರ್ ಓಪಿಸ್ ಕದನದಲ್ಲಿ ಸೋತ. ಬೆಲ್‌ಷಸ್ಸಾರ್ ರಾಜ ನಬೋನಿಡಸ್‌ನ ಮಗ. ನಬೋನಿಡಸ್ ಅರೇಬಿಯದಲ್ಲಿಯೇ ಇರುತ್ತಿದ್ದು, ಮಗ ಬೆಲ್‌ಷಸ್ಸಾರ್‌ನೇ ಅವನ ಪರವಾಗಿ ರಾಜ್ಯವಾಳುತ್ತಿದ್ದನು. ಬೆಲ್‌ಷಸ್ಸಾರ್ ಸೋತ ತರುವಾಯ, ನಬೋನಿಡಸ್ ರಾಜನನ್ನು ಗಡೀಪಾರು ಮಾಡಿಬಿಟ್ಟರು.

ಅಲ್ಲಿಂದ ಮುಂದೆ ಬೇಬಿಲೋನಿಯದ ಸ್ವಾತಂತ್ರ್ಯ ಅಳಿದು, ಪರ್ಶಿಯನ್ ಸಾಮ್ರಾಜ್ಯಕ್ಕೆ ಅಧೀನವಾದ ಪ್ರಾಂತ್ಯವಾಯಿತು. ಹೀಗಾದರೂ ಅದರ ಆಕರ್ಷಣೆಯೇನೂ ಮುಗಿಯಲಿಲ್ಲ. ಶತಮಾನಗಳವರೆಗೆ ಪರ್ಶಿಯನ್ನರೂ, ಗ್ರೀಕರೂ, ಪಾರ್ಥಿಯನ್ನರೂ, ರೋಮನ್ನರೂ ಈ ದೇಶವನ್ನು ವಶಪಡಿಸಿಕೊಳ್ಳಲು ಕಾದಾಡಿದರು. ಕ್ರಿಸ್ತಾಬ್ದ ಏಳನೆಯ ಶತಮಾನದವರೆಗೂ ಈ ದೇಶದ ಜನ ತಮ್ಮ ಆಚಾರ ವ್ಯವಹಾರಗಳನ್ನೂ ಸಂಪ್ರದಾಯಗಳನ್ನೂ ಉಳಿಸಿಕೊಂಡು ಬಂದರು. ಕ್ರಿಸ್ತಾಬ್ದ ಹದಿಮೂರನೆಯ ಶತಮಾನದಲ್ಲಿ ಮಂಗೋಲರು ಈ ದೇಶವನ್ನು ದಾಳಿಮಾಡಿ, ಕಾಲುವೆಗಳನ್ನೆಲ್ಲ ನಾಶಪಡಿಸಿದ ಮೇಲೆ ಸಾಮ್ರಾಜ್ಯದ ಸಂಪತ್ತು ಸಂಪೂರ್ಣವಾಗಿ ನಾಶವಾಗಿ ಬಿಟ್ಟಿತು.

5. ಸಹಾರಾ ಸಂಸ್ಕೃತಿ

ಪ್ರಪಂಚದಲ್ಲೆಲ್ಲ ಅತಿ ದೊಡ್ಡ ಮರುಭೂಮಿಯಾದ ಸಹಾರಾ ದಲ್ಲೂ ಸಂಸ್ಕೃತಿಯೇ ಎಂದು ಕೊಂಚ ಆಶ್ಚರ್ಯವಾಗಬಹುದು. 'ಸಹಾರಾ' ಎನ್ನುವ ಅರಾಬಿಕ್ ಮಾತಿಗೆ ಮರಳುಕಾಡು, ಮರು ಭೂಮಿ, ಬಂಜರು ಪ್ರದೇಶ ಎಂದೇ ಅರ್ಥ. ಅಲ್ಲೊಂದು ಇಲ್ಲೊಂದು 'ಓಯಸಿಸ್' ಬಿಟ್ಟರೆ ಮರಗಳೇ ಇಲ್ಲ ಇಲ್ಲಿ; ಮಳೆ ಬೀಳುವುದು ಬೆಟ್ಟದ ಬಳಿ ಅಲ್ಪ ಸ್ವಲ್ಪ, ಉಳಿದೆಡೆ ಮಳೆಯ ಹೆಸರೇ ಇಲ್ಲ, ಹಗಲು ಬಿಸಿಲಿನ ಬೇಗೆಯಾದರೆ ರಾತ್ರಿ ಕೊರೆಯುವ ಛಳಿ. ಇಂಥ ಕಡೆ ಯಾವ ಜನ ಇದ್ದಾರು? ಏನು ಸಂಸ್ಕೃತಿ ಬೆಳೆದೀತು? ಈಗಂತೂ ಇಲ್ಲಿ ಮನುಷ್ಯರೂ ಇಲ್ಲ, ಅವರ ಸಾಕು ಪ್ರಾಣಿಗಳೂ ಇಲ್ಲ.

ಆದರೆ ಈ ಮರುಭೂಮಿ ಎಲ್ಲ ಕಾಲದಲ್ಲಿಯೂ ಹೀಗೇ ಇರಲಿಲ್ಲ. ಇದು ಹೀಗಾದುದು ಬರಿಯ 3,000 ವರ್ಷಗಳ ಹಿಂದಷ್ಟೆ. ಅದಕ್ಕೆ ಮೊದಲು ಇಲ್ಲಿ ಹಲವಾರು ನದಿಗಳು ಹರಿಯುತ್ತಿದ್ದು, ಸುತ್ತಮುತ್ತ ಹಸಿರು ಗಿಡಮರಗಳು ತುಂಬಿದ್ದು, ಭೂಮಿ ಫಲವತ್ತಾಗಿದ್ದು, ಜನರು ವಾಸಿಸುತ್ತಿದ್ದರು; ಪ್ರಾಣಿ ಗಳಿದ್ದುವು; ಮಳೆ–ಬೆಳೆ ಆಗುತ್ತಿದ್ದುವು. ಹಿಮಯುಗದ ಕಡೆಯ ಹಂತದಲ್ಲಿ ಈ ಪ್ರದೇಶ ಒಣಗಲಾರಂಭಿಸಿ ಬರುಬರುತ್ತ ಮರಳುಕಾಡಾಯಿತು. ಮರುಭೂಮಿಯಾಯಿತು. ನೀರಿರುವ ಭಾಗ ಕಡಿಮೆಯಾಗುತ್ತ ಬಂದಿತು; ಜನಗಳು ದೂರ ದೂರ, ಬೇರೆ ಪ್ರದೇಶಗಳಿಗೆ ಹೋಗಿ ವಾಸಿಸಲಾರಂಭಿಸಿದರು. ಮೊದಲು ಕುದುರೆಯನ್ನು ಸಂಚಾರಕ್ಕೆ ಬಳಸುತ್ತಿದ್ದವರು ಈಗ ಒಂಟೆಯನ್ನು

ಬಳಸಬೇಕಾಯಿತು! ಕ್ರಿಸ್ತಾಬ್ದ ಆರಂಭವಾಗುವಾಗಲೂ ಈ ಪ್ರದೇಶ ಎಷ್ಟೋ ಫಲವತ್ತಾಗಿದ್ದಿತು; ಈಗಿನ ಹಾಗೆ ಇರಲಿಲ್ಲ.

ಮೊದಲು ಸಹಾರಾದಲ್ಲಿ ನೀರು, ಮಳೆ-ಬೆಳೆ, ಹಳ್ಳಿ, ಮನುಷ್ಯ ಜೀವನ ಇದ್ದುವೆಂದು ತಿಳಿದುದು ಹೇಗೆ? ದಕ್ಷಿಣ ಟ್ಯುನಿಸಿಯದಲ್ಲಿ ಟಸ್ಸಿಲಿ ಎಂಬೆಡೆ ಹಲವಾರು ವರ್ಷಗಳ ಹಿಂದೆ ಅರಬ್ ಸೈನಿಕರ ತುಣುಕೊಂದು ಹೋಗುತ್ತಿದ್ದಾಗ ಅಲ್ಲಿನ ಬೆಟ್ಟದ ಬಂಡೆಗಳ ಮೇಲೆ ಸಾವಿರಾರು ಚಿತ್ರಗಳಿದ್ದುದನ್ನು ಕಂಡು ಬೆರಗಾದರು. ಈ ಚಿತ್ರಗಳ ಮೇಲೆ ಹಲವು ಶತಮಾನಗಳ ಧೂಳು, ಮರಳು ತುಂಬಿದ್ದುವು, ನಿಜ. ಆದರೆ ಚಿತ್ರಗಳಂತೂ ಕಾಣುತ್ತಿದ್ದುವು. ಇವು ಪಾಕ್ತನ ವಿಚಕ್ಷಣರ ಗಮನಕ್ಕೆ ಬಂದು ಇವುಗಳ ಅಧ್ಯಯನ ಮೊದಲಾಯಿತು.

ಈ ಅಧ್ಯಯನದಿಂದ ತಿಳಿದುಬಂದುದು ಸಹಾರಾದಲ್ಲಿ ನಾಲ್ಕು ಬೇರೆ ಬೇರೆ ಸಂಸ್ಕೃತಿಗಳಿದ್ದುವು ಎಂಬ ವಿಚಾರ. ಮೊಟ್ಟ ಮೊದಲ ಹಂತ ಈಗ್ಗೆ ಸುಮಾರು 8,000 ವರ್ಷಗಳ ಹಿಂದೆ ಮೊದಲಾಯಿತು ಎಂದು ತಜ್ಞರು ನಿರ್ಧರಿಸಿದ್ದಾರೆ. ಬೇಟೆ ಯಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ ಕಾಡುಜನ ಬೇಟೆಯ ದೃಶ್ಯಗಳನ್ನು ಕಲ್ಲಿನ ಮೇಲೆ ಕಡೆದಿದ್ದಾರೆ. ಈ ಜನ ನೀಗ್ರೋ ಪಂಗಡಕ್ಕೆ ಸೇರಿದವರು ಎಂದು ಊಹಿಸಿದ್ದಾರೆ; ಇವರ ಎಲುಬು ಗಳೇನೋ ದೊರೆತಿಲ್ಲ. ಆಗ ನೀರು ವಿಪುಲವಾಗಿದ್ದಿತು; ಮರ ಗಳೂ ಬೇಕಾದಷ್ಟು ಇದ್ದುವು. ಹಸು, ಜಿಂಕೆ, ಮೊಸಳೆ, ಮೀನು ಗಳಿದ್ದುವು.

ಬೇಸಾಯದ ಬದುಕು

3000 ವರ್ಷಗಳ ನಂತರ ಮತ್ತೊಂದು ಸಂಸ್ಕೃತಿ ಇಲ್ಲಿ

ಕಾಣಿಸಿಕೊಂಡಿತು; ಮೊದಲ ಸಂಸ್ಕೃತಿಗಿಂತ ಮುಂದುವರೆದದ್ದು. ಈ ಕಾಲದ ಜನ ವ್ಯವಸಾಯ ಬಲ್ಲವರು; ದನಕರುಗಳನ್ನು ಸಾಕಿಕೊಂಡವರು, ಮಣ್ಣಿನ ಒಲೆಗಳ ಮೇಲೆ ಆಹಾರ ಬೇಯಿ ಸುತ್ತಿದ್ದವರು, ಮೂಳೆಯಿಂದ ಮಾಡಿದ ಸೂಜಿಯನ್ನು ಬಳಸುತ್ತಿ ದ್ದವರು. ಹೆಂಗಸರು ಅಲಂಕಾರ ಮಾಡಿಕೊಳ್ಳುತ್ತಿದ್ದರು. ಜನರು ಗುಹೆಗಳಲ್ಲಿ ವಾಸಿಸದೆ, ಮಣ್ಣಿನ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು.

ಈಗ್ಗೆ ಸುಮಾರು 3000 ವರ್ಷಗಳ ಹಿಂದೆ ಸಹಾರಾ ಪ್ರದೇಶಕ್ಕೆ ಹೊಸ ಜನ ಬಂದಂತೆ ತೋರುತ್ತದೆ. ಮೊದಲ ಜನರಷ್ಟು ದಟ್ಟವಾದ ಕೂದಲಿಲ್ಲದೆ ಇರುವುದು ಈ ಕಾಲದ ಚಿತ್ರಗಳಿಂದ ಸ್ಪಷ್ಟವಾಗುತ್ತದೆ. ಈ ಕಾಲದ ಚಿತ್ರಗಳಲ್ಲಿ ಕೂಡ ಹಸು, ಜಿರಾಫೆಗಳಲ್ಲದೆ ಮೊಸಳೆಗಳೂ ಇವೆ; ಎಂದರೆ ನೀರು ಯಥೇಚ್ಛ ವಾಗಿದ್ದಿತು ಎಂದರ್ಥ. ಹಳೆಯ ರೀತಿ ಬಂಡಿಗಳ ಚಿತ್ರಣವೂ ಇರುವುದು ಸ್ವಾರಸ್ಯವಾಗಿದೆ. ಹಸುಗಳ ಚಿತ್ರಗಳೇ ಸಾವಿರಾರು ಇವೆ; ಎಂದರೆ ಹುಲ್ಲುಗಾವಲು ವಿಸ್ತಾರವಾಗಿದ್ದಿರಬೇಕಲ್ಲವೆ? ಆಗ ಬಳಕೆಯಲ್ಲಿದ್ದ ಉಳುಮೆಯ ರೀತಿಯನ್ನೂ ಈ ಚಿತ್ರಗಳ ಆಧಾರದ ಮೇಲೆ ಊಹಿಸಿಕೊಳ್ಳಬಹುದು.

ಸಹಾರಾ ಚಿತ್ರಗಳು ತುಂಬ ಸ್ವಾರಸ್ಯವಾಗಿವೆ. ಪ್ರಾಚೀನ ಗುಹಾ ಶೈಲಿಗೇ ಸೇರಿದುವಾದರೂ ಮನುಷ್ಯನ ಆಕಾರ, ಕ್ರಿಯಾ ಪ್ರಧಾನವಾದ ಭಂಗಿ, ವಾಸ್ತವಿಕತೆ, ನಿರೂಪಣಕ್ರಮ ಉನ್ನತ ಮಟ್ಟದವು. ಬಹುಮಟ್ಟಿಗೆ ಒಂದೊಂದು ಚಿತ್ರವೂ ಒಂದೊಂದು ಸಂದರ್ಭವನ್ನು ಉಲ್ಲೇಖಿಸುವ ದೃಶ್ಯಗಳು. ಇವನ್ನೆಲ್ಲ ಒಟ್ಟಿಗೆ ಕಲೆಹಾಕಿದರೆ 250 ಚದರ ಅಡಿಗಳಿಗಿಂತ ಹೆಚ್ಚಿನ ಸ್ಥಳ ಹಿಡಿಸುತ್ತದೆ.

ಈ ಚಿತ್ರಗಳು ತಜ್ಞರ ದೃಷ್ಟಿಗೆ ಬಿದ್ದುದು ಆಕಸ್ಮಿಕವಾಗಿ

ಹೀಗೆ ಈ ಚಿತ್ರಗಳು ದೊರೆಯದಿದ್ದರೆ ಸಹಾರಾ ಮರುಭೂಮಿ ಒಂದು ಕಾಲಕ್ಕೆ ಜನಜೀವನವನ್ನು ಪಡೆದಿದ್ದುದು ತಿಳಿದುಬರುತ್ತಲೇ ಇರಲಿಲ್ಲ. ಇಷ್ಟು ಫಲವತ್ತಾಗಿದ್ದ ಪ್ರದೇಶವು ಮರುಭೂಮಿ ಯಾದುದು ಹೇಗೆ ಎನ್ನುವುದು ಸಮಸ್ಯೆಯಾಗಿಯೇ ಉಳಿದಿದೆ. ಭೂಮಿಯ ಮೇಲ್ಮೈಯಲ್ಲಿ ಹಿಮಾಲಯ ಮೊದಲಾದ ಎತ್ತರದ ಬೆಟ್ಟಗಳು ಕಾಣಿಸಿಕೊಂಡಾಗಲೇ ಮರುಭೂಮಿಗಳೂ ಮೈದಳೆ ದುವು ಎಂದು ಒಂದು ಊಹೆಯಿದೆ. ಎಂದರೆ, ಇದು 15 ಮಿಲಿ ಯನ್ ವರ್ಷಗಳಷ್ಟು ಹಿಂದಿನ ಮಾತು. ಬೆಟ್ಟಗಳಿಂದ ಉಂಟಾದ ಮಳೆ-ನೆರಳು (rain-shadow) ಪ್ರಭಾವವೇ ಮರುಭೂಮಿಗೆ ಕಾರಣವಾಯಿತೆನ್ನುವ ವಾದವೂ ಇದೆ. ಬೆಚ್ಚ ನೆಯ, ಒಣ, ಕೆಳಮುಖದ ಗಾಳಿಯು ಮೋಡಗಳನ್ನು ಚೆದುರಿಸಿ ಸೂರ್ಯನ ಬೆಳಕೂ ಬೇಗೆಯೂ ಭೂಮಿಗೆ ಹೆಚ್ಚಾಗಿ ಬೀಳುವಂತೆ ಮಾಡುವುದೂ ಮರುಭೂಮಿಗೆ ಕಾರಣ.

ಆದರೆ ಸಹಾರಾ ಮರುಭೂಮಿ ಇಷ್ಟು ಹಿಂದೆ ಆದುದಲ್ಲ. ಈಗಲೂ ಸಹಾರಾ ಮರುಭೂಮಿಯೆಂದರೆ ಬರಿಯ ಮರಳು ಗಾಡು, ಮರಳು ಗಾಳಿಯೇ ಬೀಸುವ ಪ್ರದೇಶ ಎಂದು ತಿಳಿಯ ಬಾರದು. ಸಹಾರಾ ಮರುಭೂಮಿಯಲ್ಲಿ ನೂರಕ್ಕೆ ಮೂವತ್ತು ಪಾಲಿಗೂ ಕಡಮೆ ಮರಳುಗಾಡು. ಉಳಿದೆಡೆ ಗಿಡ, ಮರ, ಪ್ರಾಣಿ ಗಳು ಜೀವಿಸುತ್ತವೆ. ಮನುಷ್ಯನ ವಾಸಕ್ಕೆ ಪ್ರದೇಶ ಹಿತಕರ ವಾಗಿಲ್ಲ ಅಷ್ಟೆ. ಚಳಿಗಾಲದಲ್ಲಿ ಈ ಮರುಭೂಮಿಯನ್ನು ಮೋಡ ಮುಚ್ಚುವುದು ನೂರಕ್ಕೆ ಹತ್ತು ಪಾಲು ಮಾತ್ರ; ಜೂನ್ ತಿಂಗಳಿಂದ ಅಕ್ಟೋಬರ್ ತಿಂಗಳವರೆಗಂತೂ ಇದು ನೂರಕ್ಕೆ ನಾಲ್ಕು ಪಾಲಿಗಿಂತ ಕಡಮೆಯಾಗಿಬಿಡುತ್ತದೆ. ಹೀಗಾಗಿ ಅಲ್ಲಿನ ಬಿಸಿಲಿನ ಬೇಗೆ, ಧಗೆ, ಸೆಖೆ ತಡೆಯುವುದು ಸಾಧ್ಯವಿಲ್ಲ. ಸಹಾರಾ

ಮರುಭೂಮಿಯಲ್ಲಿ ಲಿಬ್ಯಾದ ಅಸೀಸಿಯ ಎನ್ನುವ ಕಡೆ ನೆರಳಿನಲ್ಲೇ ಉಷ್ಣಾಂಶ 136 ಡಿಗ್ರಿಗಳಿರುತ್ತದೆ!

5 ಆಫ್ರಿಕದ ಆದಿವಾಸಿಗಳು

ದಕ್ಷಿಣ ಆಫ್ರಿಕದ ಆದಿವಾಸಿಗಳಲ್ಲಿ 'ಪೊದೆಮಾನವರು' (ಬುಷ್‌ಮೆನ್) ಸ್ವಾರಸ್ಯವಾದ ಜನಾಂಗ. ಜಗತ್ತಿನಲ್ಲೆಲ್ಲ ಇವರಷ್ಟು ಪ್ರಾಚೀನವಾದ ಜನರೇ ಇಲ್ಲವೆಂದು ಹೇಳುತ್ತಾರೆ. ಒಂದು ಕಾಲಕ್ಕೆ ಇವರು ದಕ್ಷಿಣ ಆಫ್ರಿಕದಲ್ಲೆಲ್ಲ ವ್ಯಾಪಿಸಿದ್ದರು. ಈಚೆಗೆ ಪಶ್ಚಿಮ ತೀರದ 'ಕಲಹಾರಿ' ಮರುಭೂಮಿಯಲ್ಲಿ ಮಾತ್ರ ಇದ್ದಾರೆ. 'ಬಂಟು' ಎಂಬ ಇನ್ನೊಂದು ಬುಡಕಟ್ಟಿನ ಜನ ಉತ್ತರ ಆಫ್ರಿಕಾದಿಂದ ದಕ್ಷಿಣಕ್ಕೆ ದಾಳಿಮಾಡಿದಾಗ ಈ ಜನರನ್ನೆಲ್ಲ ತೀರ ದಕ್ಷಿಣಕ್ಕೆ ತಳ್ಳಿಬಿಟ್ಟರು. ಭೂಶಿರವನ್ನು 1652 ರಲ್ಲಿ ಮುಟ್ಟಿದ ಐರೋಪ್ಯರು (ಆಫ್ರಿಕಾನರ್ ಜನ) ಈ ದುರ್ದೈವಿ ಜನರನ್ನು ಮೇಲಕ್ಕೆ ನೂಕಿದರು; ಹೀಗಾಗಿ ಈ ಆದಿವಾಸಿಗಳು ಮರುಭೂಮಿಯನ್ನು ಸೇರಬೇಕಾಯಿತು.

ಇವರ ಜನಸಂಖ್ಯೆಯೂ ಕಡಮೆಯಾಗುತ್ತ ಬಂದಿದೆ. ಕಲಹಾರಿ ಮರುಭೂಮಿಯ ಕಡೆ ಸುಮಾರು 20,000 ಜನರಿದ್ದಾರೆ, ಬೆಕೂವನಾಲ್ಯಾಂಡ್ ಕಡೆ ಸುಮಾರು 30,000 ಜನರಿದ್ದಾರೆ ಅಷ್ಟೇ. ಇವರಲ್ಲಿ ಅರ್ಧ ಭಾಗದಷ್ಟು ಜನ ಬೇಟೆಗಾರರೇ; ಹಣ್ಣು ಹಂಪಲುಗಳನ್ನು ಆಯ್ದುಕೊಂಡು ಪಶುಪಕ್ಷಿಗಳನ್ನು ಬೇಟೆಯಾಡಿ ಜೀವಿಸುತ್ತಾರೆ. ಇನ್ನರ್ಧ ಜನ ಬಂಟು ಜನಾಂಗದವರಲ್ಲಿ, ಐರೋಪ್ಯ ತೋಟಗಾರರಲ್ಲಿ ಊಳಿಗ ಮಾಡುತ್ತಾರೆ.

ಇವರು ವಾಸಿಸುವ ಮರುಭೂಮಿ ಎಂಥದು? ದಕ್ಷಿಣ ಆಫ್ರಿಕದ ಪಶ್ಚಿಮ ತೀರದಲ್ಲಿ ವಿಶಾಲವಾದ ಮರಳುಗಾಡು ಇದು; ಉತ್ತರದಲ್ಲಿ ಓಕೋವಂಗೋ ನದಿಯಿಂದ ದಕ್ಷಿಣದಲ್ಲಿ ಆರೆಂಜ್

ನದಿಯುವರೆಗೂ ಹರಡಿರುವ ಈ ಪ್ರದೇಶದ ವಿಸ್ತಾರ ಬ್ರಿಟನ್ ದೇಶಕ್ಕೆ ಮೂರರಷ್ಟು. ಅದರಲ್ಲಿ ನದಿಯಾಗಲೀ, ದೊಡ್ಡ ಗಿಡ ಮರಗಳಾಗಲೀ ಇಲ್ಲ. ಒರಟು ಹುಲ್ಲು, ಮುಳ್ಳುಗಿಡ, ಕಲ್ಲು ಬಂಡೆ ಇಷ್ಟೇ ಇಲ್ಲಿನ ನಿಸರ್ಗ. ಡಿಸೆಂಬರ್ ತಿಂಗಳಿನಿಂದ ಫೆಬ್ರುವರಿಯ ವರೆಗೆ ಅಷ್ಟಿಷ್ಟು ಮಳೆಯಾಗುತ್ತದೆ. ಆದರೆ ಫೆಬ್ರುವರಿಯಿಂದ ಆರಂಭವಾಗುವ ಬರಗಾಲ ಭಯಂಕರವಾದುದು. ಇರುವ ನೀರು ಕುಂಟೆಗಳೆಲ್ಲ ಬತ್ತಿಹೋಗುತ್ತವೆ; ಗಿಡಗಳೆಲ್ಲ ಒಣಗಿ ನಿಲ್ಲುತ್ತವೆ.

ಬುಷ್‌ಮೆನ್ ಪಂಗಡ

ಇಷ್ಟು ಕಷ್ಟಕರವಾದ ವಾತಾವರಣದಲ್ಲಿ 'ಪೊದೆ ಮಾನವ'ರು ವಾಸಿಸುತ್ತಾರೆ. ಇವರು ಆಕಾರದಲ್ಲಿ ಕುಳ್ಳು: ಕೈಕಾಲು ತೆಳ್ಳಗೆ, ಉದ್ದನಾಗಿರುತ್ತವೆ. ಗಂಡಸರು ಸುಮಾರು ಐದು ಅಡಿ ಎತ್ತರ ಇರುತ್ತಾರೆ; ಹೆಂಗಸರು ಸ್ವಲ್ಪ ಕಡಮೆ ಎತ್ತರದವರು. ಬಣ್ಣ ಕಪ್ಪಲ್ಲ, ಹಳದಿ ಮಿಶ್ರಿತವಾದ ಬಣ್ಣ. ಕೂದಲು ಗುಂಗುರು ಗುಂಗುರಾಗಿರುತ್ತದೆ. ಒಟ್ಟಿನಲ್ಲಿ ಸ್ಫುರದ್ರೂಪಿಗಳೇ. ಅವರು ಅಂಗಭಂಗಿಗಳಲ್ಲಿ ಗಾಂಭೀರ್ಯ, ಗತ್ತು ಹೆಚ್ಚು.

ಉಡುಗೆಯ ವಿಚಾರದಲ್ಲಿ ಗಂಡಸರು ನಡುವಿಗೆ ಚರ್ಮದ ತುಂಡುಗಳನ್ನು ಬಿಗಿದುಕೊಳ್ಳುತ್ತಾರೆ; ಹೆಂಗಸರು ಚರ್ಮದ ಲಂಗಗಳನ್ನು ಉಡುತ್ತಾರೆ. ಈ ಲಂಗದಲ್ಲಿ ಜೋಳಿಗೆಯಂಥ ಪದರವಿದ್ದು ಮಕ್ಕಳನ್ನು ಇದರಲ್ಲಿ ಕೂರಿಸಿಕೊಳ್ಳುತ್ತಾರೆ. ಉಷ್ಟ್ರ ಪಕ್ಷಿಯ ಮೊಟ್ಟೆಗಳನ್ನೇ ಇವರು ಲೋಟದಂತೆ ಬಳಸುತ್ತಾರೆ; ಇವನ್ನೂ ಈ ಜೋಳಿಗೆಯೊಳಗೆ ಇಟ್ಟುಕೊಳ್ಳುತ್ತಾರೆ. ಚರ್ಮ ದಿಂದಲೇ ಮಾಡಿದ ಚಪ್ಪಲಿಗಳನ್ನು ಹಾಕಿಕೊಳ್ಳುವುದುಂಟು.

ಈ ಜನ ತುಂಬ ಕಷ್ಟಸಹಿಷ್ಣುಗಳು, ಓಡುವುದರಲ್ಲಿ ನಿಸ್ಸೀಮರು.

ಬೇಟೆಯಲ್ಲಿ ಚತುರರು, ಅವರು ಸಾಮಾನ್ಯವಾಗಿ ಬೇಟೆಯಾಡು ವುದು ಜಿಂಕೆಗಳನ್ನು. ತಮ್ಮತಮ್ಮಲ್ಲಿ ಅವರು ಜಗಳವಾಡುವುದಿಲ್ಲ; ಬೇರೆಯವರು ಯುದ್ಧಕ್ಕೆ ಬಂದಾಗಲೂ ಇವರು ಅವರನ್ನು ಎದುರಿಸುವುದಿಲ್ಲ, ಓಡಿಹೋಗುತ್ತಾರೆ. ಹೀಗಾಗಿಯೇ ಯುದ್ಧ ಪ್ರಿಯರಾದ ಬಂಟುಜನ ಇವರನ್ನು ಮರುಭೂಮಿಗೆ ಓಡಿಸಿದ್ದು. ಬೇಟೆಯಾಡುವಾಗ ಇವರ ಮುಖ್ಯ ಆಯುಧವೆಂದರೆ ಬಿಲ್ಲು; ಬಾಣದ ತುದಿಗೆ ವಿಷವನ್ನು ಸವರಿ ಉಪಯೋಗಿಸುತ್ತಾರೆ. ಹಾವಿನ ಹಲ್ಲಿನಿಂದಲೂ, ಬೇರೆ ಬೇರೆ ಹುಳುಗಳಿಂದಲೂ ವಿಷ ವನ್ನು ತೆಗೆಯುತ್ತಾರೆ. ತುಂಬ ಘಾತಕವಾದ ವಿಷವಿದು.

ಕಲಹಾರಿ ಮರುಭೂಮಿಯಲ್ಲಿ ಏನು ಆಹಾರ ದೊರೆತೀತು? ಬೇರೆ ಯಾರಾದರೂ ಅಲ್ಲಿಗೆ ಹೋದರೆ ಹೊಟ್ಟೆಗಿಲ್ಲದೆ ಸಾಯು ವುದೇ. ಆದರೆ ಬುಷ್‌ಮೆನ್‌ಗಳೇನು ಉಪವಾಸವಿರುವುದಿಲ್ಲ. ಸುಮಾರು 56 ಬಗೆ ಬೇರು, ಗೆಡ್ಡೆಗಳನ್ನು ತಿನ್ನುತ್ತಾರೆ ಇವರು; ಈ ಬೇರಿನಲ್ಲೇ ಗಿಡಕ್ಕೆ ಬೇಕಾಗುವ ಸತ್ವಗಳಿರುತ್ತವೆ. ಅದಲ್ಲದೆ ಕೆಲ ವಾರು ಕಾಯಿಗಳನ್ನೂ ದಂಟುಗಳನ್ನೂ ತಿನ್ನುತ್ತಾರೆ. ಇರುವೆ, ಹುಳು ಆಮೆ ಇವು ಅವರ ಆಹಾರಗಳೇ. ಸೋರೇಕಾಯಿ, ಸೌತೇಕಾಯಿ, ಕುಂಬಳಕಾಯಿ, ಕಲ್ಲಂಗಡಿ ಮೊದಲಾದ ಹಣ್ಣುಗಳನ್ನೂ ಬೆಳೆಸುತ್ತಾರೆ.

ನಡುಬೇಸಗೆಯಲ್ಲಿ ನೀರು ಎಲ್ಲೂ ಸಿಗದಿದ್ದಾಗ, ಬತ್ತಿದ ಕುಂಟೆ ಗಳನ್ನು ಅಗೆದು, ತಳದಲ್ಲಿರುವ ನೀರನ್ನು ಕೊಳವೆಗಳಲ್ಲಿ ಸೆಳೆದು ಕೊಂಡು ಕುಡಿಯಬೇಕಾಗುತ್ತದೆ. ಕಾಡು ಜೇನುಗೂಡಿಗೆ ಹೊಗೆ ಹಾಕಿ, ಜೇನುಗಳನ್ನು ಓಡಿಸಿ, ಜೇನುತುಪ್ಪವನ್ನು ಸಂಗ್ರಹಿಸುತ್ತಾರೆ. ಜೇನುತುಪ್ಪವೆಂದರೆ ಅವರಿಗೆ ತುಂಬ ಇಷ್ಟ. ಜೇನುಹುಳು ಗಳನ್ನು ಮಾತ್ರ ಅವರು ಕೊಲ್ಲುವುದಿಲ್ಲ; ಅವು ದೇವತಾಸಾನ್ನಿಧ್ಯ

ವಿರುವ ಹುಳುಗಳೆಂದು ಅವರ ಕಲ್ಪನೆ.

ಆದಿವಾಸಿ ಕಲೆ

ಅವರ ಬಾಳುವೆಯಲ್ಲಿ ಸಂಗೀತಕ್ಕೂ ನೃತ್ಯಕ್ಕೂ ಹೆಚ್ಚಿನ ಮಹತ್ವವುಂಟು. ಬೇಟೆಗೆ ಹೊರಡುವಾಗ, ಬೇಟೆಯಿಂದ ಬಂದಾಗ, ಬುಡಕಟ್ಟಿಗೆ ತರುಣರನ್ನು ಸೇರಿಸಿಕೊಳ್ಳುವ ದೀಕ್ಷೆ ನಡೆಯುವಾಗ, ಮದುವೆಯಾಗುವಾಗ, ಮಳೆ ಬರಲೆಂದು ಬೇಡುವಾಗ, ಚಂದ್ರ ಹುಣ್ಣಿಮೆಯಂದು ಪೂರ್ಣನಾಗಿದ್ದಾಗ ಈ ಜನ ಕುಣಿಯದೆ ಇರುವುದಿಲ್ಲ. ಅವರ ಗೀತಗಳಿಗೆ ಸಾಹಿತ್ಯ ಇರುವುದು ಕಡಮೆ; ಅದರ ಜೊತೆಗೆ ಕೆಲವು ವಾದ್ಯಗಳನ್ನೂ ಬಳಸುತ್ತಾರೆ. ವಾದ್ಯಗಳೆಲ್ಲ ಒಣಸೋರೆ ಬುರುಡೆ, ಬಿದರು ನಾಳಿಕೆ, ಮರದ ಚಕ್ಕೆ ಇಂಥವುಗಳಿಂದಲೇ ಮಾಡಿದುವು.

ಅವರ ನಡುವೆ ಇರುವ ಮಾಂತ್ರಿಕ ವೈದ್ಯರು ತಮ್ಮದೇ ಆದ ಧಾರ್ಮಿಕ ನೃತ್ಯಗಳನ್ನು ನಡೆಸುತ್ತಾರೆ; ಅವರ ಗಾಯನವಾಗಲೀ ಕುಣಿತವಾಗಲೀ ದೈವಭೂತಗಳನ್ನೂ, ಕ್ಷಾಮದೇವತೆಯನ್ನೂ, ಬೇತಾಳವನ್ನೂ ಓಡಿಸಲೆಂದೇ. ಇಂಥ ಸಮಯದಲ್ಲಿ ಇವರು ವಿವಶರಾಗಿ, ಪ್ರಜ್ಞೆ ತಪ್ಪಿ, ಕುಣಿಯುತ್ತಾರೆ.

ಹಿಂದಿನ ಕಾಲದ 'ಬುಷ್‌ಮೆನ್'ಗಳು ಕಲಾವಿದರೂ ಆಗಿದ್ದರು; ದಕ್ಷಿಣ ಆಫ್ರಿಕದ ಪ್ರಾಚೀನ ವರ್ಣಚಿತ್ರಗಳೂ, ಶಿಲ್ಪಗಳೂ ಇವರವೇ. ಮರದ ತೊಗಟೆಗಳ ಮೇಲೆ, ಉಷ್ಟ್ರಪಕ್ಷಿಯ ಮೊಟ್ಟೆಗಳ ಮೇಲೆ, ಗುಹೆಗಳಲ್ಲಿ, ಬಂಡೆಗಳ ಮೇಲೆ ಇವರ ಚಿತ್ರಕರ್ಮ ಸಾಗುತ್ತಿದ್ದಿತು.

ಇವರ ಭಾಷೆಗೆ ಲಿಪಿಯಿಲ್ಲ; ಭಾಷೆಯಲ್ಲಿ ಕೂಡ ಮಾತು ಕಡಮೆ, ಹಾವಭಾವ, ಕೈವಿನ್ಯಾಸ ಹೆಚ್ಚು. ಅವರ ಗಣಿತವೆಲ್ಲ

ಮೂರು ನಾಲ್ಕರವರೆಗೆ ಎಣಿಸುವುದಷ್ಟೆ! ಅವರು ಕುಟುಂಬ ಮಂಡಲಗಳಲ್ಲಿ ವಾಸಮಾಡುತ್ತಾರೆ; ಹಲವಾರು ಕುಟುಂಬಗಳು ಒಟ್ಟಿಗೆ ವಾಸಿಸುವುದೂ ಉಂಟು. ಇವರು ದನಕರುಗಳನ್ನೇನು ಸಾಕಿಕೊಳ್ಳುವುದಿಲ್ಲ. ಕುಡಿಯಲು ತಮಗೇ ನೀರಿಲ್ಲ; ಅವಕ್ಕೆಲ್ಲಿ ಒದಗಿಸಿಯಾರು? ಉತ್ತಿ, ಬಿತ್ತಿ, ಬೆಳೆಯುವ ಹವ್ಯಾಸ ಅವರಿಗಿಲ್ಲ.

ಅವರ ಗುಡಿಸಲುಗಳು ಕೂಡ ತುಂಬ ಹಳೆಯ ಕಾಲದ್ದು. ರೆಂಬೆ ಕೊಂಬೆ, ಎಲೆ ಬಳ್ಳಿಗಳಿಂದ ಗುಮ್ಮಟಾಕಾರದ ಹಂದರ ಗಳನ್ನು ನಿರ್ಮಿಸುತ್ತಾರೆ. ಮನೆಯೊಳಗೆ ಕುರ್ಚಿ, ಮಂಚ ಮೊದಲಾದುವೇನೂ ಇರವು; ನೆಲದಮೇಲೆ ಹುಲ್ಲು ಹಾಸಿ ಮಲಗಿಕೊಳ್ಳುತ್ತಾರೆ. ಪಾತ್ರೆ ಪಡಗದ ಗೊಂದಲವೂ ಅವರಿ ಗಿಲ್ಲ; ಅಡುಗೆಯೇ ಇಲ್ಲವಷ್ಟೆ. ಬೆಂಕಿಯನ್ನೇನೋ ಇಟ್ಟು ಕೊಳ್ಳುತ್ತಾರೆ. ದುಷ್ಟಪ್ರಾಣಿಗಳನ್ನು ಓಡಿಸಲು, ತಾವು ಬೇಟೆ ಯಾಡಿದ ಮೃಗಗಳನ್ನು ಹಾಗೆಯೇ ಬೇಯಿಸಲು ಈ ಬೆಂಕಿ. ಅಂತೂ ತೀರ ಅನಾಗರಿಕ ನೆಲೆಯಲ್ಲಿರುವ ಜನ ಇವರು.

ಹೊಟೆನ್‌ಟಾಟ್ ಜನ

ಹೊಟೆನ್‌ಟಾಟ್ ಜನರು ದಕ್ಷಿಣ ಆಫ್ರಿಕದ ಇನ್ನೊಂದು ಆದಿವಾಸಿ ಪಂಗಡ. ಪೊದೆಜನರಿಗೆ ಬೇಟೆಯೇ ಮುಖ್ಯವೃತ್ತಿ ಯಾದರೆ ಈ ಜನರು ದನಕುರಿಗಳನ್ನು ಸಾಕಿಕೊಂಡು ತಿರುಗಾಡು ವವರು. ಸಂಸ್ಕೃತಿಯಲ್ಲಿ ಕೂಡ ಪೊದೆಜನರಿಗಿಂತ ಸ್ವಲ್ಪಮೇಲ್ಮಟ್ಟ ದವರು; ಬೇಸಾಯವನ್ನೂ ಸ್ವಲ್ಪಮಟ್ಟಿಗೆ ಮಾಡುತ್ತಾರೆ.

ಮೊದಲಿಗೆ ಇವರು ಪೂರ್ವ ಆಫ್ರಿಕದವರು. ಇಲ್ಲಿಂದ ಲೇಕ್ ಪ್ರದೇಶಕ್ಕೆ ವಲಸೆ ಬಂದರು. ಬಂಟು ಜನರು ದಾಳಿ ಮಾಡ

ಲಾರಂಭಿಸಿದಾಗ ಇವರು ದಕ್ಷಿಣ ಆಫ್ರಿಕಕ್ಕೆ ಬಂದು ಅಲ್ಲಿ ಪಶ್ಚಿಮ ದಿಗ್ಭಾಗದಲ್ಲಿ ನೆಲೆಸಿದರು. ಡಚ್ ಜನರು 1652 ರಲ್ಲಿ ಭೂಶಿರಕ್ಕೆ ಬಂದಾಗ ಹೊಟೆನ್‌ಟಾಟ್ ಜನರೂ ಬುಷ್‌ಮೆನ್ ಪಂಗಡದವರೂ ಸ್ವೇಚ್ಛೆಯಾಗಿ ಮೈದಾನಗಳಲ್ಲಿ ತಿರುಗಾಡುತ್ತಿದ್ದರು. ಹೊಟೆನ್‌ಟಾಟರು ತಮ್ಮ ಕುರಿಗಳನ್ನೂ ದನಗಳನ್ನೂ ಮೇಯಿಸುತ್ತಾ ಬೆಟ್ಟಗುಡ್ಡಗಳಲ್ಲಿ ತಿರುಗಾಡುತ್ತಿದ್ದುದನ್ನು ಡಚ್ ಜನ ಕಂಡು ಅವರೊಂದಿಗೆ ಸಖ್ಯ ಬೆಳೆಸಿದರು. ಡಚ್ (ಬೋಅರ್) ಬೇಸಾಯಗಾರರು ಹೊಟೆನ್‌ಟಾಟರೊಂದಿಗೆ ಪದಾರ್ಥ ವಿನಿಮಯ ಸಂಬಂಧವನ್ನೂ ಬೆಳೆಸಿದರು. ಹೊಟೆನ್‌ಟಾಟರು ತಂಬಾಕು, ತಾಮ್ರದ ತಂತಿ, ಬ್ರಾಂದಿ, ಮಣಿಗಳು ಇವನ್ನು ಪಡೆಯಲು ತಮ್ಮ ದನಕರುಗಳನ್ನು ಕೊಡುತ್ತಿದ್ದರು.

ಬುಷ್‌ಮನ್‌ಗಳಂತೆ ಹೊಟೆನ್‌ಟಾಟರನ್ನೂ ಡಚ್ ಜನ ವಲಸೆ ಬಂದಾಗ ಸೆಣಸಿದರು. ಅವರ ಹುಲ್ಲುಗಾವಲನ್ನು ಆಕ್ರಮಿಸಿ ಕೊಂಡು, ಅವರ ದನಕರುಗಳನ್ನು ವಶಪಡಿಸಿಕೊಂಡು ಅವರನ್ನು ನಿರ್ವಾಸಿತರನ್ನಾಗಿ ಮಾಡಿಬಿಟ್ಟರು. ವಿಧಿಯಿಲ್ಲದೆ ಹೊಟೆನ್‌ಟಾಟರು ಡಚ್ಚರ ಗುಲಾಮರಾಗಿ ನಿಲ್ಲಬೇಕಾಯಿತು. ಅವರನ್ನು ಡಚ್ಚರು ಚಿತ್ರಹಿಂಸೆಗೆ ಗುರಿಮಾಡಿದರು. ನ್ಯಾಯಬದ್ಧವಾದ ಯಾವ ಸ್ಥಾನಮಾನವೂ ಇವರಿಗಿಲ್ಲದೆ ತುಂಬ ಬವಣೆ ಪಟ್ಟರು. 1713 ರಲ್ಲಿ ಸಿಡುಬು ಮಾರಿ ಭೂಶಿರ ಪ್ರದೇಶಕ್ಕೆ ಬಂದಾಗ ನೂರಾರು ಮಂದಿ ಹೊಟೆನ್‌ಟಾಟರು ಸತ್ತರು.

1806 ರಲ್ಲಿ ಈ ಪ್ರದೇಶವು ಡಚ್ಚರಿಂದ ಇಂಗ್ಲಿಷ್ ಜನರ ಆಳ್ವಿಕೆಗೆ ಒಳಪಟ್ಟಾಗ ಇಂಗ್ಲೆಂಡಿನ ಆಳರಸರು ಗುಲಾಮಗಿರಿಯನ್ನು ರದ್ದು ಮಾಡಿದರು. ಆಫ್ರಿಕದಲ್ಲಿದ್ದ ಇಂಗ್ಲಿಷ್ ಜನರಿಗೆ ನೀಗ್ರೋ ಮತ್ತು ಮಲಯದ ಗುಲಾಮರು ದೊರೆಯುವುದು

ದುರ್ಲಭವಾಯಿತು. ಆಗ ಹೊಟೆನ್‌ಟಾಟರು ಅಗ್ಗದ ಗುಲಾಮರಾದರು. ಅವರನ್ನು ಹೊಲಗದ್ದೆಗಳಲ್ಲಿ ಮತ್ತು ಮನೆಗಳಲ್ಲಿ ಕೆಲಸಕ್ಕಿಟ್ಟುಕೊಳ್ಳಲಾರಂಭಿಸಿದರು.

1809 ರಲ್ಲಿ ಒಂದು ಕಾನೂನು ಜಾರಿಗೆ ಬಂದು ಎಲ್ಲ ಹೊಟೆನ್‌ಟಾಟರೂ ಒಂದೇ ಕಡೆ ವಾಸಮಾಡಬೇಕಾಯಿತು. ಅವರವರ ಪ್ರದೇಶಗಳಲ್ಲಿ ಕೆಲಸಕ್ಕೆ ಅವರು ಸೇರಲೇಬೇಕಾಯಿತು. ಆ ಊರಿನ ನ್ಯಾಯಾಧೀಶನ ರಹದಾರಿಯಿಲ್ಲದೆ ತಮ್ಮ ನಿವಾಸದಿಂದ ಅವರು ಹೋಗಲಾರದಾದರು. ಅವರು ತಪ್ಪು ಮಾಡಿದರೆ ಆ ಪ್ರಾಂತ್ಯದ ನ್ಯಾಯಾಧೀಶನು ವಿಚಾರಣೆಯಿಲ್ಲದೆ ಅವರನ್ನು ಶಿಕ್ಷಿಸಬಹುದಾಗಿತ್ತು. ಕೆಲಸವಿಲ್ಲದೆ ತಿರುಗಾಡುವ ಹೊಟೆನ್‌ಟಾಟನು 'ವ್ಯಾಗ್ರೆನ್ಸಿ' ಅಪರಾಧದ ಮೇಲೆ ಸೆರೆಮನೆ ಸೇರಬೇಕಾಗಿದ್ದಿತು.

1828 ರಲ್ಲಿ ಈ ಕಾನೂನು ರದ್ದಾಯಿತು. ಇದಕ್ಕಾಗಿ ಹೆಣಗಾಡಿದವರು ಮುಖ್ಯವಾಗಿ ಕ್ರೈಸ್ತ ಪಾದ್ರಿಗಳು, ಅದರಲ್ಲಿಯೂ, ಡಾ॥ ಜಾನ್ ಫಿಲಿಪ್ ಎಂಬಾತ. ಈ ಕಾನೂನಿನ ರದ್ದಿನಿಂದಾಗಿ ಹೊಟೆನ್‌ಟಾಟರಿಗೆ ನ್ಯಾಯಾಂಗವಾದ ಹಕ್ಕುಬಾಧ್ಯತೆ ದೊರೆಯಿತು. ತಮಗೆ ಇಷ್ಟವಿದ್ದವರ ಬಳಿಯೇ ಕೆಲಸ ಮಾಡಬಹುದೆಂಬ ಸ್ವಾತಂತ್ರ್ಯ ಒದಗಿತು. ತಮಗಿಷ್ಟ ಬಂದಂತೆ ಭೂಮಿಯನ್ನು ಕೊಂಡುಕೊಳ್ಳಬಹುದಾಗಿದ್ದಿತು ಅವರು; ಆದರೆ ಭೂಮಿಯೇನು ಅವರಿಗಾಗಿ ಉಳಿದಿರಲಿಲ್ಲ. ಈಗ ಈ ಜನ ಕೇಪ್ ಪ್ರದೇಶದ 'ವರ್ಣೀಯ'ರಾಗಿ ಉಳಿದಿದ್ದಾರೆ.

ಈಚೆಗೆ ಈ ಪಂಗಡದಲ್ಲಿ ತುಂಬ ಸಂಕರವಾಗಿದೆ. ಶುದ್ಧ ಬುಡಕಟ್ಟಿನವರೆನ್ನಬಹುದಾದವರು ಸುಮಾರು 24,000 ಜನ ಇರಬಹುದಷ್ಟೆ. ಸಂಕರವಾದವರು ಐರೋಪ್ಯ ಉಡುಪುಗಳನ್ನು ಧರಿ

ಸುತ್ತಾರೆ; ಹಿಂದಿನವರು ಚರ್ಮದ ನಡುಬಟ್ಟೆಗಳನ್ನೇ ಉಡುವುದು. ಚಳಿಗಾಲದಲ್ಲಿ ಕುರಿಯ ತೊಗಟೆಯಿಂದ ಮಾಡಿದ ನಿಲುವಂಗಿಗಳನ್ನು ತೊಡುತ್ತಾರೆ.

ನಗರಪ್ರದೇಶದಿಂದ ದೂರವಿರುವ ಹೊಟೆನ್‌ಟಾಟರು ದನ-ಕುರಿಗಳನ್ನು ಸಾಕಿಕೊಂಡು ಜೀವನ ನಡೆಸುತ್ತಾರೆ. ಆದರೆ ಇವನ್ನು ಮೇಯಿಸಲು ಹುಲ್ಲುಗಾವಲಾಗಲೀ, ಅವು ಕುಡಿಯಲು ನೀರಾಗಲೀ ಸಿಗುವುದು ಕಷ್ಟವಾಗಿ, ತುಂಬ ಬವಣೆಪಡುತ್ತಾರೆ. ಈ ಪ್ರಾಣಿಗಗಳನ್ನು ಅವರು ಸಾಕಿಕೊಳ್ಳುವುದು ಹಾಲಿಗಾಗಿ ಅಷ್ಟೆ. ಅವುಗಳ ಮಾಂಸವನ್ನು ಅವರು ಸಾಮಾನ್ಯವಾಗಿ ತಿನ್ನುವುದಿಲ್ಲ. ಮದುವೆಯ ಸಂದರ್ಭದಲ್ಲಿ ಮಾತ್ರ ಇವುಗಳನ್ನು ಕೊಂದು ತಿನ್ನುವ ಪದ್ಧತಿಯಿದೆ. ಜೋಳ, ಗೋಧಿ, ಹುರುಳಿಗಳನ್ನೂ ಈ ಜನ ಬೆಳೆಸುತ್ತಾರೆ. ಬೇಟೆಯಾಡುವ ಪ್ರವೃತ್ತಿ ಮೊದಲಿಗೆ ಇದ್ದರೂ ಈಗ ಕಾನೂನು ನಿಷೇಧಿಸಿದೆ.

ಸಂಸ್ಕೃತಿಯ ನೆಲೆ

ಕೆಲವು ಹೊಟೆನ್‌ಟಾಟರಿಗೆ ಕಬ್ಬಿಣ-ತಾಮ್ರ ಈ ಲೋಹಗಳ ಕೆಲಸ ತಿಳಿದಿದೆ. ಮಗದ ತಟ್ಟೆಗಳನ್ನೂ ಲೋಟಗಳನ್ನೂ ತಮ್ಮ ಬಳಕೆಗಾಗಿ ಮಾಡಿಕೊಳ್ಳುತ್ತಾರೆ. ನೀರನ್ನೂ ಹಾಲನ್ನೂ ಒಯ್ಯಲು ಚರ್ಮದ ಚೀಲಗಳನ್ನು ಮಾಡುತ್ತಾರೆ; ಚರ್ಮದಿಂದಲೇ ಬುಟ್ಟಿಗಳನ್ನೂ ಚಾಪೆಗಳನ್ನೂ ಸಿದ್ಧಪಡಿಸುತ್ತಾರೆ.

ಅವರ ಗುಡಿಸಲುಗಳು ಜೇನುಗೂಡಿನಂತೆ ಕಾಣುತ್ತವೆ. ಅದನ್ನು ಕಟ್ಟುವುದೂ, ಸ್ಥಳದಿಂದ ಸ್ಥಳಕ್ಕೆ ಸಾಗಿಸುವುದೂ ತುಂಬ ಸುಲಭ. ಮೂರು ನಾಲ್ಕು ಗಜ ಅಗಲವಿರುವ ವೃತ್ತಾಕಾರದ ಸ್ಥಳದ ಸುತ್ತ ಇಪ್ಪತ್ತು ಮೂವತ್ತು ಬಿದುರುಕಡ್ಡಿಗಳನ್ನು ನೆಟ್ಟು, ಮೇಲ್ಭಾಗ

ದಲ್ಲಿ ಅವನ್ನು ಬಗ್ಗಿಸಿ ಕಟ್ಟುತ್ತಾರೆ. ಅಡ್ಡಗೋಲುಗಳನ್ನೂ ಹುಲ್ಲುಜೊಂಡಿನ ಚಾಪೆಗಳನ್ನೂ ಅದರ ಮೇಲೆ ಕಟ್ಟುತ್ತಾರೆ, ಹೆಣೆದು ಭದ್ರಪಡಿಸುತ್ತಾರೆ. ಎಂಥ ಗಾಳಿಯಾಗಲೀ ಮಳೆಯಾಗಲೀ ಇದು ಸುಭದ್ರವಾದ ಗುಡಿಸಲಾಗುತ್ತದೆ.

ಮನೆಯ ನಡುವೆ ಬೆಂಕಿಯ ಗೂಡನ್ನಿಟ್ಟು ಮನೆಯವರೆಲ್ಲ ಅದರ ಸುತ್ತ ಚರ್ಮದ ತುಂಡುಗಳನ್ನು ಹಾಸಿ ಮಲಗಿಕೊಳ್ಳುತ್ತಾರೆ. ಮನೆಯಲ್ಲಿ ಹೆಚ್ಚಿನ ಸಾಮಾನು ಸರಂಜಾಮು ಇರುವುದಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕಕ್ಕೆ ಬಂದವರು ಮಾತ್ರ ಆ ಸಂಸ್ಕೃತಿಯ ತುಣುಕುಗಳನ್ನು ಉಳಿಸಿಕೊಂಡಿದ್ದಾರೆ.

ಜನ ಸ್ನೇಹಪರರು. ಬುಷ್‌ಮೆನ್‌ಗಳಷ್ಟು ಕಷ್ಟಸಹಿಷ್ಣುಗಳಲ್ಲ; ಸೋಮಾರಿಗಳೆಂದೇ ಹೇಳಬಹುದು. "very indolent" ಎಂದು ದಕ್ಷಿಣ ಆಫ್ರಿಕದಲ್ಲಿ 1775 ರಲ್ಲಿ ಪ್ರವಾಸ ಮಾಡಿದ ಆಂಗ್ಲನೊಬ್ಬ ಅವರನ್ನು ಬಣ್ಣಿಸಿದ್ದಾನೆ. ಸಂತೋಷಿಗಳಾದ ಜನ ಅವರು; ಹಾಲು ಕರೆಯುವಾಗಲೂ ಹಾಡುತ್ತಾರೆ, ಕುಣಿಯುತ್ತಾರೆ. ಅತಿಥಿ ಸತ್ಕಾರದಲ್ಲಿ ಅವರಿಗೆ ಹೆಚ್ಚಿನ ಶ್ರದ್ಧೆಯಿದೆ.

ಪಿಗ್ಮಿಗಳು

'ಪಿಗ್ಮಿ' ಎನ್ನುವ ಮಾತನ್ನು ಈಗ 'ಕುಬ್ಜ', 'ಕುಳ್ಳ', ತೀರ ಸಣ್ಣ ವ್ಯಕ್ತಿ ಎನ್ನುವ ಅರ್ಥದಲ್ಲಿ ಬಳಸುತ್ತೇವೆ. ಮೂಲದಲ್ಲಿ ಇದು ಆಫ್ರಿಕ ಖಂಡದ ಒಂದು ಆದಿವಾಸಿ ಜನಾಂಗದ ಹೆಸರು. ಹೆರೋಡೋಟಸ್ ಎಂಬ ಗ್ರೀಕ್ ಇತಿಹಾಸಕಾರನು ಈ ಜನಾಂಗದವರು ಪ್ರತಿ ವರ್ಷವೂ ಕೊಕ್ಕರೆಗಳ ಜೊತೆ ನಡೆಸುವ ಹೋರಾಟವನ್ನು ಬಣ್ಣಿಸಿದ್ದಾನೆ: ಅವನೇ 'ಪಿಗ್ಮಾಯೊಯ್' ಎಂಬ ಹೆಸರನ್ನು ಮೊಟ್ಟಮೊದಲಿಗೆ ಬಳಸಿದವನು. ಗ್ರೀಕ್ ಭಾಷೆಯಲ್ಲಿ ಈ

ಮಾತಿಗೆ 'ಮೊಳಕೈ ಉದ್ದ ಇರುವ ಜನ' ಎಂದರ್ಥ. ಇದು ಉತ್ಪ್ರೇಕ್ಷೆಯ ಮಾತಾದರೂ, ಮಾತು ಉಳಿದಿದೆ.

ಆಫ್ರಿಕದ ಜನರನ್ನು ಅಧ್ಯಯನ ಮಾಡಿರುವ ವಿದ್ವಾಂಸರು ಇವರನ್ನು 'ಟ್ವೈಡ್' ಜನರು ಎಂದು ಕರೆದಿದ್ದಾರೆ. ಬಂಟು ಭಾಷೆಯಲ್ಲಿ 'ಟ್ವ' ಎಂದರೆ ಕುಳ್ಳಜನರು ಎಂದರ್ಥ. ಆಫ್ರಿಕ ಖಂಡದಲ್ಲಿ ಹಲವಾರು ಪ್ರಾಚೀನ ಬುಡಕಟ್ಟುಗಳಿದ್ದು ಅವುಗಳಲ್ಲಿ ಸಂಕರ ವಿಶೇಷವಾಗಿ ನಡೆದಿದೆ. ಆದರೆ ಕೆಲವು ತೀರ ಪ್ರಾಚೀನ ಜನಾಂಗಗಳು ಹೆಚ್ಚೂಕಡಮೆ ಮೊದಲಿನ ಹಾಗೆಯೇ ಉಳಿದುಕೊಂಡು ಇಂದಿಗೂ ನಿಂತಿವೆ. ಇವುಗಳಲ್ಲಿ ಪಿಗ್ಮಿ ಜನಾಂಗ ಪ್ರಮುಖವಾದುದು. ಆಫ್ರಿಕ ಖಂಡದಲ್ಲಿ ಇವರೇ ತುಂಬ ಹಿಂದಿನ ಆದಿವಾಸಿಗಳು. ಇವರ ಜೀವನದಲ್ಲಿ ಸರಳತೆ ಇನ್ನೂ ಉಳಿದಿದೆ. ಇವರು ನೀಗ್ರೋಗಳಂತೆ ಕರಿಯರಲ್ಲ; ಇವರ ಮೈ ಬೂದು ಬಣ್ಣದ್ದು.

ಮಧ್ಯ ಆಫ್ರಿಕಾದಲ್ಲಿ ಮಳೆ ಹೆಚ್ಚಾಗಿ ಬೀಳುವ ಕಾಡುಗಳಲ್ಲಿ ವಾಸಮಾಡುವ ಜನ ಇವರು. ಲೈಬೀರಿಯದಿಂದ ರ್‍ವಾಂಡಾದವರೆಗೆ ಇವರ ವ್ಯಾಪ್ತಿಯೆನ್ನಬಹುದು. ಈ ಟ್ವೈಡ್ ಜನರನ್ನು ಪಶ್ಚಿಮದವರು, ಉತ್ತರದವರು, ದಕ್ಷಿಣದವರು ಎಂದು ಮೂರು ಒಳಪಂಗಡಗಳಾಗಿ ವಿಭಾಗ ಮಾಡುವ ವಾಡಿಕೆಯಿದೆ. ಪಶ್ಚಿಮದವರು ಕ್ಯಾಮೆರೂನ್, ಗೇಬನ್, ಸ್ಪಾನಿಷ್ ಗಿನಿ, ಮಧ್ಯ ಆಫ್ರಿಕಾದ ಉಬಂಗಿ–ಶಾರಿ ಪ್ರದೇಶ ಮತ್ತು ಕಾಂಗೋಗಳಲ್ಲಿ ವಾಸಮಾಡುತ್ತಾರೆ; ಎಲ್ಲ ಒಂದೆಡೆ ಇರುವುದಿಲ್ಲ. ವಿಶಾಲವಾದ ಪ್ರದೇಶದಲ್ಲಿ ದೂರದೂರ ಹಂಚಿಹೋಗಿದ್ದಾರೆ. ಇವರ ಸಂಖ್ಯೆ ಸುಮಾರು 25,000 ಎಂದು ಅಂದಾಜು ಮಾಡಿದ್ದಾರೆ.

ರ್‍ವಾಂಡಾ ಮತ್ತು ಬುರುಂಡಿ ಪ್ರದೇಶಗಳಲ್ಲಿ ದಕ್ಷಿಣದ ಪಂಗಡ

ಇರುವುದು. ಇವರ ಸಂಖ್ಯೆ 9,300 ರಷ್ಟಿರಬಹುದು. ಕಾಂಗೋ ನದಿಯ ದಕ್ಷಿಣ ಭಾಗದಲ್ಲಿ ಬ-ಟ್ವ ಎನಿಸಿಕೊಳ್ಳುವ ಪಿಗ್ಮಿಗಳು ಸುಮಾರು 100,000 ರಷ್ಟಿದ್ದಾರೆ. ಇವರಲ್ಲದೆ ಇಟೂರಿ ಕಾಡಿನಲ್ಲಿರುವ ಪಿಗ್ಮಿಗಳು 32,000 ಇದ್ದಾರೆ. ಎಂದರೆ ಒಟ್ಟು ಸುಮಾರು 166,000 ಮಂದಿ ಪಿಗ್ಮಿಗಳಿದ್ದಾರೆ ಎಂದಾಯಿತು. ಜನಗಣತಿಯೇನು ನಡೆದಿಲ್ಲ; ಪಿಗ್ಮಿಗಳು ನಾಚಿಕೆ ಸ್ವಭಾವದವರು, ನೋಡಲು ಅಥವಾ ಮಾತನಾಡಲು ಸಿದ್ಧವಾಗಿರುವುದಿಲ್ಲ. ಹೀಗಾಗಿ ಈ ಸಂಖ್ಯೆ ಕನಿಷ್ಠಪಕ್ಷ ಎಂದೇ ಹೇಳಬೇಕು. ಪಂಗಡಗಳ ದೃಷ್ಟಿಯಿಂದ ಕಿವು ಪಿಗ್ಮಿಗಳು, ಇಟೂರಿ ಪಿಗ್ಮಿಗಳು ಎಂದು ಪ್ರಮುಖವಾಗಿ ವಿಭಾಗಮಾಡುವುದೂ ಉಂಟು.

ಕುಳ್ಳ ಜನ

ಕುಳ್ಳ ಎಂದರೆ ಎಷ್ಟು ಕುಳ್ಳ? ಇಟೂರಿ ಕಾಡಿನಲ್ಲಿ ವಾಸಮಾಡುವ ಪಿಗ್ಮಿ ಗಂಡಸರು ಸಾಮಾನ್ಯವಾಗಿ 4 ಅಡಿ 8 ಅಂಗುಲ ಎತ್ತರವಾಗಿರುತ್ತಾರೆ ಅಷ್ಟೆ. ಅವರಲ್ಲಿ ಹೆಂಗಸರು ಇನ್ನೂ ಕುಳ್ಳ; 4 ಅಡಿ ಐದು ಅಂಗುಲ ಅಷ್ಟೇ ಅವರ ಎತ್ತರ. ಪಶ್ಚಿಮದ ಮತ್ತು ದಕ್ಷಿಣದ ಪಿಗ್ಮಿಗಳು ಸ್ವಲ್ಪ ಹೆಚ್ಚು ಎತ್ತರವಿರುವುದು ಸಾಮಾನ್ಯ. 4 ಅಡಿ 11 ಅಂಗುಲದಿಂದ 5 ಅಡಿ ಒಂದು ಅಂಗುಲದವರೆಗೂ ಇರುತ್ತಾರೆ ಇವರು. ಇದು ಗಂಡಸರ ಎತ್ತರ. ಹೆಂಗಸರು ಅವರಿಗಿಂತ ಸುಮಾರು ಮೂರು. ಮೂರುವರೆ ಅಂಗುಲ ಕುಳ್ಳಾಗಿರುತ್ತಾರೆ.

ಇವರ, ಎಂದರೆ ದಕ್ಷಿಣ ಪಿಗ್ಮಿಗಳ, ತೂಕ ಸುಮಾರು 72 ಪೌಂಡುಗಳಷ್ಟು ಇರುತ್ತದೆ. ಇಟೂರಿ ಕಾಡಿನ ಪಿಗ್ಮಿಗಳು ಇನ್ನೂ ಹಗುರವಾಗಿರುತ್ತಾರೆ. ಎಂದರೆ ಸಾಮಾನ್ಯವಾಗಿ ಯೂರೋಪಿನ

ಜನರ ತೂಕದ ಅರ್ಧ ಭಾಗದಷ್ಟೇ ಇವರು ತೂಗುವುದು! ಪಿಗ್ಮಿಗಳ ಹಲವಾರು ಪ್ರಾದೇಶಿಕ ಪಂಗಡಗಳಲ್ಲಿ ಎತ್ತರ, ತೂಕ ಎರಡೂ ಬೇರೆ ಬೇರೆಯಿರುತ್ತವೆ. ಆದರೆ ಮೈಕಟ್ಟು, ಶರೀರರಚನೆ ಒಂದೇ ಬಗೆಯವು. ಕಾಲುಗಳು ಕುಳ್ಳು; ಅದರಲ್ಲೂ ತೊಡೆಯ ಭಾಗ ತುಂಬ ಕಡಮೆ. ತೋಳುಗಳು ಉದ್ದ. ಪಿಗ್ಮಿಗಳ ಮಕ್ಕಳಿಗೆ ಹೊಟ್ಟೆ ಊದಿಕೊಂಡಿರುವುದು ಸಾಮಾನ್ಯ. ಪಿಗ್ಮಿಗಳ ಮೈ ಮಾಟಕ್ಕೆ ತಲೆ ದೊಡ್ಡದು. ಮೂಗು ಅಗಲ; ಕಣ್ಣುಗಳ ನಡುವೆ ಹಳ್ಳದಿಂದ ಮೂಗು ಮೊದಲಾಗುತ್ತದೆ.

ಯೂರೋಪಿನ ಜನರಿಗಿಂತ ನೀಗ್ರೋ ಜನರಿಗೆ ಮಣಿಕಟ್ಟುಗಳು ಹೆಚ್ಚು ಸಡಿಲವಾಗಿರುತ್ತವೆ; ನೀಗ್ರೋಗಳಿಗಿಂತಲೂ ಪಿಗ್ಮಿಗಳಿಗೆ ಮಣಿಕಟ್ಟು ಇನ್ನೂ ಸಡಿಲ. ಈ ವಿವರದಿಂದಾಗಿ ಅವರಲ್ಲಿ ಕುಣಿತಕ್ಕೆ, ಓಟಕ್ಕೆ ವಿವಿಧ ರೀತಿಯ ಚಾಲನೆಗೆ, ಅಂಗಭಂಗಿಗೆ ಸೌಲಭ್ಯವಿದೆ. ಅವರು ವಾಸ ಮಾಡುವ ಕಾಡಿನಲ್ಲಿ ಬೇರೆ ಯವರು ಓಡಿಯಾಡುವುದು ತುಂಬ ಕಷ್ಟ. ಅಡಚಣೆಗಳನ್ನು ಅವರ ಪ್ರಯಾಸವಿಲ್ಲದೆ ನಿರ್ವಹಿಸುತ್ತಾರೆ. ಚಂಗನೆ ನೆಗೆದು, ಕುಪ್ಪಳಿಸಿ, ದಾಟು ಕಾಲಿಟ್ಟು, ಮರಗಳ ಮೇಲೆ ಕೂಡ ಏರಿ, ರೆಂಬೆ ಗಳ ನಡುವೆ ತೂರಿ ಅವರು ಮುಂದುವರಿಯುತ್ತಾರೆ. ಈ ರೀತಿಯ ಜೀವನಕ್ರಮಕ್ಕೆ ಅವರ ಎತ್ತರ, ಮೈತೂಕ, ಸಡಿಲವಾದ ಮಣಿಕಟ್ಟುಗಳು ನೆರವಾಗುತ್ತವೆ.

ಈ ಜನ ಇಷ್ಟು ಕುಳ್ಳಾಗಿರುವುದು ಏಕೆಂದು ವಿಜ್ಞಾನಿಗಳು ವಿವಿಧವಾಗಿ ವಿವರಿಸಿದ್ದಾರೆ. ಮಣಿಕಟ್ಟುಗಳು ಸಡಿಲವಾಗಿರು ವುದರಿಂದ ಬೆಳವಣಿಗೆಯ ಹಾರ್ಮೋನ್‌ಗಳು ಸಾಕಷ್ಟು ಉತ್ಪನ್ನ ವಾಗದೆ ಮೈ ಕುಳ್ಳಾಗಿದೆ ಎಂದು ಒಂದು ವಿವರಣೆ. ಅವರು ವಾಸಮಾಡುವ ಪರಿಸರದಲ್ಲಿ ಇಂಥದೇ ಮೈಕಟ್ಟು, ತೂಕ, ಎತ್ತರ

ತಕ್ಕುವಾದುದರಿಂದ, ಹೊಂದಾಣಿಕೆಯ ಫಲವಾಗಿ ಕುಳ್ಳಾಗಿದ್ದಾರೆ ಎಂದು ಇನ್ನೊಂದು ವಿವರಣೆ. ಅವರು ಶೈಶವಾವಸ್ಥೆಯಲ್ಲಿಯೇ ಇರುವ ಜನಾಂಗ; ಅವರಲ್ಲಿ ಪ್ರೌಢರಾಗುವ ಸೌಕರ್ಯವಿಲ್ಲ ಎಂದೂ ಒಂದು ವಾದವಿದೆ. ಎಳೆಯ ಮಕ್ಕಳಿಗೆ ಅವರು ಬಾಳೆಹಣ್ಣನ್ನು ತಿನ್ನಿಸುವ ಪದ್ಧತಿಯಿಂದಾಗಿ ಅಸ್ಥಿಪಂಜರದ ಮೇಲೂ ಮೈತೂಕದ ಮೇಲೂ ಪ್ರಭಾವವುಂಟಾಗುತ್ತದೆ ಎಂದೂ ಹೇಳುತ್ತಾರೆ.

ಪಿಗ್ಮಿಗಳು ಕುಳ್ಳಾಗಿದ್ದರೂ ಪ್ರೌಢರಾಗುವುದಕ್ಕೇನೂ ಅಡ್ಡಿಯಿಲ್ಲ; ಅವರ ಲೈಂಗಿಕ ವ್ಯಾಪಾರ ಹೆಚ್ಚಾಗಿಯೇ ಇದೆ; ಬೆಳೆದ ಪಿಗ್ಮಿಗಳಲ್ಲಿ ಇತರ ಜನಾಂಗಗಳ ಪ್ರೌಢ ಜನರಿಗಿರುವ ಲಕ್ಷಣಗಳನ್ನೇ ಕಾಣಬಹುದು. ಶೈಶವದಲ್ಲಿಯೇ ಇರುವ ಜನ ಅವರು ಎನ್ನುವುದು ಸಲ್ಲದು. ಕ್ರಿಸ್ತಪೂರ್ವ ಸಾವಿರಾರು ವರ್ಷಗಳ ಹಿಂದೆಯೆ ಈಜಿಪ್ಟಿನ ದೊರೆ ಫೇರೋ ಒಬ್ಬ ಪಿಗ್ಮಿ ನರ್ತಕನನ್ನು ತನ್ನ ಆಸ್ಥಾನಕ್ಕೆ ಕರೆಸಿಕೊಂಡ ಉಲ್ಲೇಖವಿದೆ; ಆಗಲೂ ಈ ಜನ ಕುಳ್ಳರೆಂದೇ ಪ್ರಖ್ಯಾತರಾಗಿದ್ದರು. ಆ ಕಾಲಕ್ಕೆ ಅವರಿಗೆ ಬಾಳೆಯ ಹಣ್ಣಿನ ಪರಿಚಯ ಇರಲಿಲ್ಲ; ಆದರೂ ಕುಳ್ಳಾಗಿದ್ದರು. ಎಂದರೆ ಬಾಳೆಯ ಹಣ್ಣು ತಿನ್ನುವ ಅಭ್ಯಾಸಕ್ಕೂ ಕುಳ್ಳುತನಕ್ಕೂ ಸಂಬಂಧವಿಲ್ಲ. ಪರಿಸರಕ್ಕೆ ಹೊಂದಿಕೊಂಡು ಕುಳ್ಳಾಗಿ ಇದ್ದಾರೆ ಎನ್ನುವ ವಾದದಲ್ಲಿ ಹುರುಳಿದೆ.

ಜೀವನಕ್ರಮ

ಇವರ ಸಾಂಸ್ಕೃತಿಕ ನೆಲೆ ತುಂಬ ಪ್ರಾಚೀನವಾದುದು. ಸಿದ್ಧವಾದ ಆಹಾರವನ್ನು ಅರಸುವುದೇ ಇವರ ಕಸುಬು. ಬೇರೆ ಯಾವ ಪ್ರವೃತ್ತಿಯನ್ನೂ ಇವರು ಅರಿಯರು. ಕೈಗಾರಿಕೆ, ನೆಯಿಗೆ

ಮೊದಲಾದ ಯಾವ ಕೆಲಸವೂ ಇವರಿಗೆ ಬಾರದು. ಕಾಡಿನಲ್ಲಿ ಹಣ್ಣು, ಬೇರು, ಬೀಜಗಳನ್ನೂ ಇರುವೆ, ಗೊದ್ದಗಳನ್ನೂ ಹುಡುಕಿ, ಹೆಕ್ಕಿ ಕೊಳ್ಳುವುದು, ಹಕ್ಕಿಗಳನ್ನೂ ಸಣ್ಣ ಸಣ್ಣ ಪ್ರಾಣಿಗಳನ್ನೂ ಬಿಲ್ಲು ಬಾಣಗಳಿಂದ ಬೇಟೆಯಾಡುವುದು ಇಷ್ಟೇ ಇವರ ಜೀವನಕ್ರಮ.

ಇದಕ್ಕೆ ಅನುಕೂಲವಾಗುವ ಹಾಗೆ ಪಿಗ್ಮಿಗಳು ಕಾಡಿನಲ್ಲಿ ಸಣ್ಣ ಸಣ್ಣ ತಂಡಗಳಲ್ಲಿ ದೂರ ದೂರ ವಾಸಮಾಡುತ್ತಾರೆ. ಒಂದು ತಂಡಕ್ಕೂ ಇನ್ನೊಂದು ತಂಡಕ್ಕೂ ಸಂಪರ್ಕವಿರುವುದು ತೀರ ಅಪರೂಪ. ಒಂದೊಂದು ತಂಡವೂ ಸ್ವತಂತ್ರ ಪಂಗಡದಂತೆಯೇ ಕೆಲಸಮಾಡುತ್ತದೆ. ಇವರು ವಾಸಮಾಡುವ ಕಾಡಿನಲ್ಲಿ ಮಳೆ ಹೆಚ್ಚು; ದಿನದಲ್ಲಿ ವ್ಯತ್ಯಾಸಗಳು ಕಡಮೆ. ಉಷ್ಣಾಂಶ ಹಗಲಿನಲ್ಲಿ 86 ಡಿಗ್ರಿ (ಫ್ಯಾ) ಗಳಷ್ಟಿದ್ದರೆ ರಾತ್ರಿ 68 ಡಿಗ್ರಿ (ಫ್ಯಾ) ಆಗುತ್ತದೆ ಅಷ್ಟೆ; ಮಳೆ ಬಂದರೆ ಸ್ವಲ್ಪ ಕಡಮೆ ಆದೀತು.

ಮಳೆಯಂತೂ ಪ್ರತಿದಿನವೂ ಬೀಳುತ್ತದೆ. ವರ್ಷದಲ್ಲಿ ಒಂದೆರಡು ತಿಂಗಳು ಇದಕ್ಕೆ ಬಿಡುವಿರುತ್ತದೆ ಅಷ್ಟೆ. ಉಳಿದ ವೇಳೆ, ದಿನಕ್ಕೆ ಒಂದೆರಡು ಗಂಟೆಗಳ ಕಾಲ ಭಾರಿ ಮಳೆ ಸುರಿಯುತ್ತದೆ; ಗುಡುಗು–ಸಿಡಿಲುಗಳ ಆರ್ಭಟವೂ ಇರುತ್ತದೆ. ಅಂಥ ಮಳೆ–ಬಿರುಗಾಳಿಗೆ ಮರಗಳಿಂದ ರೆಂಬೆಗಳು ಕಡಿದು ಬೀಳುವುದೂ ಹೆಚ್ಚು. ಪಿಗ್ಮಿಗಳು ಓಡಾಡಬೇಕಾದರೆ ಇವನ್ನು ದಾಟಿಕೊಂಡು ಹಾರಿ ಹೋಗಬೇಕು; ಮರಬಳ್ಳಿಗಳನ್ನು ಹಿಡಿದುಕೊಂಡು ತೂಗಾಡಿ ಕೂಡ ಹೋಗಬೇಕಾಗುತ್ತದೆ. ಕಾಡಿನಲ್ಲಿ ವಾಸಮಾಡುವ ನೀಗ್ರೋಗಳಿಗೂ ಇದು ಕಷ್ಟವೇ; ಆದರೆ ಪಿಗ್ಮಿ ಜನರಿಗೆ ಇದು ತೊಂದರೆಯೆನಿಸದು.

ನೀಗ್ರೋ ಜನರ ಆಶ್ರಯ

ಪಿಗ್ಮಿ ಜನರಿಗೂ ನೀಗ್ರೋಗಳಿಗೂ ಒಂದು ಬಗೆಯ ಸಂಪರ್ಕ ಬೆಳೆದುಬಂದಿದೆ. ಇಂಥ ಕಾಡುಗಳಲ್ಲಿ ನೀಗ್ರೋಗಳು ಸ್ವಲ್ಪ ಸ್ಥಳವನ್ನು ಚೊಕ್ಕಟ ಮಾಡಿಕೊಂಡು ಅಲ್ಲಿ ತಮಗೆ ಬೇಕಾದ ಬೆಳೆಯನ್ನು ಬೆಳೆದುಕೊಳ್ಳಲಾರಂಭಿಸಿದಾಗ, ಪಿಗ್ಮಿಗಳು ಅವರಿಗೆ ನೆರವಾದರು. ನೀಗ್ರೋಗಳಿಗೆ ಅವಶ್ಯವಾದ ಮಾಂಸವನ್ನು ಪಿಗ್ಮಿಗಳು ಒದಗಿಸುತ್ತಿದ್ದುದಲ್ಲದೆ, ಅವರ ಮೇಲೆ ಶತ್ರುಗಳು ಎರಗಿ ಬರುವುದಿದ್ದರೆ ಪಿಗ್ಮಿಗಳು ಅದರ ಸುಳಿವನ್ನು ಮೊದಲೇ ತಿಳಿಸುತ್ತಿದ್ದರು. ಆನೆಗಳು ನುಗ್ಗಿ ಬರುವುದು ಕೂಡ ದೂರದಿಂದಲೇ ಪಿಗ್ಮಿಗಳಿಗೆ ತಿಳಿಯುತ್ತಿದ್ದುದರಿಂದ, ನೀಗ್ರೋ ಜನರ ಬೆಳೆಯನ್ನು ಕಾಪಾಡಿಕೊಳ್ಳಲು ಕೂಡ ಪಿಗ್ಮಿಗಳ ನೆರವು ದೊರೆಯುತ್ತಿದ್ದಿತು. ಅದಕ್ಕೆ ಬದಲಾಗಿ ನೀಗ್ರೋಗಳು ಪಿಗ್ಮಿಗಳಿಗೆ ಮಡಕೆಗಳನ್ನು, ಕಬ್ಬಿಣದ ಉಪಕರಣಗಳನ್ನು, ಬಾಳೆಯ ಹಣ್ಣುಗಳನ್ನು ಕೊಡುತ್ತಿದ್ದರು.

ಹೀಗೆ ನೀಗ್ರೋಗಳನ್ನು ಅನುಸರಿಸಿ, ಅವಲಂಬಿಸಿ, ಆಶ್ರಯಿಸಿ ಪಿಗ್ಮಿ ಜನರು ತಮ್ಮ ಜೀವನಕ್ರಮವನ್ನು ರೂಢಿಸಿಕೊಂಡರು. ಕಾಡಿನಲ್ಲಿಯೇ ತಾವು ವಾಸಮಾಡುತ್ತಿದ್ದರೂ ಪಿಗ್ಮಿಗಳು ಆಗಾಗ ನೀಗ್ರೋ ಗ್ರಾಮಗಳಿಗೆ ಬಂದುಹೋಗುತ್ತಿದ್ದರು; ತಮ್ಮ ಮಕ್ಕಳನ್ನು ನೀಗ್ರೋ ಶಾಲೆಗಳಿಗೆ ಕಳುಹಿಸಲಾರಂಭಿಸಿದರು; ಕೆಲವು ಪಿಗ್ಮಿಗಳು ನೀಗ್ರೋ ಮನೆಗಳಲ್ಲಿ ಊಳಿಗಕ್ಕೆ ಕೂಡ ನಿಲ್ಲತೊಡಗಿದರು. ನೀಗ್ರೋ ಗಂಡಸರ ಹಲವಾರು ಹೆಂಡಂದಿರಲ್ಲಿ ಕೆಲವರು ಪಿಗ್ಮಿ ಹೆಂಗಸರೂ ಇರುತ್ತಿದ್ದರು. ಇಂಥ ಪಿಗ್ಮಿ–ನೀಗ್ರೋ ಸಂಪರ್ಕದಿಂದ ಹುಟ್ಟಿದ ಮಕ್ಕಳು ಅರ್ಧ–ಪಿಗ್ಮಿಯ

ರಾಗಿ ನೀಗ್ರೋ ಜನಾಂಗದಲ್ಲಿಯೇ ಒಂದು ಸ್ಥಾನಮಾನ ಪಡೆಯುವುದೂ ಸಾಧ್ಯವಾಯಿತು. ನೀಗ್ರೋ ಹೆಂಗಸರು ಮಾತ್ರ ಪಿಗ್ಮಿ ಗಂಡಸರನ್ನು ಮದುವೆ ಮಾಡಿಕೊಳ್ಳುವುದಿಲ್ಲ; ಮಾಡಿಕೊಂಡರೂ ಪಿಗ್ಮಿಗಳೊಂದಿಗೆ ಕಾಡಿನಲ್ಲಿ ಬದುಕುವುದಂತೂ ಅವರಿಗೆ ಸಾಧ್ಯವಿಲ್ಲದ ಮಾತು.

ದಕ್ಷಿಣ ಟ್ವೈಡ್ ಎನಿಸಿಕೊಳ್ಳುವ ಪಿಗ್ಮಿಗಳು ಕ್ರಿಸ್ತಾಬ್ದ 500 ರ ವರೆಗೆ ಕಾಡಾಗಿದ್ದ ರ್‍ವಾಂಡಾ, ಬುರುಂಡಿ ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡಿದ್ದರು. ಆದರೆ ಆ ಸಮಯದಲ್ಲಿ ಹುಟು (ಬಹುಟು) ನೀಗ್ರೋಗಳು ಈ ಪ್ರದೇಶದಲ್ಲಿ ನೆಲೆಸಲು ಬಂದಾಗ ಪಿಗ್ಮಿಗಳು ಒಳ ಕಾಡುಗಳಿಗೆ ಹೋಗಬೇಕಾಯಿತು. ಹುಟು ನೀಗ್ರೋಗಳು ಕಾಡನ್ನು ಕಡಿದು, ಬೆಳೆಗೆ ನೆಲವನ್ನು ಅಣಿಮಾಡಿಕೊಳ್ಳುತ್ತಿದ್ದರು. ಪಿಗ್ಮಿಗಳ ಕಾಡು ದೂರ ದೂರ ಸರಿಯುತ್ತಿದ್ದಿತು. ಕಡೆಗೆ ಪಿಗ್ಮಿಗಳು ಈ ಹುಟು ನೀಗ್ರೋ ಜನರನ್ನೇ ಆಶ್ರಯಿಸಿ ಕಿವು ಸರೋವರದ ದಡದ ಮೇಲೆ ನಿಲ್ಲಬೇಕಾಯಿತು. ಹುಟುಮನೆಗಳಲ್ಲಿ ಊಳಿಗಕ್ಕೆ, ಹುಟು ಕುಂಬಾರರ ಬಳಿ ಸೇವಕರಾಗಿ , ಗ್ರಾಮದಲ್ಲಿ ತೋಟಿಗಳಾಗಿ ಪಿಗ್ಮಿ ಜನರು ನಿಂತರು. ಹುಟು ನೀಗ್ರೋ ಜನರು ಹೀಗೆ ತಮ್ಮ ಗ್ರಾಮದಲ್ಲಿ ನಿಂತ ಪಿಗ್ಮಿಗಳನ್ನು ತುಂಬ ಹೀನಾಯವಾಗಿ ಕಾಣುತ್ತಿದ್ದರು. ಹುಟು ಮತ್ತು ಪಿಗ್ಮಿ ಜನರ ನಡುವೆ ವಿವಾಹಸಂಬಂಧ ತೀರ ಕಡಮೆ.

ಇಥಿಯೋಪಿಯಕ್ಕೆ ಗಾಲ್ಲಾ ದಾಳಿಯು 1450 ರಲ್ಲಿ ಒದಗಿದಾಗ ತುಟ್ಸಿ (ವಟುಸಿ) ಎಂಬ ಜನರು ಪಿಗ್ಮಿಗಳಿದ್ದ ಕಾಡಿಗೆ ನುಗ್ಗಿ ಬಂದರು. ಆಗ ಪಿಗ್ಮಿಗಳು ಹಿಂದೆ ಹಿಂದೆ ಸರಿಯಲಾರಂಭಿಸಿ ಅಗ್ನಿಪರ್ವತಗಳ ಅಕ್ಕಪಕ್ಕ ನೆಲೆಸಿದರು. ತುಟ್ಸಿ ಜನರು ಬೇಸಾಯಗಾರರು; ಹಸು-ಕರುಗಳ ಹಿಂಡನ್ನು ಸಾಕಿಕೊಂಡಿದ್ದರು.

ಅವರ ಹಸುಕರುಗಳಿಗೆ ಎಡೆ ಮಾಡಿಕೊಟ್ಟು ಪಿಗ್ಮಿ ಜನ ಕಾಡಿನೊಳಗೆ ಸೇರಬೇಕಾಯಿತು.

ಇವರು ವಾಸಮಾಡುವ ಜೌಗು ಕಾಡು ಮಲೇರಿಯಾ ರೋಗಕ್ಕೆ ತೌರೂರು. ಆದರೆ ಪಿಗ್ಮಿ ಜನರನ್ನು ಈ ರೋಗ ಮುಟ್ಟದಿರುವುದು ಸ್ವಾರಸ್ಯ. ಅವರ ಶರೀರ ವ್ಯವಸ್ಥೆಯಲ್ಲಿ ಮಲೇರಿಯಾವನ್ನು ತಡೆಗಟ್ಟುವ 'ಜೀನ್' ಸಾಮಗ್ರಿಯಿದೆಯೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಈ ಜನರನ್ನು ಕಾಡುವ ಕಾಯಿಲೆಯೆಂದರೆ 'ಕ್ವಷಿಯೋರ್‌ಕರ್' ಎನ್ನುವುದು. ಇದು ನೀಗ್ರೋ ಸಂಪರ್ಕದಿಂದ ಬಾಳೆಯಹಣ್ಣನ್ನು ತಿನ್ನುವ ಅಭ್ಯಾಸದಿಂದ ಬಂದ ಖಾಯಿಲೆ. ಪ್ರೋಟೀನ್ ಸಾಮಗ್ರಿ ಕಡಮೆಯಾದಾಗ ತಲೆದೋರುವ ಈ ಖಾಯಿಲೆಯಿಂದ ಪಿತ್ತಕೋಶದಲ್ಲಿ ಕೊಬ್ಬು ಸೇರಿ ಊದಿಕೊಳ್ಳುವಿಕೆ, ಪ್ಯಾಂಕ್ರಿಯಾ ಗ್ರಂಥಿಗಳು ಇರುವಿಕೆ, ಹಲ್ಲುಗಳು ಕೆಡುವುದು, ರಕ್ತಹೀನತೆ ಮೊದಲಾದ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಅಸ್ಥಿಪಂಜರದ ಬೆಳವಣಿಗೆಯೂ ಇದರಿಂದ ಕುಂಠಿತವಾಗುತ್ತದೆ.

ಕಾಂಗೋ ಜನರು

ಆಫ್ರಿಕಾ ಖಂಡದಲ್ಲಿ ಭೂಮಧ್ಯರೇಖೆ ಹೋಗುವ ಪ್ರದೇಶ ಇದು; ಮೊದಲು ಇದಕ್ಕೆ ಬೆಲ್ಜಿಯನ್ ಕಾಂಗೋ ಎಂದು ಹೆಸರಿದ್ದಿತು. ಕಾಂಗೋ ನದಿ ಇಲ್ಲಿ ಹರಿಯುವುದರಿಂದ ಅಕ್ಕಪಕ್ಕದ ಪ್ರದೇಶವೆಲ್ಲ 'ಕಾಂಗೋ' ಎನಿಸಿಕೊಳ್ಳುತ್ತದೆ. ಈ ಪ್ರದೇಶದ ವಿಸ್ತಾರ 905,000 ಚದರ ಮೈಲಿಗಳು. ಇಲ್ಲಿನ ಜನಸಂಖ್ಯೆ 14,800,000. ಆಫ್ರಿಕ ಖಂಡದ ಅತಿ ದೊಡ್ಡ ರಾಜ್ಯಗಳಲ್ಲಿ ಇದು ಮೂರನೆಯದು. 1960 ರ ಜೂನ್, 30 ರಂದು ಇದು ಸ್ವತಂತ್ರವಾಯಿತು.

ಇತಿಹಾಸ

ಹತ್ತೊಂಬತ್ತನೆಯ ಶತಮಾನದ ಕಡೆಯ ಭಾಗದವರೆಗೂ ಹೊರಪ್ರಪಂಚಕ್ಕೆ ಕಾಂಗೋ ನದಿಯ ಅಥವಾ ಅದರ ಅಕ್ಕಪಕ್ಕ ಪ್ರದೇಶಗಳ ಪರಿಚಯವಿರಲಿಲ್ಲ. ಪರಿಚಯವಿದ್ದ ಒಂದೇ ಒಂದು ವಿವರವೆಂದರೆ ಪೋರ್ಚುಗೀಸ್ ನಾವಿಕ ಡಿಯೋಗೋಕಾವ್ ಎಂಬಾತ 1484 ರಲ್ಲಿ ಕಾಂಗೋ ನದೀಮೂಲವನ್ನು ಕಂಡುಹಿಡಿದದ್ದು. ಈ ಪ್ರದೇಶದ ಬಗ್ಗೆ ಹಲವಾರು ವಿವರಗಳನ್ನು 1876–1877 ರ ಸುಮಾರಿನಲ್ಲಿ ಸರ್ ಹೆನ್ರಿ ಮಾರ್ಟಿನ್ ಸ್ಟ್ಯಾನ್ಲಿ ಒದಗಿಸಿದಾಗಲೇ ಯೂರೋಪ್ ಖಂಡಕ್ಕೆ ಕಾಂಗೋ ಪ್ರದೇಶದ ಪರಿಚಯವಾದುದು. ಈತನ ಪ್ರವಾಸಕ್ಕೆ ಬ್ರಿಟಿಷ್ ಸರಕಾರ ನೆರವಾಗಲು ನಿರಾಕರಿಸಿದ ನಂತರ ಈತನು ಬೆಲ್ಜಿಯಂ ರಾಜ ಇಮ್ಮಡಿ ಲಿಯೋ ಪಾಲ್ಡ್‌ನ ನೆರವನ್ನು ಪಡೆದನು. ಕಾಂಗೋ ಪ್ರದೇಶದ ಮೇಲೆ ಲಿಯೋಪಾಲ್ಡ್‌ನ ಸ್ವಂತ ಪ್ರಭುತ್ವ ಆರಂಭವಾಯಿತು. ಯೂರೋಪಿನ ಸ್ವಂತ ಉದ್ಯಮಕಾರರು ಕಾಂಗೋ ದೇಶೀಯರ ಮೇಲೆ ಅಕ್ರಮ ಸುಲಿಗೆ ಮಾಡುತ್ತಿದ್ದಾರೆಂದು ಇಂಗ್ಲೆಂಡ್ ಆರೋಪ ಮಾಡಿದ ನಂತರ ಅಂತರರಾಷ್ಟ್ರ ವಿಚಾರಣಾ ಸಮಿತಿಯ ನೇಮಕವಾಗಿ, 1908 ರಲ್ಲಿ ಲಿಯೋಪಾಲ್ಡ್ ಈ ಪ್ರದೇಶದ ಮೇಲೆ ತನ್ನ ಸ್ವಂತ ಅಧಿಕಾರವನ್ನು ಬಿಟ್ಟುಕೊಟ್ಟನು. ಕಾಂಗೋ ಪ್ರದೇಶವು ಬೆಲ್ಜಿಯಂನ 'ಕಾಲೊನಿ' ಯೆಂದು ಪರಿಗಣಿತವಾಯಿತು.

ಹಲವಾರು ವಿಧಗಳಲ್ಲಿ ಬೆಲ್ಜಿಯಂನ ಪ್ರಗತಿಯನ್ನು ಸಾಧಿಸಿವುದಾಯಿತು. ರಸ್ತೆ, ರೈಲು, ವಿಮಾನ ನಿಲ್ದಾಣಗಳು, ವ್ಯಾಪಾರ ಉದ್ಯಮ, ವ್ಯವಸಾಯ ಎಲ್ಲದರಲ್ಲಿಯೂ ದೇಶ ಮುಂದುವರೆಯಿತು. ಸುತ್ತಮುತ್ತಲಿನ ರಾಷ್ಟ್ರಗಳಲ್ಲಿ ರಾಜಕೀಯ ಪರಿಸ್ಥಿತಿ ಬಿಕ್ಕಟ್ಟಾದು

ದರಿಂದ, 1959 ರಲ್ಲಿ ಕಾಂಗೋಲಿಸ್ ಜನರು ಬೆಲ್ಜಿಯಂ ಪ್ರಭುತ್ವದ ವಿರುದ್ಧ ದಂಗೆಯೆದ್ದರು. ಪ್ಯಾಟ್ರಿಸ್ ಲುಮುಂಬ ಎಂಬ ತರುಣ ಈ ಆಂದೋಲನದ ನಾಯಕನಾದನು. ಜನಗಳಲ್ಲಿ ಸ್ವಾತಂತ್ರ್ಯ ಸಮರದ ಉತ್ಸಾಹ ಹೆಚ್ಚಿ 1960 ರಲ್ಲಿ ಕಾಂಗೋ ರಾಷ್ಟ್ರ ಸ್ವತಂತ್ರವಾಯಿತು.

ರಾಷ್ಟ್ರದಲ್ಲಿ 'ಎರಡು ಮನೆಗಳ ಸಂವಿಧಾನ' ಮೊದಲಾಗಿ, ಪ್ರಜಾಸಂಸತ್ತು ಮತ್ತು ರಾಷ್ಟ್ರಾಧ್ಯಕ್ಷ ಸ್ಥಾನ ಜಾರಿಗೆ ಬಂದುವು. ಮಂತ್ರಿಮಂಡಲಕ್ಕೆ ಲುಮುಂಬನೇ ಮುಖ್ಯಸ್ಥನಾಗಿ ನೇಮಕ ಗೊಂಡನು. ರಾಷ್ಟ್ರ ಸ್ವತಂತ್ರವಾದ ಕೆಲವೇ ದಿನಗಳಲ್ಲಿ ಅದಕ್ಕೆ ಸೇರಿದ, ಗಣಿ ಕೆಲಸಕ್ಕೆ ಕೇಂದ್ರವಾದ ಕಟಾಂಗ ಪ್ರದೇಶವನ್ನು ಅಲ್ಲಿನ ಮೋಯೊ ಹೊಂಬೆ ಪ್ರತ್ಯೇಕವೆಂದೂ ಸ್ವತಂತ್ರವೆಂದೂ ಘೋಷಿಸಿದುದು ಗೊಂದಲಕ್ಕೆ, ಬಿಕ್ಕಟ್ಟಿಗೆ ಕಾರಣವಾಯಿತು. ವಿಶ್ವರಾಷ್ಟ್ರಗಳ ಸಂಸ್ಥೆಯು ಇದರ ಪರಿಹಾರಕ್ಕೆ ಪ್ರಯತ್ನಿಸ ಬೇಕಾಯಿತು. 1960 ರ ಡಿಸೆಂಬರ್‌ನಲ್ಲಿ ಸ್ವತಂತ್ರ ಕಾಂಗೋ ರಾಷ್ಟ್ರದ ಸೇನಾನಾಯಕ ಮೊಬುಟು ಮತ್ತು ಜೋಸೆಫ್ ಕಸವುಬು ಇಬ್ಬರೂ ಇದ್ದಕ್ಕಿದ್ದಂತೆ ಪ್ರಬಲರಾಗಿ, ಲುಮುಂಬನನ್ನು ಸೆರೆಯಲ್ಲಿಟ್ಟು ಪ್ರಜಾಸಂಸತ್ತನ್ನು ರದ್ದುಗೊಳಿಸಿದರು. ಕೆಲವು ಕಾಲದ ನಂತರ ಲುಮುಂಬನ ಕೊಲೆಯೂ ಆಯಿತು. ಕಟಾಂಗದ ಪ್ರತ್ಯೇಕತೆಯಿಂದ ಕಾಂಗೋಗೆ ಒದಗಿದ ಸಮಸ್ಯೆಯನ್ನು ಪರಿಹರಿಸಲೆಂದೇ ಮಾತುಕತೆ ಗಾಗಿ 1962 ರಲ್ಲಿ ದಾಗ್ ಹ್ಯಾಮರ್‌ಷೀಲ್ಡ್ (ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ) ಕಟಾಂಗಕ್ಕೆ ಹೋಗುತ್ತಿರುವಾಗ ವಿಮಾನದ ಅಪಘಾತದಲ್ಲಿ ಮೃತಪಟ್ಟನು. 1963 ರಲ್ಲಿ ವಿಶ್ವ ರಾಷ್ಟ್ರ ಸಂಸ್ಥೆಯ ಪ್ರಯತ್ನದಿಂದಲೇ ಕಟಾಂಗ ಸಮಸ್ಯೆಯು ಕೊನೆ ಗೊಂಡಿತು.

ಜನ

ಕಾಂಗೋ ಆಫ್ರಿಕ ಖಂಡದ ಮಧ್ಯೆ ಇರುವುದರಿಂದ ಖಂಡದ ಎಲ್ಲ ಜನರೂ ಇಲ್ಲಿಗೆ ಒಂದಲ್ಲ ಒಂದು ಕಾಲದಲ್ಲಿ ವಲಸೆ ಬಂದು ನೆಲೆಸಿದ್ದಾರೆ; ಬಂದವರೂ ಪ್ರದೇಶದ ವಿವಿಧ ಭಾಗಗಳ ಹವಾಗುಣ, ಭೂಲಕ್ಷಣ, ಉದ್ಯಮಾವಕಾಶಗಳನ್ನನುಸರಿಸಿ ಬೇರೆ ಬೇರೆ ಬಗೆಗಳಾಗಿ ಉಳಿದು ಬಂದಿದ್ದಾರೆ. ಇಲ್ಲಿಗೆ ಬಂದವರು ಹಲವಾರು ಬುಡಕಟ್ಟಿಗೆ ಸೇರಿದವರು, ಬೇರೆ ಬೇರೆ ಭಾಷೆಗಳನ್ನಾಡುವವರು. ಮುಖ್ಯವಾಗಿ ಉತ್ತರದಿಂದ ಸೂಡಾನೀಸ್ ಜನ, ಪೂರ್ವದಿಂದ ನಿಲೋಟಿಕ್ ಹ್ಯಾಮೈಟ್ ಜನ. ದಕ್ಷಿಣದಿಂದಲೂ ಪಶ್ಚಿಮದಿಂದಲೂ ಬಂಟು ಜನ ಇವರು ಮುಖ್ಯರು. ಆದಿವಾಸಿಗಳಾಗಿ ಇಲ್ಲಿದ್ದ ಪಿಗ್ಮಿಯರನ್ನು [illegible]ಚೆಗೆ ಓಡಿಸಿಬಿಟ್ಟಿದ್ದಾರೆ ಇವರೆಲ್ಲ. ಕಾಂಗೋ ನದಿಯ ಕೆಳಭಾಗದಲ್ಲಿ ಬಂಟು ಸಾಮ್ರಾಜ್ಯಗಳು ಕಾಣಿಸಿಕೊಂಡುವು.

ಪ್ರದೇಶದ ತುಂಬ ಚಿಕ್ಕಪುಟ್ಟ ಅರಸೊತ್ತಿಗೆಗಳಾದುವು. ಅವು ಪರಸ್ಪರ ವೈಷಮ್ಯದಿಂದ ಸಮರಸನ್ನದ್ಧವಾಗಿರುತ್ತಿದ್ದುದೇ ಹೆಚ್ಚು. ಬುಡಕಟ್ಟಿನ ಮನೋಧರ್ಮ ಇಲ್ಲಿ ವಿಪುಲವಾಗಿ ಬೆಳೆದು ಬಂದಿದೆ. ಕಟಾಂಗದ ಬಂಟು ಲುಂಡ ಸಾಮ್ರಾಜ್ಯ ತುಂಬ ಪ್ರಬಲವಾದುದು. ಯೂರೋಪಿಯನ್ನರು ಈ ಪ್ರದೇಶವನ್ನಾಕ್ರಮಿಸಿಕೊಂಡ ನಂತರ, ಅವರ ಪ್ರೋತ್ಸಾಹದಿಂದ ಪ್ರತ್ಯೇಕತೆಯ ಮನೋಧರ್ಮ ಇನ್ನಷ್ಟು ಬೆಳೆಯಿತು. ರಾಷ್ಟ್ರ ಸ್ವತಂತ್ರವಾದ ಮೇಲೂ ಯಾದವೀಕಲಹ, ಪ್ರದೇಶಾಭಿಮಾನ, ರಕ್ತಪಾತ ಇವು ನಿಂತಿಲ್ಲ. ಹೀಗಾಗಿ ರಾಷ್ಟ್ರದ ಐಕ್ಯತೆ ಕನಸಾಗಿಯೇ ಉಳಿದಿದೆ.

ಜಾನಪದ ಸಂಸ್ಕೃತಿ

ಹೊರಪ್ರಪಂಚದ ಸಂಪರ್ಕ ಸಾಕಷ್ಟು ಒದಗಿದ್ದರೂ, ಕಾಂಗೋ ಜನರು ಹಳೆಯ ಆಚಾರಗಳಿಗೇ, ಪದ್ಧತಿಗಳಿಗೇ ಶರಣುಹೋಗಿರುವುದನ್ನು ಕಾಣಬಹುದು. ರಾಷ್ಟ್ರದ ಮೂರನೆಯ ಒಂದು ಭಾಗವಾದರೂ ಇಂದಿಗೂ ಪ್ರಾಚೀನ ಧಾರ್ಮಿಕ ಪರಂಪರೆಗೆ ಅಂಟಿಕೊಂಡೇ ಇದೆ. ಅವರ ಪದ್ಧತಿಗಳಲ್ಲಿ ಯಕ್ಷಿಣಿ, ಮಂತ್ರ, ಯಂತ್ರ, ತಂತ್ರ ಇವುಗಳ ಪಾತ್ರ ದೊಡ್ಡದು; ದೇವತೆಗಳ ಶಕ್ತಿ, ಪಿತೃ-ಭೂತಗಳ ಸಾಮರ್ಥ್ಯ ಮತ್ತು ...ಟ, ಮಂತ್ರ ಇವುಗಳಲ್ಲಿ ಅವರ ನಂಬಿಕೆ ದೃಢವಾದುದು.

ಅವರ ಧಾರ್ಮಿಕ ವಿಧಿಗಳಲ್ಲಿ ಮುಖವಾಡ ಧರಿಸಿ ಕುಣಿಯುವುದು ಸಾಮಾನ್ಯವಾಗಿ ನಿಯಮ. ಕೆಲವು ಪ್ರದೇಶಗಳಲ್ಲಿ ಮುಖವಾಡಗಳು ಸರಳವಾಗಿ, ನಿರಾಡಂಬರವಾಗಿರುತ್ತವೆ; ಮತ್ತೆ ಕೆಲವು ಕಡೆ ಹಲವಾರು ಬಣ್ಣಗಳಿಂದಲೂ ವಿಚಿತ್ರ ವಿನ್ಯಾಸಗಳಿಂದಲೂ ಅಲಂಕೃತವಾಗಿರುತ್ತವೆ.

ಇಲ್ಲಿನ ಬಂಟು ಜನರಿಗೆ ಸಂಗೀತದಲ್ಲಿ ಅಭಿರುಚಿಯಿರುವುದು ಸ್ವಾರಸ್ಯವಾದುದು; ಈ ಜನ ಕಲೆಗಾರರೂ ಹೌದು. ಅವರ ಸಂಗೀತ ನಿರೂಪಣೆ ಸಾಮಾನ್ಯವಾಗಿ ನಾಟಕ ಸಂವಿಧಾನದಲ್ಲಿರುತ್ತದೆ. ಸಂಭಾಷಣೆಗೆ ಮಹತ್ವವಿದೆ. ಆಗಾಗ ಅಭಿನಯವನ್ನು ಅಳವಡಿಸಿಕೊಳ್ಳುತ್ತಾರೆ.

ಕಾಂಗೋ ರಾಷ್ಟ್ರದ ಶಿಲ್ಪವೆಂದರೆ ಮರದಲ್ಲಿ ಕಡೆದು ಮಾಡಿದ ಮೂರ್ತಿಗಳದ್ದು, ಉತ್ತರ ಭಾಗದಲ್ಲಿನ ಶಿಲ್ಪ ಒರಟುಕೆಲಸ; ಆದರೆ ದಕ್ಷಿಣದ ಕಡೆ ನಾಜೂಕಾಗಿ ಕೆಲಸ ಮಾಡುವ ಕಲಾವಿದರಿದ್ದಾರೆ. ಕಸಾಯ್ ಪ್ರದೇಶವು ಉತ್ತಮವಾದ ದಾರುಶಿಲ್ಪಕ್ಕೆ ಹೆಸರಾದುದು. ಇಲ್ಲಿನ ಹೆಂಗಸರು ಮಾಡುವ 'ರಫಿಯ' ಕಸೂತಿ

ಕೆಲಸ ತುಂಬ ಸೊಗಸಾದುದು. ಹದಿನೇಳನೆಯ ಶತಮಾನದ ಆದಿಭಾಗದಲ್ಲಿ ಶಂಬರಾಜನು ಈ ಕಲೆಯನ್ನು ಕಸಾಯ್ ರಾಜ್ಯಕ್ಕೆ ತಂದನೆಂದು ಪ್ರತೀತಿ ಇದೆ.

ಪ್ರಾಚೀನ ಈಜಿಪ್ಟಿನ ಸಂಗೀತ ವಾದ್ಯಗಳಿಂದ ಕಾಂಗೋಲೀಸ್ ವಾದ್ಯಗಳು ಪ್ರಭಾವಿತರಾಗಿರುವುದನ್ನು ಕಂಡುಕೊಳ್ಳುವುದು ಸುಲಭ. ಹಲವಾರು ತಂತೀ ವಾದ್ಯಗಳನ್ನು ಈ ಜನ ಬಳಸುತ್ತಾರೆ; ಅವುಗಳಲ್ಲಿ 'ವಿಬ್ಬಿರ' ಎನ್ನುವುದು ಜನಪ್ರಿಯವಾದುದು. ಇದಲ್ಲದೆ ಡೋಲು, ತಮಟೆ, ಪುಂಗಿ, ಕೊಳಲು, ಢಕ್ಕೆ ಮೊದಲಾದ ವಾದ್ಯಗಳೂ ಬಳಕೆಯಲ್ಲಿವೆ. ಕಾಡುಗಳಲ್ಲಿ ವಾಸಮಾಡುವ ಪಿಗ್ಮಿ ಆದಿವಾಸಿಗಳು ಸಾಮಾನ್ಯವಾಗಿ ಯಾವ ಸಂಗೀತ ವಾದ್ಯವನ್ನೂ ಬಳಸುವುದಿಲ್ಲ. ಆದರೆ ಮದುವೆ, ಮರಣ ಮುಂತಾದ ವಿಶೇಷ ಸಂದರ್ಭಗಳಲ್ಲಿ ವಿವಿಧ ಲಯ ವಿನ್ಯಾಸದ ಹಾಡುಗಳನ್ನು ಹಾಡುವ ಪದ್ಧತಿ ಇವರಲ್ಲಿದೆ.

ಧರ್ಮ-ವೈದ್ಯ

ಕಾಂಗೋ ಪ್ರದೇಶದ ಧಾರ್ಮಿಕ ಕಲ್ಪನೆಗಳು ಪುರಾತನ ಪ್ರಕಾರದವು. ಅಲ್ಲಿನ ನಿತ್ಯಜೀವನದಲ್ಲಿ ಭೂತಗಳ ಪಾತ್ರ ಹೆಚ್ಚಿನದೇ. ಯಾರಿಗಾದರೂ ಖಾಯಿಲೆ ಬಂದರೆ ಅದು ಜೀವವು ದೇಹವನ್ನು ಬಿಟ್ಟು ಹೋಗಿರುವುದರ ಸಂಕೇತ ಎಂದು ಅವರ ಭಾವನೆ. ದೇಹಕ್ಕೆ ಜೀವವನ್ನು ಹಿಂದಿರುಗಿಸುವುದೇ ವೈದ್ಯನ ಕೆಲಸ; ಹೀಗೆ ಮಾಡುವಾಗ ಅವನು ಮಂತ್ರ, ಯಕ್ಷಿಣಿಗಳನ್ನು ವಿಶೇಷವಾಗಿ ಬಳಸುತ್ತಾನೆ. ದೇಹವನ್ನು ಬಿಟ್ಟು ಅಲೆದಾಡುತ್ತಿರುವ ಜೀವವನ್ನು ಮೊದಲು ಮರದ ರೆಂಬೆಯೊಂದರಲ್ಲಿ ಸೆರೆಹಿಡಿದು, ಅನಂತರ ಅಲ್ಲಿಂದ ರೋಗಿಯ ದೇಹಕ್ಕೆ ತರುವುದು

ಅವನ ಸಂವಿಧಾನ. ಇದಕ್ಕಾಗಿ ಅವನು ಕೈಗೊಳ್ಳುವ ಧಾರ್ಮಿಕ ವಿಧಿಗಳಲ್ಲಿ ಇಡೀ ಬುಡಕಟ್ಟು ಪಾಲುಗೊಳ್ಳುತ್ತದೆ.

ಮಳೆ-ಬೆಳೆ

ರಾಷ್ಟ್ರವು ಭೂಮಧ್ಯರೇಖೆಯ ವಲಯದಲ್ಲಿಯೇ ಇರುವುದರಿಂದ ಇಲ್ಲಿ ಇಡೀ ವರ್ಷವೂ ಉಷ್ಣಾಂಶ ಅಧಿಕವಾಗಿರುತ್ತದೆ. ಫ್ಯಾರನ್‌ಹೀಟ್ 80 ಡಿಗ್ರಿ (ಎಂದರೆ ಸೆಂಟಿಗ್ರೇಡ್ 27 ಡಿಗ್ರಿ) ಗಳಷ್ಟು ಇರುತ್ತದೆ. ಉತ್ತರ ಭಾಗದಲ್ಲಿ ದಕ್ಷಿಣಕ್ಕಿಂತ ಹೆಚ್ಚು ಮಳೆ ಬೀಳುತ್ತದೆ; 50–60 ಅಂಗುಲಗಳಷ್ಟು ಮಳೆ ಬಿದ್ದರೆ ಆಶ್ಚರ್ಯವಲ್ಲ. ಕೆಲವು ಕಣಿವೆಗಳಲ್ಲಿ ಮಂಜು ಬೀಳುವುದೂ ಹಿಮಮುಚ್ಚಿರುವುದೂ ಸಾಮಾನ್ಯ.

ಮಳೆ ತುಂಬ ಹೆಚ್ಚಾಗಿರುವ ಕಡೆ ದಟ್ಟವಾದ ಕಾಡು ಬೆಳೆದಿರುತ್ತದೆ. ರಾಷ್ಟ್ರದ ಐದನೇ ಒಂದು ಭಾಗದಷ್ಟು ಕಾಡು; ಎತ್ತರವಾದ ಮರಗಳು, ದಟ್ಟವಾದ ಪೊದೆ, ಸೂರ್ಯನ ಬೆಳಕು ಬೀಳದ ನೆಲ. ಹುಲ್ಲುಗಾವಲನ್ನು ಈಗೀಗ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಮಳೆಗಾಲದಲ್ಲಷ್ಟೆ ಹುಲ್ಲುಗಾವಲು; ಬೇಸಿಗೆಯಲ್ಲಿ ಬತ್ತಿಹೋಗುತ್ತದೆ.

ಇಲ್ಲಿನ ಜನರ ಮುಖ್ಯ ಕಸುಬು ಬೇಸಾಯ. ಐದರಲ್ಲಿ ಮೂರು ಪಾಲು ವ್ಯವಸಾಯವೇ. ಬೇಸಾಯದ ಪದ್ಧತಿಗಳೆಲ್ಲ ಪ್ರಾಚೀನವಾದುವು. ಕಸಾವಾ, ಮುಸಿಕಿನ ಜೋಳ, ಕಡ್ಲೆಕಾಯಿ, ಬತ್ತ, ಬಾಳೆ, ಆಲೂಗಡ್ಡೆ, ನವಣೆ ಮೊದಲಾದ ಧಾನ್ಯಗಳು–ಇವು ಮುಖ್ಯವಾದ ಬೆಳೆ. ಬೆಲ್ಜಿಯಂ ವಸಾಹತಾಗಿ ಕಾಂಗೋ ಜನರು ಎಣ್ಣೆ ತೆಗೆಯುವ ತಾಳೆಮರಗಳನ್ನು ಬೆಳೆಯುವ ಉದ್ಯಮವನ್ನು ಹೆಚ್ಚಿಸಿಕೊಂಡರು; ಯೂರೋಪಿನ ಕಂಪೆನಿಗಳು ಇವಕ್ಕೆ

ತುಂಬ ನೆರವಾದುವು. ಹುಲ್ಲುಗಾವಲು ಪ್ರದೇಶದಲ್ಲಿ ಹತ್ತಿ ಬೆಳೆ ಉದ್ಯಮ ವಿಶೇಷವಾಗಿದೆ.

ಕಿವು ಪ್ರದೇಶದಲ್ಲಿ ಕಾಫಿ, ಟೀ ಮತ್ತು ಕಾಂಗೋ ತೀರದಲ್ಲಿ ಕೋಕೋ, ಕಬ್ಬು ಇವನ್ನು ಬೆಳೆಯುತ್ತಾರೆ. ಕಾಂಗೋದಿಂದ ರಫ್ತಾಗುವ ಪದಾರ್ಥಗಳಲ್ಲಿ ಕಾಫಿ, ಸುಗಂಧ ತೈಲ, ಹತ್ತಿ ಮತ್ತು ರಬ್ಬರ್ ಇವು ಮುಖ್ಯವಾದುವು.

ಈ ರಾಷ್ಟ್ರದ ಖನಿಜ ಸಂಪತ್ತು ಅಗಾಧವಾದುದು. ತಾಮ್ರ ಕೋವಬಾಲ್ಟ್, ತಗಡು ಮತ್ತು ಔದ್ಯಮಿಕ ವಜ್ರಗಳು ಒಟ್ಟು ರಫ್ತಿನಲ್ಲಿ ಮೂರನೆಯ ಎರಡು ಭಾಗ. ಜಗತ್ತಿನಲ್ಲೆಲ್ಲ ಕಾಂಗೋ ರಾಷ್ಟ್ರದ ತಾಮ್ರದ ಅದುರು ಮುಖ್ಯವಾಗಿ ಒದಗುತ್ತದೆ. ಇದರ ಉತ್ಪಾದನೆ ಕಟಾಂಗ ಪ್ರದೇಶದ ವೈಶಿಷ್ಟ್ಯ. ಸತುವು ಮತ್ತು ಬೆಳ್ಳಿ ಇವೂ ಹೆಚ್ಚಾಗಿ ದೊರೆಯುತ್ತವೆ. ಕಟಾಂಗದಲ್ಲಿಯೇ ಕೋಬಾಲ್ಟ್ ಮತ್ತು ಯುರೇನಿಯಂ ಅಧಿಕ ಪ್ರಮಾಣದಲ್ಲಿ ಸಿದ್ಧ ವಾಗುತ್ತವೆ. ಇಷ್ಟು ಮಾತ್ರವಲ್ಲದೆ, ಕಟಾಂಗ ಪ್ರದೇಶವು ಚಿನ್ನ ಮತ್ತು ವಜ್ರಗಳಿಗೂ ಹೆಸರುವಾಸಿಯಾಗಿದೆ.

ಇಷ್ಟಾದರೂ ಕಾಂಗೋ ರಾಷ್ಟ್ರದ ಔದ್ಯಮಿಕ ಪ್ರಗತಿ ಅಷ್ಟೇನೂ ಹೇಳಿಕೊಳ್ಳುವಂಥದಲ್ಲ. ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ರಾಷ್ಟ್ರದಲ್ಲಿ ನೂರಕ್ಕೆ ತೊಂಬತ್ತು ಮಂದಿ ಹಳ್ಳಿಗಳಲ್ಲಿಯೇ ಇರು ವುದು. ನಗರಗಳಲ್ಲಿ ಮುಖ್ಯವಾದುವು ಕಿನ್ಷಾಸ (ಜನಸಂಖ್ಯೆ 1,000,000), ಲುಮುಂಬಾಷೀ (ಜನಸಂಖ್ಯೆ 200,000) ಮತ್ತು ಕಿಸಂಗನೀ (ಜನಸಂಖ್ಯೆ 130,000). ಲುಮುಂಭಾಷೀ ಕಟಾಂಗಪ್ರದೇಶದ ಮುಖ್ಯ ಪಟ್ಟಣ. ಬಹುಮಟ್ಟಿಗೆ ಅಲ್ಲಿನ ನಗರಗಳೆಂದರೆ ದೊಡ್ಡ ಹಳ್ಳಿಗಳಷ್ಟೇ. ಮನೆಗಳು ಚಚ್ಚೌಕನಾದ ಗುಡಿಸಿಲುಗಳು. ಗೋಡೆಯನ್ನು ಮಣ್ಣಿನಲ್ಲಿ ಕಟ್ಟಿ

ಚಾವಣಿಗೆ ತೆಂಗಿನ ಪಟ್ಟೆಗಳನ್ನೂ ಮಂದಲಿಗೆಗಳನ್ನೂ ಬಳಸುತ್ತಾರೆ. ಕೆಲವು ಗುಡಿಸಲುಗಳ ಗೋಡೆ ಮರದ್ದೂ ಇರುವುದುಂಟು. ಕಾಂಗೋ ಪ್ರದೇಶದಲ್ಲಿ ವ್ಯಾಪಾರವು ಬಹುಮಟ್ಟಿಗೆ ಸಂತೆಗಳಲ್ಲಿಯೇ ನಡೆಯುತ್ತದೆ. ವ್ಯಾಪಾರವನ್ನು ನಿರ್ವಹಿಸುವವರು ಹೆಂಗಸರು.

7. ಶೀತವಲಯದ ಜನರು

ಪರಿಸರಕ್ಕೆ ತಕ್ಕಂತೆ ಜನಜೀವನ ಮಾರ್ಪಾಡಾಗುವುದು. ಆವರಣಕ್ಕೂ ಜನಜೀವನಕ್ಕೂ ಇರುವ ನಿಕಟ ಸಂಬಂಧವನ್ನು ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಮರಳುಗಾಡಿನಲ್ಲಿ ವಾಸಿಸುವ ಜನರ ಆಹಾರ-ವಿಹಾರಗಳು ಒಂದು ಬಗೆಯಾಗಿರುತ್ತವೆ; ಶೀತಪ್ರದೇಶದಲ್ಲಿರುವವರ ಆಹಾರ–ವಿಹಾರಗಳು ಬೇರೆ. ಉಡುಗೆ ತೊಡುಗೆ ಮಾತ್ರವಲ್ಲ, ವೃತ್ತಿಯಲ್ಲಿಯೂ ವೈವಿಧ್ಯ ವಿರುತ್ತದೆ, ವಸತಿ ವಿಧಾನದಲ್ಲಿಯೂ ವೈವಿಧ್ಯವಿರುತ್ತದೆ. ಇದು ಚೆನ್ನಾಗಿ ಕಂಡುಬರುವುದು ಗ್ರೀನ್‌ಲೆಂಡ್, ಲಾಬ್ರಡಾರ್, ಸೈಬೀರಿಯ, ಅಲಾಸ್ಕಗಳಲ್ಲಿ ವಾಸಮಾಡುವ ಎಸ್ಕಿಮೋ ಜನರಲ್ಲಿ.

ವರ್ಷದಲ್ಲಿ ಏಳೆಂಟು ತಿಂಗಳು ಈ ಪ್ರದೇಶಗಳಲ್ಲಿ ತುಂಬ ಚಳಿ; ನೀರು ಹೆಪ್ಪುಗಟ್ಟಿ ಹಿಮವಾಗಿ ದಟ್ಟವಾಗಿ ಬಂಡೆಗಳಂತೆ ಹರಡಿ ರುತ್ತದೆ. ಇಂಥ ಕಡೆ ವಾಸಿಸುವ ಎಸ್ಕಿಮೋಗಳು ಬಾಳನ್ನು ಸುಖವಾಗಿ ನಡೆಸುವುದು ಮಾತ್ರವಲ್ಲ, ವಿಶಿಷ್ಟವಾದ ಸಂಸ್ಕೃತಿ ಯೊಂದನ್ನೇ ಬೆಳೆಸಿಕೊಂಡಿದ್ದಾರೆ. ಅವರ ಆಹಾರ, ಉಡುಗೆ, ವಸತಿ, ವೃತ್ತಿ ಎಲ್ಲವೂ ಹಿಮದ ವಾತಾವರಣಕ್ಕೆ ಹೊಂದಿಕೊಂಡು ಬಂದಿದೆ. ಪರಿಸರದೊಂದಿಗೆ ಹೋರಾಡಿ ಯಶಸ್ವಿಯಾಗಿ ಉಳಿದು ಬಂದಿರುವ ಜನ ಇವರು.

ಆದರೆ ಯಾವ ಕಾಲಕ್ಕೂ ಇವರು ಅಲ್ಪಸಂಖ್ಯಾತರೇ. ಇಂಥ ಕಷ್ಟಕರವಾದ ವಾತಾವರಣದಲ್ಲಿ ಜನಸಂಖ್ಯೆ ಬೆಳೆಯುವುದು ಕಷ್ಟವೇ. ನಿರ್ದಿಷ್ಟವಾದ ಸಂಖ್ಯೆಯಂತೂ ಯಾವ ಕಾಲದಿಂದಲೂ ಉಳಿದುಬಂದಿದೆ. ಯೂರೋಪಿನ ಜನ ಅವರ ನಡುವೆ

ಬಂದಾಗ ಅವರೊಂದಿಗೆ ಕೆಲವು ರೋಗಗಳನ್ನೂ ತಂದರು; ಇವರಿಂದಾಗಿ ಈ ಜನ ಸಾಯುವುದು ಹೆಚ್ಚಾಯಿತು. ಸತ್ತವರ ಸಂಖ್ಯೆ ಹೆಚ್ಚಾದರೂ, ಕೆಲವೇ ವರ್ಷಗಳಲ್ಲಿ ಜನಸಂಖ್ಯೆ ಮೊದಲಿನ ಪ್ರಮಾಣಕ್ಕೆ ಏರಿದುದು ಸ್ವಾರಸ್ಯವಾದ ವಿವರ.

ಪ್ರಾಚೀನ ಸಂಸ್ಕೃತಿ

ಎಸ್ಕಿಮೋ ಜನರದ್ದು ಕ್ರಿ.ಪೂ. ಮೂರುಸಾವಿರ ವರ್ಷಗಳಷ್ಟು ಪ್ರಾಚೀನವಾದ ಸಂಸ್ಕೃತಿ. ಇಷ್ಟು ಪ್ರಾಚೀನವಾದ ಅವಶೇಷಗಳು ದೊರೆತಿಲ್ಲವೆನ್ನುವುದು ದಿಟ. ಮೊದಲಿಗೆ ಏಷ್ಯ ಖಂಡದಲ್ಲಿಯೇ ಬೆಳೆದ ಸಂಸ್ಕೃತಿ ಸೈಬೀರಿಯಾ ಮತ್ತು ಅಲಾಸ್ಕಗಳ ನಡುವೆ ಬೇರಿಂಗ್ ಜಲಸಂಧಿಯ ಮೂಲಕ ಉತ್ತರ ಅಮೆರಿಕ ಖಂಡದ ಮೇಲ್ಭಾಗವನ್ನು ಮುಟ್ಟಿತೆಂದು ತಿಳಿದುಬಂದಿದೆ. ದಕ್ಷಿಣ ಅಲಾಸ್ಕ ಮತ್ತು ಅಲ್ಯೂಷನ್ ದ್ವೀಪಮಾಲೆಗಳಲ್ಲಿ ಮೊದಲು ನೆಲೆ ನಿಂತಂತೆ ಕಾಣುತ್ತದೆ. ಇಲ್ಲಿ ಬೆಳೆದುಬಂದ ಸಂಸ್ಕೃತಿಯನ್ನು ಬೆರಿಂಗ್ ಸಂಸ್ಕೃತಿಯೆಂದು ಕರೆಯುತ್ತಾರೆ. ಇದರ ಅವಶೇಷಗಳು ಕ್ರಿಸ್ತಪೂರ್ವ 500 ವರ್ಷಗಳಷ್ಟು ಹಿಂದಿನವು ದೊರೆತಿವೆ. ಆರ್ಕ್‌ಟಿಕ್ ಸಮುದ್ರಕ್ಕೆ ಹೊಂದಿಕೊಂಡು ಬಂದ ಸಂಸ್ಕೃತಿ ಇದು. ಇದರ ಅತ್ಯಂತ ಪ್ರಾಚೀನ ಪುರಾವೆಗಳು ಉಂನಾಕ್ ದ್ವೀಪದಲ್ಲಿ ದೊರೆತಿವೆ.

ದಕ್ಷಿಣ ಆಲಾಸ್ಕ ಮತ್ತು ಅಲ್ಯೂಷನ್ ದ್ವೀಪಗಳಲ್ಲಿ ಬೆಳೆದು ಬಂದ ಸಂಸ್ಕೃತಿ ಇಪಿಯುಟಾಕ್ ಸಂಸ್ಕೃತಿಯೆನಿಸಿಕೊಳ್ಳುತ್ತದೆ. ಉತ್ತರ ಅಲಾಸ್ಕದಲ್ಲಿ ಮುಂದೆ ಪುನಕ್ ಸಂಸ್ಕೃತಿ ಬೆಳೆಯಿತು. ಇದರ ಆರಂಭ ಕಾಲ ಕ್ರಿಸ್ತಪೂರ್ವ 500 ರ ಸುಮಾರಿಗೆ. ಈ ಸಂಸ್ಕೃತಿಯ ಜನರು ಸಮುದ್ರಜೀವಿಗಳಾದ ಸೀಲ್, ತಿಮಿಂಗಿಲ

ಗಳನ್ನೂ ಶೀತವಲಯಕ್ಕೆ ಬರುವ ಪಕ್ಷಿಗಳನ್ನೂ ಬೇಟೆಯಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಕಲ್ಲಿನ ಆಯುಧಗಳನ್ನೇ ಬಳಸುತ್ತಿದ್ದರು. ದೀಪಕ್ಕೆ ಹಣತೆಯನ್ನೂ, ಆಹಾರ ದಾಸ್ತಾನಿಗೆ ಮಡಕೆಗಳನ್ನೂ ಬಳಸುತ್ತಿದ್ದರು.

ಮುಂದೆ ಡಾರ್ಸ್‌ಟ್ ಮತ್ತು ಥೂಲಿ ಸಂಸ್ಕೃತಿಗಳಲ್ಲಿ ದಂತದಿಂದ ಮಾಡಿದ ಉಪಕರಣಗಳನ್ನೂ, ನಾಯಿ ಎಳೆಯುವ ಸ್ಲೆಡ್ಜ್ ಗಾಡಿಯನ್ನೂ, ಹಲವಾರು ಆಯುಧಗಳನ್ನೂ ಬಳಸುವುದು ಆರಂಭವಾಯಿತು. ಡಾರ್ಸ್‌ಟ್ ಸಂಸ್ಕೃತಿ ಮರೆಯಾದ ನಂತರ ಥೂಲಿ ಸಂಸ್ಕೃತಿ ಉಳಿಯಿತು.

ಎಸ್ಕಿಮೋ ಜನರಲ್ಲಿ ಪ್ರಮುಖವಾಗಿ ಎರಡು ಪಂಗಡಗಳು. ಏಷ್ಯಮೂಲದ ಪಂಗಡಕ್ಕೆ ಯುಇಟ್‌ಗಳೆಂದೂ, ಉತ್ತರ ಅಮೆರಿಕದ ಪಂಗಡಕ್ಕೆ ಇನ್ನುಯಿಟ್‌ಗಳೆಂದೂ ಹೆಸರು. ಅಲಾಸ್ಕ ಪಕ್ಕದಲ್ಲಿರುವ ಅಲ್ಯೂಷನ್ ದ್ವೀಪಗಳಲ್ಲಿ ವಾಸಮಾಡುವ ಎಸ್ಕಿಮೋಗಳು ಅಲ್ಯೂಷನ್ನರೆಂದೇ ಎನಿಸಿಕೊಳ್ಳುತ್ತಾರೆ. ಅವರು ಮೊದಲೆರಡು ಪಂಗಡಗಳಿಂದ ಭಿನ್ನರಾದವರು. ದೈಹಿಕ ವಿವರಗಳಲ್ಲಿ ಅಷ್ಟಾಗಿ ಭೇದವೆಲ್ಲದಿದ್ದರೂ, ಭಾಷೆ, ಆಹಾರ ಆಚಾರ ಮೊದಲಾದ ವಿವರಗಳು ವಿಭಿನ್ನವಾಗಿದ್ದು ಒಂಬತ್ತು ಜನಾಂಗಗಳೆಂದು ನಿರ್ದೇಶಿಸುವ ವಾಡಿಕೆಯಿದೆ. ವಾಸಮಾಡುವ ಸ್ಥಳಗಳಿಂದ ನಿರ್ದೇಶನ ಮಾಡಿ ಅಲಾಸ್ಕ, ಸೈಬೀರಿಯ, ಗ್ರೀನ್‌ಲೆಂಡ್, ಲ್ಯಾಬ್ರಡಾರ್. ಮೆಲ್ ವಿಲ್, ವಿಕ್ಟೋರಿಯ ಕಾರೊನೇಷನ್, ಮೆಕಿಂಸಿ-ಹರ್ಷಲ್, ಬೂತಿಯ ಫಿಲಿಕ್ಸ್, ಮತ್ತು ಸೌತ್‌ಹ್ಯಾಂಪ್ಟನ್ ಎಸ್ಕಿಮೋಗಳೆಂದು ಕರೆಯುತ್ತಾರೆ. ಒಂದೊಂದು ಜನಾಂಗದಲ್ಲಿಯೂ ಕೆಲವಾರು ಪಂಗಡಗಳಿವೆ.

ಎಸ್ಕಿಮೋ ಎನ್ನುವುದು ಸಾಮಾನ್ಯವಾದ ಹೆಸರು. ಹಸಿ

ಮಾಂಸವನ್ನು ತಿನ್ನುವವರೆಂದು ಈ ಹೆಸರಿನ ಅರ್ಥ. ಅವರನ್ನು ಹೀಗೆ ಕೆನಡಾದ ಆಲ್‌ಗೋಂಕ್ವಿನ್ ಜನರು ಕರೆಯುತ್ತಿದ್ದರು; ಹದಿನೇಳನೆಯ ಶತಮಾನದಲ್ಲಿ ಈ ಹೆಸರು ಬಳಕೆಗೆ ಬಂದಿತು.

ಜನಾಂಗಗಳ ದೈಹಿಕ ವಿವರಗಳಲ್ಲಿ ಕೊಂಚಮಟ್ಟಿಗೆ ವೈವಿಧ್ಯ ವಿದೆ. ಸಾಮಾನ್ಯವಾಗಿ ಈ ಜನರು ಸುಮಾರು 5 ಅಡಿ ನಾಲ್ಕೈದು ಅಂಗುಲ ಎತ್ತರ ಇರುತ್ತಾರೆ. ಮಂಗೋಲಾಯ್ಡ್ ವಿಭಾಗಕ್ಕೆ ಸೇರಿದ ಲಕ್ಷಣಗಳು ಇವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಮುಖ ಚಪ್ಪಟೆಯಾಗಿ ಅಗಲವಾಗಿದ್ದು ಮೈಚರ್ಮದ ಬಣ್ಣ ಹಳದಿಯ ಮೇಲಿರುತ್ತದೆ. ಮೂಗು ಸಣ್ಣದು. ಆದರೆ ಮೇಲೆ ನಿಂತಂಥದು, ಚಪ್ಪಟೆಯಲ್ಲ. ತುಟಿ ದಪ್ಪನಾಗಿರುತ್ತದೆ. ಕೂದಲು ನೆಟ್ಟಗೆ ಇಳಿ ಬೀಳುತ್ತದೆ.

ಸಾಮಾಜಿಕ ಪದ್ಧತಿಗಳು

ಸಾಮಾನ್ಯವಾಗಿ ಎಸ್ಕಿಮೋ ಗಂಡಸಿಗೆ ಒಬ್ಬಳೇ ಹೆಂಡತಿ; ಆದರೆ ಐಶ್ವರ್ಯವಂತನಾಗಿ ಸಾಮಾಜಿಕ ಪ್ರತಿಷ್ಠೆ ಪಡೆದ ವ್ಯಕ್ತಿಯಾದರೆ ಹಲವಾರು ಹೆಂಡತಿಯರಿರುತ್ತಾರೆ. ಸೈಬೀರಿಯದ ಚುಕ್‌ಚಿ ಎಸ್ಕಿಮೋಗಳಲ್ಲಿ 'ವಿನಿಮಯ ವಿವಾಹ' ಪದ್ಧತಿ ಇದೆ. ಹತ್ತಾರು ಜನ ಗಂಡಸರು ಒಟ್ಟಿಗೆ ಮದುವೆಯಾಗಿ, ತಮ್ಮ ತಮ್ಮೊಳಗೆ ಯಾರ ಹೆಂಡತಿಯನ್ನಾದರೂ ಅನುಭವಿಸುವ ಕರಾರನ್ನು ಮಾಡಿಕೊಳ್ಳುತ್ತಾರೆ. ಇಂಥ ಜನರಿಗೆ 'ಹೆಂಡತಿಯರಲ್ಲಿ ಪಾಲುದಾರರು' ಎಂದು ಹೆಸರು. ಯಾವೊಬ್ಬ ಗಂಡಸೂ ತನ್ನ ಪಾಲುದಾರರೆಲ್ಲರ ಹೆಂಡತಿಯರನ್ನೂ ಕೂಡಿಕೊಳ್ಳಬಹುದು. ಸಾಮಾನ್ಯವಾಗಿ ಈ ಪಾಲುದಾರರು ಬೇರೆ ಬೇರೆ ಊರಿನವರಾಗಿರುತ್ತಾರೆ. ದಂಪತಿಗಳು ಬೇರೆ ಬೇರೆ ವಾಸಮಾಡುತ್ತಾರೆ.

ಆದರೆ ಒಬ್ಬ ಪಾಲುದಾರ ಇನ್ನೊಂದು ಊರಿಗೆ ಹೋದಾಗ ಆ ಊರಿನ ತನ್ನ ಗೆಳೆಯನ ಆತಿಥ್ಯದಲ್ಲಿ ಅವನ ಹೆಂಡತಿಯನ್ನು ಪಡೆಯುತ್ತಾನೆ. ಸಾಮಾನ್ಯವಾಗಿ ಈ ಪಾಲುದಾರರು ಒಂದೇ ವಯಸ್ಸಿನವರು; ಮದುವೆಯಾಗದವರನ್ನು ಈ ವ್ಯವಸ್ಥೆಗೆ ಸೇರಿಸುವುದಿಲ್ಲ.

ಎಸ್ಕಿಮೋಗಳಿಗೆ ಮಕ್ಕಳೆಂದರೆ ತುಂಬ ಪ್ರೀತಿ. ಮಕ್ಕಳೊಂದಿಗೆ ಆಟವಾಡುತ್ತ ಹೆಚ್ಚು ಸಮಯವನ್ನು ಕಳೆಯುತ್ತಾರೆ. ಆದರೂ ಇವರಲ್ಲಿ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೆಲವೊಮ್ಮೆ ಮಕ್ಕಳನ್ನು ಕೊಲ್ಲುವ ವಿಚಿತ್ರವಾದ, ಭೀಕರವಾದ ಪದ್ಧತಿಯಿದೆ. ಸಂಸಾರ ನಿರ್ವಹಣೆ ಕಷ್ಟವೆನಿಸಿದಾಗ, ಆಹಾರ ಸಾಕಷ್ಟು ದೊರೆಯದಿದ್ದಾಗ ಮಕ್ಕಳನ್ನು ಕೊಲ್ಲುವುದೇ ಪರಿಹಾರವೆಂದು ಅವರ ಕಲ್ಪನೆ; ಹೀಗೆ ಮಾಡುವಾಗ ಹೆಣ್ಣು ಮಕ್ಕಳನ್ನು ಬಲಿಕೊಡುವುದೇ ವಾಡಿಕೆ. ದೊಡ್ಡವರಾದ ಮೇಲೆ ಗಂಡಸಿನ ಬಾಳಿಗೆ ಹೆಂಗಸು ಅತ್ಯಗತ್ಯ ವಾದರೂ ಎಳೆಯ ಹೆಣ್ಣುಮಕ್ಕಳನ್ನು ಸಾಕುವುದು ಕಷ್ಟವೆಂದು ಅವರ ಎಣಿಕೆ. ಅವಳಿ ಜವಳಿ ಮಕ್ಕಳಾದರೆ ಒಂದು ಮಗುವನ್ನು ಹುಟ್ಟಿದೊಡನೆ ಕೊಂದುಬಿಡುತ್ತಾರೆ. ತಾಯಿಗೆ ಇಬ್ಬರು ಮಕ್ಕಳನ್ನು ನೋಡಿಕೊಳ್ಳುವುದು ಕಷ್ಟವೆನ್ನುವುದೇ ಕಾರಣ. ಎಸ್ಕಿಮೋಗಳಲ್ಲಿ ಮಕ್ಕಳು ಸಾಯುವುದು ಹೆಚ್ಚು.

ಎಸ್ಕಿಮೋಗಳ ಜನಜೀವನದಲ್ಲಿ ಹೆಂಗಸಿನ ಪಾತ್ರ ಹಿರಿದಾದುದು. ಮನೆಗೆ ಬಂದ ಅತಿಥಿಗೆ ಗಂಡನು ತನ್ನ ಹೆಂಡತಿಯನ್ನು ಕೊಡುತ್ತಾನೆ. ಕೆಲವೊಮ್ಮೆ ತನ್ನ ಹೆಂಡತಿಯನ್ನು ತನ್ನ ಸ್ನೇಹಿತನಿಗೆ ಎರವಲು ಕೊಡುವುದೂ ಉಂಟು. ಹೀಗಾದರೂ ಇದರಿಂದ ಹೆಂಗಸಿನ ಸ್ಥಾನ ಹೀನಾಯವೇನಲ್ಲ. ಉಳಿದಂತೆ ಗಂಡನಿಗೂ ಹೆಂಡತಿಗೂ ಎಲ್ಲ ವ್ಯವಹಾರದಲ್ಲಿಯೂ ಸಮಾನಾಧಿಕಾರವಿದೆ. ಗೃಹಕೃತ್ಯದಲ್ಲಿ

ಸಾಮಾಜಿಕ ಜೀವನದಲ್ಲಿ ಗೊಂದಲ ಪರಿಸ್ಥಿತಿ ಇದ್ದಾಗ ಹೆಂಗಸೇ ಮುಂದೆ ಬಂದು ಸರಿಪಡಿಸುತ್ತಾಳೆ. ಗಂಡ ಬೇಟೆಗೆ ಹೋಗಿದ್ದಾಗ, ಮನೆಯಲ್ಲಿ ಮಕ್ಕಳನ್ನು ನೋಡಿಕೊಂಡು ಅಡುಗೆ ಮಾಡುವವಳು ಹೆಂಗಸು. ಅಲ್ಲದೆ ಮನೆಗೆ ಏನು ಸಾಮಾನು ಬೇಕು ಎಂದು ನಿರ್ಧರಿಸುವವಳು ಅವಳೇ. ಮನೆಯಲ್ಲಿ ಅವಳದ್ದೇ ಮೇಲುಗೈ.

ಇಗ್ಲೂಗಳಲ್ಲಿ

ಎಸ್ಕಿಮೋ ಜನರು ಮಂಜುಮುಚ್ಚಿದ ಶೀತಪ್ರದೇಶದಲ್ಲಿ ಆರ್ಕ್ಟಿಕ್ ವಾತಾವರಣದಂಥ ಕಠಿಣ ಪರಿಸ್ಥಿತಿಯಲ್ಲಿ ಕೊರೆಯುವ ಛಳಿ, ಮೊರೆಯುವ ಗಾಳಿಯಲ್ಲಿ ಬೆಚ್ಚಗೆ ಕಟ್ಟಿಕೊಳ್ಳುವ ಮಂಜಿನ ಮನೆಗೆ 'ಇಗ್ಲೂ' ಎಂದು ಹೆಸರು. ಹಗಲೆಲ್ಲ ಗಂಡಸು ಬೇಟೆಯಾಡಿ ಸಂಜೆಯ ಸುಮಾರಿಗೆ ಇಗ್ಲೂಗೆ ಹಿಂದಿರುಗಿದೊಡನೆ ಮನೆಯಲ್ಲಿ ಪ್ರತಿ ದಿನವೂ ಭಾರಿ ಔತಣವೇ. ಮನೆಮಂದಿಯೆಲ್ಲ ಕಲೆತು ಸುಖವಾಗಿ ಊಟಮಾಡಿ, ಮಾತುಕತೆಯಾಡುತ್ತ ಕಾಲ ಕಳೆಯುತ್ತಾರೆ. ಒಂದು ಮೂಲೆಯಲ್ಲಿ ಕಾರಿಬೂ ಪ್ರಾಣಿಯ ಚರ್ಮವನ್ನು ಹಾಸಿ ಅದರ ಮೇಲೆ ಮಕ್ಕಳು ಆಟವಾಡುತ್ತಿರುತ್ತಾರೆ. ಸೀಲ್ ಎಣ್ಣೆಯಿಂದ ಉರಿಸುವ ಹಣತೆ ಬೆಳಕನ್ನಷ್ಟೇ ಅಲ್ಲದೆ ಸಾಕಷ್ಟು ಶಾಖವನ್ನೂ ಒದಗಿಸುತ್ತದೆ. ನಾಯಿಮರಿಗಳು ಅರಚುತ್ತ ಓಡಿಯಾಡುತ್ತಿರುತ್ತವೆ.

ಎಸ್ಕಿಮೋಗಳು ಭೋಜನಪ್ರಿಯರು. ಮೀನು ಮೊದಲಾದ ಆಹಾರ ಸಿಕ್ಕಿತೆಂದರೆ ಹೊಟ್ಟೆ ಬಿರಿಯುವಂತೆ ತಿಂದುತೇಗುತ್ತಾರೆ. ತೇಗಿದರೆ ಹೊಟ್ಟೆ ತುಂಬಿತೆಂಬು ಸೂಚನೆ. ಊಟವಾದ ಮೇಲೆ ಕೊಳವೆಗಳಲ್ಲಿ ಮನೆಯುವರೆಲ್ಲ ತಂಬಾಕು ಸೇದುತ್ತಾರೆ. ಅನಂತರ ಮಲಗಿ ಗೊರಕೆ ಹೊಡೆಯುತ್ತಾರೆ. ತೇಗು ತೃಪ್ತಿಯ ಸೂಚನೆ

ಯಾಗಿದ್ದಂತೆಯೇ ಗೊರಕೆ ಸುಖನಿದ್ರೆಯ ಸೂಚನೆ. ಎರಡಕ್ಕೂ ಅವರಲ್ಲಿ ಯಾವ ವಾಗತ್ಯವೂ ಇಲ್ಲ.

ಮನೆಯಲ್ಲಿ ಹೆಂಗಸು ಸೀಲ್, ಕರಿಬೂ ಚರ್ಮವನ್ನು ಮಾಂಸ ಮಜ್ಜಗಳಿಂದ ಬಿಡಿಸಿ, ನಯವಾಗಿ ಮಾಡುತ್ತಾಳೆ; ಸೀಲ್‌ಗಳ ಮಾಂಸವನ್ನು ಹೆಚ್ಚಿನ ಪ್ರಮಾಣದಲ್ಲಿ ತಿನ್ನುತ್ತಾರೆ ಆ ಜನರು, ಬೇಟೆಗೆ ಹೋಗುವಾಗ ನಾಯಿಗಳನ್ನು ಜೊತೆಗೆ ಒಯ್ಯುತ್ತಾರೆ; ಹಿಂದಿರುಗಿದ ಮೇಲೆ ಸೀಲ್ ಮಾಂಸದ ಒಂದು ಪಾಲು ಈ ನಾಯಿಗಳಿಗೂ ದೊರೆಯುತ್ತದೆ. ಆದರೆ ಇಗ್ಲೂಗಳೊಳಗೆ ನಾಯಿಗಳಿಗೆ ಪ್ರವೇಶವಿಲ್ಲ. ಇಗ್ಲೂಗಳ ಹೊರಗೆ ಹಿಮದಲ್ಲಿ ಗುಂಡಿಯನ್ನು ತೋಡಿ ಅದರೊಳಗೆ ಮುದುರಿಕೊಳ್ಳುತ್ತವೆ. ತುಂಬ ಬಲಶಾಲಿಗಳಾದ, ಕಷ್ಟಸಹಿಷ್ಣುಗಳಾದ ಪ್ರಾಣಿಗಳು ಇವು. ಎಸ್ಕಿಮೋಗಳಂತೆಯೇ ಹಿಮಮುಚ್ಚಿದ ವಾತಾವರಣದ ಕಷ್ಟ ನಿಷ್ಠುರಗಳನ್ನು ಎದೆಗಾರಿಕೆಯಿಂದ ಸಹಿಸಿಕೊಳ್ಳುವಂಥವು. ತುಂಬ ಉಪಯುಕ್ತವಾದ ಪ್ರಾಣಿಯಾದರೂ ಎಸ್ಕಿಮೋ ನಾಯಿಯನ್ನು ಮುದ್ದುಮಾಡುವುದಿಲ್ಲ; ಸಾಕಿಕೊಳ್ಳುತ್ತಾನಷ್ಟೆ.

ಆತಿಥ್ಯ

ಎಸ್ಕಿಮೋ ಜನ ಆತಿಥ್ಯಕ್ಕೆ ಹೆಸರಾದವರು. ಅವರಿಗೆ ತಮ್ಮದು, ಬೇರೆಯವರದು ಎನ್ನುವ ಗಣನೆಯಿಲ್ಲದಷ್ಟು ಉದಾರ ಪ್ರವೃತ್ತಿ. ಮನೆಯಲ್ಲಿ ಆಹಾರ ಇದ್ದಷ್ಟು ದಿನವೂ ಮನೆಗೆ ಅತಿಥಿ ಹೋಗಬೇಕಾದ ಅಗತ್ಯವಿಲ್ಲ. ಮನೆಯಲ್ಲಿ ಏನನ್ನು ಬೇಕಾದರೂ ಬಳಸಿಕೊಳ್ಳುವ ಸ್ವಾತಂತ್ರ್ಯ ಅವನಿಗುಂಟು. ಹಾಗೆಯೇ ಅತಿಥಿಯು ತಂದ ಸಾಮಾನನ್ನು ಮನೆಯವರು ಯಾವ ಸಂಕೋಚವೂ ಇಲ್ಲದೆ ಬಳಸಿಕೊಳ್ಳುತ್ತಾರೆ. ತನ್ನ ಸಾಮಾನುಗಳೆಂದು ತನ್ನೊಂದಿಗೆ

ತಂದ ಅತಿಥಿ ಅವನ್ನು ತಾನೇ ಬಳಸಿಕೊಳ್ಳಬೇಕೆನ್ನುವ ಅಭಿಪ್ರಾಯದಿಂದ ಇಗ್ಲೂಗೆ ಬರಬಾರದು. ನಾಗರಿಕ ಪ್ರಪಂಚದಲ್ಲಿ ಅತಿಥಿಯು ಸಾಮಾನನ್ನು ಮನೆಯುವರು ಬಳಸಿಕೊಂಡರೆ ಸುಲಿಗೆಯೆಂದೋ, ಕಳ್ಳತನವೆಂದೋ ತಿಳಿದುಕೊಳ್ಳುವೆವಷ್ಟೆ. ಎಸ್ಕಿಮೋಗಳಿಗೆ ಈ ಮನೋಧರ್ಮವಿಲ್ಲ. ಯಾವ ಪದಾರ್ಥದ ಮೇಲೂ ಅವರಿಗೆ ಸ್ವಾಮ್ಯವೆಂಬ ಕಲ್ಪನೆಯಿರದು. ನಿಜವಾದ ಕಮ್ಯೂನಿಸಂ ಅವರಲ್ಲಿ ಪ್ರಚಲಿತವಾಗಿದೆ. ಇರುವ ಎಲ್ಲ ಪದಾರ್ಥಗಳೂ ಎಲ್ಲರ ಬಳಕೆಗೂ ಬರಬೇಕೆಂದು ಅವರ ಸಾಮಾಜಿಕ ಪ್ರಜ್ಞೆ.

ಬೇಟೆಗೆ ಹೋದವರಿಗೆಲ್ಲ ಮೀನಾಗಲೀ, ಸೀಲ್ ಆಗಲೀ, ಕಾರಿಬೂ ಎನ್ನುವ ಹಿಮಸಾರಂಗ ಆಗಲೀ ಸಿಗುವುದೆನ್ನುವ ನಿಯಮವಿಲ್ಲ. ಆದರೆ ಬೇಟೆ ಸಿಗಲಿಲ್ಲವೆಂದು ಅವನಿಗೆ ಚಿಂತೆಯಿಲ್ಲ; ಅವನೇನು ಉಪವಾಸವಿರುವುದಿಲ್ಲ, ಏಕೆಂದರೆ ಬೇಟೆ ಸಿಗದವನೂ ಬೇಟೆ ಸಿಕ್ಕವನೂ ಇಬ್ಬರೂ ಸಿಕ್ಕಿದ್ದನ್ನು ಹಂಚಿಕೊಳ್ಳಬೇಕು. ಬೇಟೆಯಾಡಲು ತ್ರಾಣವಿಲ್ಲದವನು, ರೋಗಿ, ಬೇಟೆಯಾಡಿ ಏನನ್ನೂ ಪಡೆಯುದವನು—ಇವರಿಗೂ ಇವರ ಸಂಸಾರಕ್ಕೂ ಇಗ್ಲೂ ಪಂಗಡವೇ ಆಹಾರವನ್ನೊದಗಿಸುತ್ತದೆ. ಅವರನ್ನು ಕಾಪಾಡುವ ಹೊಣೆ ಇಡೀ ಗುಂಪಿನದು.

ವರ್ಷದಲ್ಲಿ ಅವರ ದಿನಚರಿ ಚಳಿಗಾಲ, ಬೇಸಿಗೆಗಳಲ್ಲಿ ಬದಲಾಗುತ್ತದೆ. ಬೇಸಿಗೆಯನ್ನು ಅವರು ಬೇಟೆಯಲ್ಲಿ ಕಳೆಯುತ್ತಾರೆ. ಕಾರಿಬೂವನ್ನು ಅರಿಸಿಕೊಂಡು ದೂರ ದೂರ ಹೋಗುವುದು ವಾಡಿಕೆ. ಹಲವಾರು ಸಂಸಾರಗಳಿಂದ ಗಂಡಸರು ಒಟ್ಟಾರೆ ಸೇರಿ ಬೇಟೆಗೆ ಹೊರಡುತ್ತಾರೆ. ಈ ಕಾರಿಬೂ ಪ್ರಾಣಿಯ ಚರ್ಮ ಅವರ ಉಡುಪಿಗೆ, ಇಗ್ಲೂದೊಳಗೆ ಚಾಪೆಗೆ ಉಪಯೋಗವಾಗು

ತ್ತದೆ. ಚಳಿಗಾಲ ಬಂದಿತೆಂದರೆ ಚದುರಿದ್ದ ಸಂಸಾರಗಳೆಲ್ಲ ಒಟ್ಟಿಗೆ ಕಲೆಯುತ್ತದೆ. ಬೇಟೆಗೆ ಹೋದವರು ಹಿಂದಿರುಗುತ್ತಾರೆ. ಅವರು ಬೇಟೆಗೆ ಬಳಸುವ ಆಯುಧಗಳು ಬಿಲ್ಲು, ಬಾಣ, ಚಾಕು, ಈಟಿ, ಗಾಳ ಮೊದಲಾದುವು. ಕಾರಿಬೂ ಚರ್ಮದಿಂದ ಮಾಡಿದ ಬಲೆಯನ್ನು ಅವರು ಬಳಸುವರು.

ಧರ್ಮ—ಭಾಷೆ

ಎಸ್ಕಿಮೋಗಳು ಧರ್ಮದ ಮೊದಲ ಹಂತದಲ್ಲಿದ್ದ ಮನೋವೃತ್ತಿಯನ್ನೇ ತಳೆದವರು. ಎಲ್ಲ ಸ್ಥಾವರಜಂಗಮ ವಸ್ತುಗಳಲ್ಲಿಯೂ ಚೇತನವಿದೆಯೆಂದು ಅವರ ನಂಬಿಕೆ. ಹಲವಾರು ದೇವತೆಗಳಿದ್ದ ಅವರಲ್ಲಿ ತೋರ್ನಸುಕ್ ಎಂಬ ದೇವತೆ ಮಿಗಿಲಾದವನು. ದೇವತೆಗಳು ವ್ಯವಹಾರದ ವಿವರಗಳನ್ನೆಲ್ಲ ನೋಡಿಕೊಳ್ಳುವರು. ನಿದರ್ಶನಕ್ಕೆ ಅರ್ನಕ್ಸಗ್ಸಕ್ ಎಂಬ ದೇವತೆ ಸಮುದ್ರಾಭಿಮಾನಿಯಾದವಳು; ಸಮುದ್ರದಲ್ಲಿಯೇ ಆಕೆಯ ವಾಸ, ಅಲೆಗಳೇ ಆಕೆ ಇರುವುದಕ್ಕೆ ಸೂಚನೆ. ಸಮುದ್ರದ ಪ್ರಾಣಿಗಳೆಲ್ಲ ಆಕೆಯ ಅಂಗಾಂಗಗಳೇ. ಎಸ್ಕಿಮೋ ಜನರ ಕಟ್ಟುಕಟ್ಟಳೆಗಳನ್ನು ಸರಿಯಾಗಿ ಪಾಲಿಸುವವರಿಗೆ ಬೇಟೆಯಲ್ಲಿ ಯಥೇಚ್ಛವಾಗಿ ಪ್ರಾಣಿಗಳನ್ನು ಒದಗಿಸುವುದು ಆಕೆಯ ಕೆಲಸ. ಎಲ್ಲ ವಸ್ತುವಿಗೂ ಹೀಗೆ ಒಂದು ಅಭಿಮಾನಿದೇವತೆ ಇರುತ್ತದೆ. ಈ ದೇವತೆಗಳನ್ನು ತೃಪ್ತಿಪಡಿಸಲು ಪುರೋಹಿತರ ನೆರವು ಅವಶ್ಯಕ.

ದೇಹದಲ್ಲಿ ಎರಡು ಆತ್ಮಗಳು. ಸತ್ತೊಡನೆ ಒಂದು ಆತ್ಮ ಪುಣ್ಯ, ಪಾಪಗಳನ್ನು ಅನುಸರಿಸಿ ಮೇಲು ಲೋಕಕ್ಕೆ ಹೋಗಿ ಅಲ್ಲಿರುವ ಇತರ ಆತ್ಮಗಳೊಂದಿಗೆ ಸೇರಿಕೊಳ್ಳುತ್ತದೆ. ಇನ್ನೊಂದು ಆತ್ಮ ದೇಹದಲ್ಲಿಯೇ ಉಳಿದಿರುತ್ತದೆ. ದೇಹದಿಂದ ದೇಹಕ್ಕೆ ಸಂಕ್ರಮಣವಾಗುವ ಆತ್ಮ ಇದು.

ಈಚೆಗೆ ಎಸ್ಕಿಮೋಗಳಲ್ಲಿ ಕ್ರೈಸ್ತ ಧರ್ಮದ ಪ್ರಚಾರವಾಗುತ್ತಿದೆ. ಗ್ರೀನ್‌ಲೆಂಡ್ ಪ್ರದೇಶದಲ್ಲಿ ಡೆನ್ಮಾರ್ಕಿನ ಪಾದ್ರಿಗಳು ಬಿರುಸಾಗಿ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಅಲಾಸ್ಕದಲ್ಲಿ ರಷ್ಯದೇಶದ ಕ್ರೈಸ್ತ ಪ್ರಚಾರಕರಿದ್ದಾರೆ. ಈಗ ಬಹುಮಟ್ಟಿಗೆ ಈ ಜನ ಕ್ರೈಸ್ತರಾಗಿದ್ದಾರೆನ್ನಬಹುದು. ಆದರೂ ಹಳೆಯ ನಂಬಿಕೆಗಳು ಬೇರೂರಿ ನಿಂತಿವೆ. ಅವರ 'ಅಂಗ್‌ಕಾಕ್' ಎನ್ನುವ ಪುರೋಹಿತರ ಪಾತ್ರ ವೇನು ಕಡಿಮೆಯಾಗಿಲ್ಲ; ತಮ್ಮ 'ತೋರ್ನ್ಗರ್ತ್' ದೇವತೆಗಳನ್ನು ಮೆಚ್ಚಿಸುವ ಕೆಲಸ ನಡೆಯುತ್ತಲೇ ಇದೆ.

ಎಸ್ಕಿಮೋ ಜನರು ಅವರದೇ ಆದ ಭಾಷೆಯನ್ನಾಡುವರು. ಹಲವಾರು ಪಂಗಡಗಳಲ್ಲಿ ಪ್ರಭೇದಗಳುಳ್ಳ ಈ ಭಾಷೆ ಪ್ರಮುಖವಾಗಿ ಪೂರ್ವ—ಪಶ್ಚಿಮ ಭಾಷೆಗಳೆಂದು ಇಬ್ಬಗೆ. ಗ್ರೀನ್ ಲೆಂಡ್‌ನಲ್ಲಿ 25 ಸಾವಿರ ಜನ, ಅಲಾಸ್ಕದಲ್ಲಿ 16 ಸಾವಿರ ಜನ, ಕೆನಡದಲ್ಲಿ 10 ಸಾವಿರ ಜನ, ಅಲ್ಯೂಷನ್ ದ್ವೀಪಗಳಲ್ಲಿ 6 ಸಾವಿರ ಜನ, ಸೈಬೀರಿಯದಲ್ಲಿ 1 ಸಾವಿರ ಜನ ಎಸ್ಕಿಮೋ ಭಾಷೆಯನ್ನಾಡುತ್ತಾರೆ. ಮೊದಲಿಗೆ ಈ ಭಾಷೆಗೆ ಚಿತ್ರಲಿಪಿಯನ್ನೇ ಬಳಸುತ್ತಿದ್ದರು. ಈಚೆಗೆ ರಷ್ಯನ್ ಲಿಪಿಯನ್ನು ಬಳಸುವುದು ರೂಢಿಗೆ ಬರುತ್ತಿದೆ.

ಈ ಜನರ ಕಲೆ ವಿಶೇಷವಾಗಿ ಅವರ ಆಯುಧಗಳ ಮೇಲೆ ಕಾಣಸಿಗುತ್ತದೆ. ಈಟಿ, ಗಾಳ, ಚಾಕು, ಮೀನಿನ ಗಾಳ ಇವುಗಳ ಮೇಲೆ ಪ್ರಾಣಿಗಳನ್ನು ಕೆತ್ತಿರುತ್ತಾರೆ. ದಂತದ ಕೆತ್ತನೆ ಕೆಲಸ ಅವರಿಗೆ ವಿಶಿಷ್ಟವಾದುದು; ಮೂಳೆಗಳಿಂದಲೇ ರೇಖಾ ಚಿತ್ರಗಳನ್ನು ಬಿಡಿಸುತ್ತಾರೆ; ಕಾರಿಬೂ ಪ್ರಾಣಿಯ ಚರ್ಮದಲ್ಲಿಯೇ ವಿವಿಧ ವಿನ್ಯಾಸಗಳನ್ನು ಕತ್ತರಿಸಿ ಮುಖವಾಡಗಳನ್ನು ಸಿದ್ಧಪಡಿಸುತ್ತಾರೆ. ಆದಿವಾಸಿಗಳ ಕಲೆಯಲ್ಲಿ ಉನ್ನತ ಮಟ್ಟದ ಕಲೆ ಇವರದ್ದು.

ಎಸ್ಕಿಮೋಗಳು ಉತ್ತರ ಧ್ರುವೀಯ ಪ್ರದೇಶಗಳಲ್ಲಿ ಇರುವ

ಪ್ರಾಚೀನ ಜನ. ಇವರು ವಾಸಿಸುವ ಪ್ರದೇಶ ತುಂಬ ವಿಸ್ತಾರವಾದುದೆಂದೇ ಹೇಳಬೇಕು; ಅದು ಸುಮಾರು ಆರು ಸಾವಿರ ಮೈಲಿಗಳಷ್ಟಾಗುತ್ತದೆ. ಮೊದಲು ಇನ್ನೂ ವಿಸ್ತಾರ ವಾದ ಪ್ರದೇಶದಲ್ಲಿ ವಾಸವಾಗಿದ್ದರೆನ್ನಿ. ಹದಿನೆಂಟನೆಯ ಶತಮಾನದ ಸುಮಾರಿಗೆ ಇವರ ಜನಸಂಖ್ಯೆ ಕಡಮೆಯಾಗ ತೊಡಗಿತು. ಸೈಬೀರಿಯಾ, ಅಲಾಸ್ಕಾ, ಕೆನಡ, ಗ್ರೀನ್‌ಲೆಂಡ್ ಗಳಲ್ಲಿರುವ ಎಲ್ಲ ಎಸ್ಕಿಮೋಗಳನ್ನೂ ಎಣಿಸಿದರೂ ಅವರ ಸಂಖ್ಯೆ 73,000ಕ್ಕೆ ಮೀರುವುದಿಲ್ಲ.

ಎಸ್ಕಿಮೋಗಳು ಎಲ್ಲಿಯೇ ಇರಲಿ, ಅವರ ಆಕಾರ, ಶರೀರದ ವಿವರಗಳು ಒಂದೇ ಬಗೆಯವು — ಕಟ್ಟುಮಸ್ತಾದ ಮೈ, ಉದ್ದುದ್ದ ತಲೆ, ಸಣ್ಣ ಮುಖ, ಮಂಗೋಲಾಯ್ಡ್ ಪದರವುಳ್ಳ ಬಾಗಿದ ಸಣ್ಣ ಕಣ್ಣುಗಳು. ಬೇರೆ ಬೇರೆ ಕಡೆಯಿರುವ ಎಸ್ಕಿಮೋ ಗಳು ಬೇರೆ ಬೇರೆ ಉಪಭಾಷೆಗಳನ್ನಾಡುವವರಾದರೂ ಇವೆಲ್ಲ ಒಬ್ಬರೊಬ್ಬರಿಗೆ ಅರ್ಥವಾಗುತ್ತವೆ. ಇದಕ್ಕೆ ಅಪವಾದವೆಂದರೆ ಅಲಾಸ್ಕಾದಲ್ಲಿ ಮತ್ತು ಸೈಬೀರಿಯದಲ್ಲಿ ಇರುವ ಕೆಲವು ಎಸ್ಕಿಮೋ ಪಂಗಡಗಳು ಆಡುವ ಭಾಷೆ. ಎಲ್ಲ ಕಡೆಯ ಎಸ್ಕಿಮೋಗಳ ಆರ್ಥಿಕ ವ್ಯವಸ್ಥೆಯು ಬೇಟೆಯನ್ನೇ ಅವಲಂಬಿಸಿದುದು.

'ಎಸ್ಕಿಮೋ' ಎನ್ನುವುದು ಅವರೇ ಇಟ್ಟುಕೊಂಡ ಹೆಸರಲ್ಲ. ಅವರು ತಮ್ಮನ್ನು ತಾವು ಕರೆದುಕೊಳ್ಳುವುದು ಇನ್ಯೂಟ್ ಎಂದು. ಅವರ ಭಾಷೆಯಲ್ಲಿ ಇದಕ್ಕೆ 'ಮನುಷ್ಯರು' ಎಂದಷ್ಟೇ ಅರ್ಥ. ಇವರಲ್ಲಿ ಸ್ವಾಭಿಮಾನ ಹೆಚ್ಚು. ತಾವೇ ಸುಸಂಸ್ಕೃತರಾದ, ನಿಜವಾದ ಮನುಷ್ಯರೆಂದೂ ಇತರರು ತಮಗಿಂತ ಕೀಳು ಎಂದೂ ಅವರು ಬಗೆಯುತ್ತಾರೆ. ಸೈಬೀರಿಯದ ಎಸ್ಕಿಮೋಗಳಂತೂ ತಮ್ಮನ್ನು 'ಯೂ ಪಿಕ್' (ಎಂದರೆ ನಾಗರಿಕರು) ಎಂದು ಕರೆದು

ಕೊಳ್ಳುತ್ತಾರೆ. ಬಿಳಿ ಮನುಷ್ಯರು ಅವರನ್ನು ಎಸ್ಕಿಮೋಗಳೆಂದು 1611ರಲ್ಲಿ ಕರೆದರು. ಉತ್ತರ ಅಮೆರಿಕದ ಇಂಡಿಯನ್ ಜನರು ಅವರನ್ನು 'ಎಸ್ಕಿಮಾಂಟ್ಸಿಕ್ (ಎಂದರೆ ಹಸೀ ಮಾಂಸವನ್ನು ತಿನ್ನುವವರು) ಎಂದು ಕರೆಯುತ್ತಿದ್ದುದನ್ನು ಕೇಳಿದ ಜೆಸ್ಯೂಟ್ ಪಾದ್ರಿಯೊಬ್ಬ ಎಸ್ಕಿಮೋ ಎನ್ನುವ ಹೆಸರನ್ನು ಸಿದ್ಧಪಡಿಸಿದನೆಂದು ಹೇಳುತ್ತಾರೆ.

ಹೊಂದಾಣಿಕೆ

ಎಸ್ಕಿಮೋಗಳ ಜೀವನಕ್ರಮದಲ್ಲಿ ಮುಖ್ಯವಾದ ವಿಷರವೆಂದರೆ ಉತ್ತರ ಧ್ರುವದ ಪ್ರದೇಶಕ್ಕೆ ಹೊಂದಿಕೊಳ್ಳಬೇಕಾದ ಅಗತ್ಯ. ಅಲ್ಲಿ ಬೇಸಿಗೆಗೂ ಚಳಿಗಾಲಕ್ಕೂ ಇರುವ ವ್ಯತ್ಯಾಸ ಅಗಾಧ ವಾದುದು. ಚಳಿಗಾಲದಲ್ಲಿ ವಾರಗಳ ವರೆಗೆ ಸೂರ್ಯ ಕಾಣಿಸಿ ಕೊಳ್ಳುವುದೇ ಇಲ್ಲ; ಬೇಸಿಗೆಯಲ್ಲಿ ಸೂರ್ಯ ಮುಳುಗುವುದೇ ಇಲ್ಲ! ಹಗಲಿನ ಮಧ್ಯಮಾನ ಉಷ್ಣಾಂಶವು ಹಿಮಸ್ತರಕ್ಕೆ ಮೇಲಿರುವುದೆಂದರೆ ಬೇಸಿಗೆಯಲ್ಲಿಯೇ. ಆದರೆ ಬೇಸಿಗೆಯಲ್ಲಿ ಕಡಿಯುವ ಕೀಟಗಳ ಹಾವಳಿ ಹೆಚ್ಚಾಗಿ ಬಿಡುತ್ತದೆ. ಹಿಮ ಕರಗಿ ನೀರು ಹುಲ್ಲುಗಾವಲಿನ ಮೇಲೆ ನಿಂತುಬಿಡುತ್ತದೆ. ಅಲ್ಲಿಂದಿಲ್ಲಿಗೆ ಓಡಾಡಲು ತುಂಬ ತೊಂದರೆ ಇದರಿಂದ.

ಇಂಥ ಸನ್ನಿವೇಶದಲ್ಲಿ ಮರಗಳು ಬೆಳೆಯುವುದಂತೂ ಸಾಧ್ಯವೇ ಇಲ್ಲ. ಅಲ್ಲಲ್ಲಿ ಸಣ್ಣ ಪುಟ್ಟ ಕುರುಚುಲು ಗಿಡಗಳು, ಪೊದೆಗಳು ಬೆಳೆಯುತ್ತವೆ ಅಷ್ಟೆ. ಎಸ್ಕಿಮೋಗಳಿಗೆ ಮರಮುಟ್ಟುಬೇಕಾದರೆ ಉತ್ತರ ಅಮೆರಿಕ ಮತ್ತು ಏಷ್ಯಾಗಳಿಂದ ಹರಿದುಬಂದು ಉತ್ತರ ಧ್ರುವೀಯ ಸಾಗರದಲ್ಲಿ ಸೇರುವ ನದಿಗಳ ನೆರವನ್ನು ಪಡೆಯು ತ್ತಾರೆ.

ಇಷ್ಟೆಲ್ಲ ಕಷ್ಟಕರವಾದ ಸಂದರ್ಭ ಇದ್ದರೂ ಎಸ್ಕಿಮೋಗಳ ಸಂಸ್ಕೃತಿಯು ಭೌತಿಕ ನೆಲೆ ಅಚ್ಚುಕಟ್ಟಾದದ್ದೇ ಎನ್ನಬೇಕು. ಬೇರೆ ಆದಿವಾಸಿಗಳಿಗಿಂತ ಸುಮಾರಾಗಿ ಹೆಚ್ಚು ಜಟಿಲವಾದುದೇ, ಹೆಚ್ಚು ವಿಕಸಿತವಾದುದೇ. ವಾತಾವರಣದ ಎಲ್ಲ ಅನುಕೂಲಗಳನ್ನೂ ಶತಾಂಶವೂ ಬಳಸಿಕೊಂಡಿರುವ ಜನ ಎಂದರೆ ಎಸ್ಕಿಮೋಗಳು. ಅವರ ಜೀವನ ಕ್ರಮದಲ್ಲಿ ಹೀಗೆ ಹೊಂದಾಣಿಕೆ ಮುಖ್ಯವಾಗುತ್ತದೆ. ಅವರ ಮಂಜಿನ ಮನೆ (ಇಗ್ಲೂ) ಒಂದು ನಿದರ್ಶನ. ಅಲ್ಲಿ ಸಿಗ ಬಹುದಾದ ಸಾಮಗ್ರಿಗಳಿಂದ ಸಾಧ್ಯವಾದಷ್ಟೂ ಸುಭದ್ರವಾಗಿ, ಸುಲಭವಾಗಿ ಕಟ್ಟುವ ಮನೆ ಅದು. ನಾಯಿ ಎಳೆಯುವ ಸ್ಲೆಡ್ಜ್ ಬಳಸುವ ಎಸ್ಕಿಮೋಗಳಿದ್ದಾರೆ; ಅಲ್ಲಿ ಬಳಸಬಹುದಾದ ಬಂಡಿ ಅಂಥದೇ. ಅವರ ಬಟ್ಟೆಗಳಲ್ಲಿ ಮಡಿಕೆಗಳನ್ನು ಹೊಲಿಯುವ ಕಡೆ ದಾರಗಳು ನೀರಿನಲ್ಲಿ ಒದ್ದೆಯಾಗದಂಥವು. ಸೂರ್ಯನ ಪ್ರಖರವಾದ ಕಿರಣಗಳು ಮಂಜಿನ ಮೇಲೆ ಬಿದ್ದು ಪ್ರತಿಫಲಿಸುವಾಗ ಕಣ್ಣು ಕೋರೈಸುತ್ತದೆ. ಕಣ್ಣು ಕೆಡದಿರಲೆಂದು ಅವರು 'ಸ್ಲಿಟ್‌ಗಾಗ್ಲ್ಸ್' ಕನ್ನಡಕವನ್ನು ಹಾಕಿಕೊಳ್ಳುತ್ತಾರೆ. ಇದನ್ನು ಅವರಿಗೆ ಸಿಗುವ ದಂತದಲ್ಲಿಯೇ ಮಾಡುತ್ತಾರೆ. ಬೆಂಕಿಗಾಗಲೀ, ಬೆಳಕಿಗಾಗಲೀ ಅವರಿಗೆ ಮರ ದೊರೆಯುವುದು ಕಷ್ಟ. ಆದುದರಿಂದ ಸೀಲ್ ಎನ್ನುವ ಜಲಚರ ಪ್ರಾಣಿಯ ಎಣ್ಣೆಯನ್ನು ಉರಿಸಿ ಕಲ್ಲು ದೀಪಗಳನ್ನು ಬಳಸುತ್ತಾರೆ. ಇದು ಹೊಗೆ ಹಿಡಿಯುವುದಿಲ್ಲ. ಇವೆಲ್ಲ ಹೊಂದಾಣಿಕೆಯ ವಿವರಗಳು.

ಎಸ್ಕಿಮೋಗಳ ಜೀವನ ಇಷ್ಟು ದುಸ್ತರವಾದಾಗ ಅಲ್ಲಿ ಕಲೆ ಬೆಳೆಯುವುದು ಸಾಧ್ಯವೇ? ಸಾಧ್ಯ ಮಾತ್ರವಲ್ಲ, ಸೊಗಸಾಗಿ ಬೆಳೆದು ಬಂದಿದೆ. ಕಲೆ ಅವರ ಜೀವನದ ಮುಖ್ಯ ಆಕರ್ಷಣೆ ಎಂದರೆ ತಪ್ಪಲ್ಲ. ಅವರಲ್ಲಿ ಪ್ರತಿಯೊಬ್ಬನೂ ಕಲಾವಿದನೇ.

ಮಂಜಿನ ಪಾದರಕ್ಷೆಗಳು, ಆಯುಧಗಳು, ಅಡುಗೆ ಉಪಕರಣಗಳು, ಮನೆಯ ಪರಿಕರಗಳು ಎಲ್ಲವನ್ನೂ ಅತ್ಯಂತ ಕಲಾತ್ಮಕವಾಗಿ ಮಾಡಿಕೊಳ್ಳುತ್ತಾರೆ. ಸಾಮಗ್ರಿಗಳು ಒರಟಾಗಿದ್ದರೂ ಬಟ್ಟೆ ಬರೆಯಲ್ಲಿ, ಆಭರಣಗಳಲ್ಲಿ ರಸಿಕತೆ ಸ್ಪಷ್ಟವಾಗುತ್ತದೆ. ಹೊಗೆ ಬತ್ತಿ ಹಿಡಿಯುವ ದಂತದ ಪೈಪ್‌ನ ಮೇಲೆ ಬೇಟೆಯ ದೃಶ್ಯಗಳನ್ನು ಕಡೆದಿರುವುದು ಹಲವಾರು ಕಡೆ ಕಾಣಬರುತ್ತದೆ.

ವಾಲ್‌ರೂಸ್ ಎನ್ನುವ ಪ್ರಾಣಿಯನ್ನು ಹಿಡಿಯಲು ಇವರೇ ಬಳಸುವ 'ಹಾರ್ಪೂನ್' ಎಂಬ ಭರ್ಜಿಗಳೂ, ಬೇಟೆಗೆ ಬಳಸುವ ಬಿಲ್ಲುಬಾಣಗಳೂ ಸೊಗಸಾಗಿರುತ್ತವೆ. ಒಟ್ಟಿನಲ್ಲಿ ಅವರ ಕೈಕೆಲಸ ಮೇಲ್ಮಟ್ಟದ್ದು, ಆರ್ಥಿಕ ವ್ಯವಸ್ಥೆಯಲ್ಲಿ ಇದಕ್ಕೆ ಸ್ಥಾನವಿಲ್ಲ ನಿಜ. ಆದರೂ ಸ್ವಭಾವದಲ್ಲಿಯೇ ಬಂದ ಕಲೆಗಾರಿಕೆ ಅವರದ್ದು.

ಕುಟುಂಬ ವ್ಯವಸ್ಥೆ

ಅವರ ಜೀವನದಲ್ಲಿ ಕುಳಿತು ಉಣ್ಣುವ ಹಾಗಿಲ್ಲ. ಆ ಪ್ರದೇಶದಲ್ಲಿ ಬೇಸಾಯ ಸಾಧ್ಯವಿರದು. ಬಹುಮಂದಿ ಒಟ್ಟಾಗಿ ಹಳ್ಳಿಯಲ್ಲಿ ಪಟ್ಟಣದಲ್ಲಿ ಇರುವ ಹಾಗೂ ಇಲ್ಲ. ಆ ಕಡೆ ಇರುವುದೆಲ್ಲ. ಸಣ್ಣ ಸಣ್ಣ ಗುಂಪುಗಳಷ್ಟೆ. ಹೀಗೆ ದೂರ ದೂರ ಇರುವ ಗುಂಪುಗಳೇ ಆರ್ಥಿಕ, ಸಾಮಾಜಿಕ ವ್ಯವಸ್ಥೆ. ಬೇಟೆಯೇ ಅವರ ಮುಖ್ಯ ಜೀವನೋಪಾಯವಾದುದರಿಂದ ಅವರು ಒಂದೆಡೆ ನಿಲ್ಲುವ ಹಾಗಿಲ್ಲ; ಅಲೆದಾಡುತ್ತಲೇ ಇರಬೇಕು. ಅವರು ತಿನ್ನುವ ಪ್ರಾಣಿಗಳು ದೂರ ದೂರ ಓಡುವಂಥವು. (ಅವರಿಗೆ ಸಸ್ಯಾಹಾರವೆನ್ನುವುದು ತಿಳಿದೇ ಇಲ್ಲ. ಅವರ ಆಹಾರದಲ್ಲಿ ಅರ್ಧ ಭಾಗ ಹಸಿಯ ಮಾಂಸ. ಇನ್ನರ್ಧ ಪ್ರಾಣಿಗಳ ಕೊಬ್ಬು ಆಂತರಗಳು ಇತ್ಯಾದಿ). ಎಸ್ಕಿಮೋ ಈ ಪ್ರಾಣಿಗಳನ್ನರಸುತ್ತ

ತನ್ನ ಆಸ್ತಿಯನ್ನೆಲ್ಲ ಒಂದು ಸ್ಲೆಡ್ಜ್‌ನಲ್ಲಿಟ್ಟು ಅದನ್ನು ಹಿಮದ ಮೇಲೆ ಸಾಗಿಸಿಕೊಂಡು ಓಡಬೇಕಾಗುತ್ತದೆ. ಚಳಿಗಾಲದಲ್ಲಿ ಮಾತ್ರ ಗುಂಪು ಒಟ್ಟಿಗೆ ಸೇರುತ್ತದೆ. ಸುಮಾರು ಹತ್ತು ಕುಟುಂಬಗಳಿದ್ದರೆ ಅದೇ ದೊಡ್ಡ ಗುಂಪು ಎನಿಸುತ್ತದೆ. ಉಳಿದ ವೇಳೆ ಈ ಕುಟುಂಬ ಗಳಿಗೆ ಸಂಪರ್ಕ ಅಷ್ಟಾಗಿ ಇರುವುದಿಲ್ಲ.

ಕುಟುಂಬಗಳ ತಾತ್ಕಾಲಿಕ, ಪ್ರಾದೇಶಿಕ ಒಕ್ಕೂಟಕ್ಕೆ ಹಿರಿಯನಾದ ವನೇ ವ್ಯವಸ್ಥೆಗೆಲ್ಲ ಹೊಣೆ. ಅವನನ್ನು ಎಸ್ಕಿಮೋ ಭಾಷೆಯಲ್ಲಿ ಬುದ್ಧಿವಂತ ಎಂದಷ್ಟೇ ಕರೆಯುತ್ತಾರೆ. ಈ ಹೆಗ್ಗಡೆ ತನ್ನ ಸ್ಥಾನ ಪಡೆಯುವುದು ತನ್ನ ಸಾಹಸ ಕೃತ್ಯಗಳಿಂದ; ಇದು ಆನುವಂಶಿಕ ವಾದ ಹುದ್ದೆಯಲ್ಲ, ಯಾರೂ ಯಾರಿಗೂ ಇದನ್ನು ಕೊಡುವ ಹಾಗಿಲ್ಲ. ಗುಂಪಿನಲ್ಲಿ ಎಲ್ಲರೂ ಸಮಾನರೇ. ಈ ಹೆಗ್ಗಡೆ ಎಲ್ಲರಿ ಗಿಂತ ಸ್ವಲ್ಪ ಹಿರಿಯ ಅಷ್ಟೆ.

ಅವರಲ್ಲಿ ಕುಂಟುಂಬ ವ್ಯವಸ್ಥೆಯೂ ಸೋಜಿಗವಾದುದು. ಕುಟುಂಬದ ಹಿನ್ನೆಲೆಯಲ್ಲಿ ಮದುವೆಯಾಗಲೀ, ಒಂದು ಕಡೆ ನೆಲೆ ಯಾಗಲೀ, ಮುಖ್ಯವಾದ ವಿವರಗಳಲ್ಲ. ಅವಕ್ಕೆ ನಿರ್ದಿಷ್ಟವಾದ ನಿಯಮಗಳೂ ಇಲ್ಲವೆನ್ನಿ. ಕೆಲವು ಸಂಸಾರಗಳಲ್ಲಿ ಹಿರಿಯ ಮಕ್ಕಳು ತಮ್ಮ ತಂದೆಯೊಂದಿಗೆ ಇರಬಹುದು, ಕಿರಿಯ ಮಕ್ಕಳು ತಂತಮ್ಮ ಪತ್ನಿಯರ ಜೊತೆಯಲ್ಲಿ ಕುಟುಂಬದಲ್ಲಿ ಇರಬಹುದು. ಆದರೆ ಒಂದು ಪ್ರದೇಶದಲ್ಲಿ ನೆಲೆಸಿರುವ ಎಲ್ಲ ಎಸ್ಕಿಮೋಗಳು ರಕ್ತ ಸಂಬಂಧವನ್ನು ಹೊಂದಿದವರು ಅಥವಾ ಮದುವೆಯಿಂದ ಸಂಬಂಧ ಬೆಳೆಸಿಕೊಂಡವರು. ಪರಸ್ಪರ ಕರ್ತವ್ಯ ಬುದ್ಧಿಯಿರುತ್ತದೆ. ಖಾಯಿಲೆ, ಮುಪ್ಪು, ವೈಧವ್ಯ ಮೊದಲಾದ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ನೆರವಾಗಲೇಬೇಕೆನ್ನುವ ನಿಯಮವಿದೆ. ತೊಂದರೆಯಲ್ಲಿರುವವರ ಆಹಾರ, ವಸತಿ, ಉಡುಗೆ ತೊಡುಗೆ

ಗಳನ್ನು ಗುಂಪಿನವರೆಲ್ಲರೂ ನೋಡಿಕೊಳ್ಳಬೇಕು. ಈ ದೃಷ್ಟಿಯಿಂದಲೇ ಸಂಬಂಧವಿರುವ ಕುಟುಂಬಗಳು ಒಕ್ಕೂಟದಲ್ಲಿ ಸೇರುವುದು.

ಈ ಕೂಟದಲ್ಲಿ ಸೇರುವ ಕುಟುಂಬಗಳಲ್ಲಿ ಒಂದೇ ಆಚಾರ ವ್ಯವಹಾರ, ಒಂದೇ ಭಾಷೆ. ಪರಸ್ಪರ ವೈವಾಹಿಕ ನೆಂಟಸ್ತನ ಇವು ಇರುವುದರಿಂದ ಇದರಲ್ಲಿ ಒಂದು ಬಗೆಯ ಆತ್ಮೀಯತೆಯಿರುತ್ತದೆ. ಒಂದು ಕೂಟಕ್ಕೂ ಇನ್ನೊಂದಕ್ಕೂ ಪ್ರತ್ಯೇಕತೆಯಿರುತ್ತದೆ. ಅವರಲ್ಲಿ ಮದುವೆ ತುಂಬ ಅಗತ್ಯವೆನಿಸಿದ ಸಾಮಾಜಿಕ ವ್ಯವಸ್ಥೆ. ಬೆಳೆದು ದೊಡ್ಡವನಾದ ಹುಡುಗ ಬೇಟೆಯಾಡಲು ಸಮರ್ಥನಾದನೆಂದರೆ ಮದುವೆಯಾಗುತ್ತಾನೆ. ಹೆಂಡತಿಯನ್ನು ಸಾಕುವ ಧೈರ್ಯ ಅವನಿಗಿರಬೇಕಷ್ಟೆ. ಹುಡುಗಿಯರೂ ಮೈ ನೆರೆಯುವ ಮೊದಲೇ ಮದುವೆಯಾಗುವುದು ವಾಡಿಕೆ. ಮದುವೆಯಾಗದ ಹೆಂಗಸು ಭಿಕ್ಷುಕಿಯಂತೆ ಬಾಳನ್ನು ಕಳೆಯಬೇಕು. ಅವಳಿಗಾಗಿ ಬೇಟೆಯಾಡುವವರು ಯಾರೂ ಇರರು. ಹಾಗೆಯೇ ಮದುವೆಯಾಗದ ಗಂಡಸೂ ಅನಾಥನೇ; ಅವನಿಗೆ ಅಡುಗೆ ಮಾಡುವವರು ಯಾರು? ಅವನ ಬಟ್ಟೆ ಹೊಲಿಯುವವರು ಯಾರು?

ಮದುವೆಯೊಂದು ಆರ್ಥಿಕ ಅಗತ್ಯ. ಅದಕ್ಕಾಗಿ ಯಾವ ವೈಭವದ ವಿಧಿಗಳಾಗಲೀ, ಪೂರ್ವ ಪ್ರಣಯವಾಗಲೀ ನಡೆಯುವುದಿಲ್ಲ. ನಾವು ಬಡಗಿಯೊಬ್ಬನಿಗೆ ಕೆಲಸವನ್ನು ಒಪ್ಪಿಸುವಷ್ಟೇ ಸಡಗರದಿಂದ ಎಸ್ಕಿಮೋಗಳ ಮದುವೆ ನಡೆಯುತ್ತದೆ! ಮದುವೆಯ ಕಟ್ಟುಪಾಡು ಅಷ್ಟೇ ಸಡಿಲವಾದುದು. ಹೆಂಡತಿಯರ ವಿನಿಮಯ ಮತ್ತು ಹೆಂಡತಿಯನ್ನು ಎರವು ಕೊಡುವುದು ಎಸ್ಕಿಮೋಗಳಲ್ಲಿ ವಿಶೇಷ ಬಳಕೆಯಿರುವ ಪದ್ಧತಿಗಳು. ತನ್ನ ಹೆಂಡತಿಯನ್ನು ಸ್ನೇಹಿತನೊಬ್ಬನಿಗೆ ಕೆಲವು ದಿನಗಳವರೆಗೆ ಎರವು

ಕೊಡುವ ಹಕ್ಕು ಗಂಡನಿಗಿರುತ್ತದೆ. ಆದರೆ ತಾನೇ ಹೀಗೆ ಹೋಗುವ ಸ್ವಾತಂತ್ರ್ಯ ಆಕೆಗೆ ಇರುವುದಿಲ್ಲ.

ಇಬ್ಬರು ಬೇಟೆಗಾರರು ಆರ್ಥಿಕ ಸಹಕಾರದಲ್ಲಿ ಭಾಗಿಗಳಾಗಲು ನಿಶ್ಚಯಿಸಿದರೆ ಅವರಿಬ್ಬರಲ್ಲಿ ಸಂಬಂಧ ಏರ್ಪಡಬೇಕೆಂದು ಅವರ ಕಲ್ಪನೆ. ಈ ಸಂಬಂಧಕ್ಕೆ ಪರಸ್ಪರ ಹೆಂಡತಿಯರನ್ನೂ ಕೆಲವು ಕಾಲ ಅದಲು ಬದಲು ಮಾಡಿಕೊಳ್ಳುವುದು ನೆರವಾಗುದೆಂದು ಅವರ ನಿಲುವು. ಉತ್ತರ ಅಲಾಸ್ಕಾದಲ್ಲಂತೂ ಯಾವ ಒಂದು ಸಹಕಾರ ಸಂದರ್ಭದಲ್ಲಿಯೂ ಹೆಂಡತಿಯರ ವಿನಿಮಯ ಅವಶ್ಯವಾಗಿ ನಡೆದೇ ನಡೆಯುತ್ತದೆ. ಹೆಂಡತಿಯರಿಂದಲೂ ಇದಕ್ಕೆ ಆಕ್ಷೇಪವೇನೂ ಇರುವುದಿಲ್ಲ. ಹೊಸ ಆರ್ಥಿಕ ಸಂಬಂಧದಿಂದ ಅವರಿಗೆ ಅನುಕೂಲವೇ.

ಹೀಗೆ ಹೆಂಡತಿಯು ಗಂಡನ ಸ್ನೇಹಿತನ ಮನೆಯಲ್ಲಿರಲು ಹೋಗುವಾಗ ಆಕೆಯ ಮಕ್ಕಳೂ ಆಕೆಯೊಂದಿಗೆ ಹೋಗುತ್ತಾರೆ. ಈ ಮಕ್ಕಳು ತಮ್ಮ ತಂದೆಯ ಈ ಸ್ನೇಹಿತನನ್ನು 'ತಮ್ಮ ತಾಯಿಯೊಂದಿಗೆ ಕೂಡಿಕೊಂಡವನು' ಎಂದು ಕರೆಯುತ್ತಾರೆ. ಮತ್ತೆ ತಮ್ಮ ತಾಯಿಯ ಜೊತೆಯಲ್ಲಿ ಅವರು ತಮ್ಮ ತಂದೆಯ ಮನೆಗೆ ಹೋದಮೇಲೆ ಕೂಡ, ಈ ಸ್ನೇಹಿತನು ಅವರನ್ನು ತನ್ನ ಮಲ ಮಕ್ಕಳಂತೆಯೇ ಕಾಣುತ್ತಾನೆ. ತನ್ನ ಕಷ್ಟಕಾಲದಲ್ಲಿ ಅವರ ನೆರವನ್ನು ನಿರೀಕ್ಷಿಸುತ್ತಾನೆ.

ವಿನಿಮಯ ಎಸ್ಕಿಮೋಗಳ ಬದುಕಿನಲ್ಲಿ ಮುಖ್ಯವಾದುದು. ಹೆಂಡಂದಿರನ್ನು ಮಾತ್ರವಲ್ಲ, ಹಲವಾರು ಇತರ ಅಗತ್ಯ ಪದಾರ್ಥಗಳನ್ನು ಕೂಡ ಹೀಗೆಯೇ ವಿನಿಮಯ ಮಾಡಿಕೊಳ್ಳುತ್ತಾರೆ. ಎಸ್ಕಿಮೋ ಜನರು ಸಮಯ ಸಿಕ್ಕಾಗಲೆಲ್ಲ ಪರಸ್ಪರ ಬಹುಮಾನಗಳನ್ನು ಕೊಡುವರು. ಈ ಪದ್ಧತಿಯನ್ನು ಬಿಳಿ ಜನರು ಗಮನಿಸಿ

ದ್ದಾರೆ. ಇದು ಆರ್ಥಿಕ ಅಗತ್ಯ. ಬಹುಮಾನವನ್ನು ಒಂದು ಸಂದರ್ಭದಲ್ಲಿ ಕೊಟ್ಟವರು ಮತ್ತೊಂದು ಸಮಯದಲ್ಲಿ ತಮಗೆ ಉಪಯುಕ್ತವಾಗುವ ಬಹುಮಾನವನ್ನು ನಿರೀಕ್ಷಿಸಬಹುದಲ್ಲವೇ? ಈ ಬಹುಮಾನ ವಿನಿಮಯಗಳು ತಂತಮ್ಮ ನೆಂಟರಲ್ಲಿಯೇ ನಡೆಯುವುದು ಹೆಚ್ಚು.

ವಿನಿಮಯವನ್ನು ಅವರು ದಾನ ಎಂದು ಪರಿಗಣಿಸುವುದಿಲ್ಲ. ಬಹುಮಾನವನ್ನು ತೆಗೆದುಕೊಂಡವರು ಧನ್ಯವಾದಗಳನ್ನರ್ಪಿಸುವ ವಾಡಿಕೆಯಿಲ್ಲ. ಬೇಟೆಗಾರನು ತನ್ನ ಭರ್ಜಿಯನ್ನು ಪ್ರಾಣಿಯ ಮೇಲೆ ಎಸೆದ ವೈಖರಿಯನ್ನು ಎಸ್ಕಿಮೋಗಳು ಹೊಗಳುತ್ತಾರೆ. ಆದರೆ ಅವನು ಮಾಂಸವನ್ನು ತಮಗೆ ಕೊಟ್ಟಾಗ ಧನ್ಯವಾದವನ್ನರ್ಪಿಸುವುದಿಲ್ಲ. ಇದು ನಡೆಯಬೇಕಾದ ರೀತಿಯೇ ಎಂದು ಅವರ ಕಲ್ಪನೆ.

ಅವರ ಬೇಟೆಯಲ್ಲಿ ಒಬ್ಬೊಬ್ಬರಿಗೂ ಪ್ರಾಣಿಯು ದೊರೆತೇ ದೊರೆಯುತ್ತದೆ ಎಂಬ ನಿಶ್ಚಯವಿಲ್ಲ. ಒಬ್ಬನಿಗೆ ಬೇಕಾದಷ್ಟು ಆಹಾರ ದೊರೆಯ ಬಹುದು. ಇನ್ನೊಬ್ಬನಿಗೆ ಬರಿಗೈ ಆಗಬಹುದು. ಹೀಗಾದಾಗ ನಾವು ಏನು ಮಾಡುತ್ತೇವೆ? ಪುಣ್ಯವಿದ್ದವನು ಊಟ ಮಾಡುತ್ತಾನೆ; ಅದೃಷ್ಟವಿಲ್ಲದವನು ಉಪವಾಸವಿರುತ್ತಾನೆ. ಎಸ್ಕಿಮೋಗಳಲ್ಲಿ ಹಾಗಲ್ಲ. ಆಹಾರ ಇದ್ದವನು ಇಲ್ಲದವನಿಗೆ ಕೊಡುತ್ತಾನೆ. ಹೆಚ್ಚಾದ ಆಹಾರವನ್ನು ದಾಸ್ತಾನು ಮಾಡಿಕೊಳ್ಳಲು ಬೇರೆಯವರ ಹೊಟ್ಟೆಯೇ ಸರಿಯಾದ ಸ್ಥಳವೆಂದು ಅವರ ಕಲ್ಪನೆ. ಏಕೆಂದರೆ ತನಗೆ ಆಹಾರ ದೊರೆಯದಾದಾಗ ಇತರರಿಂದ ಅದನ್ನು ನಿರೀಕ್ಷಿಸಬಹುದಲ್ಲವೇ? ಇದು ಎಸ್ಕಿಮೋಗಳ ಔದಾರ್ಯದ ಒಳಗುಟ್ಟು.

ಎಸ್ಕಿಮೋಗಳಲ್ಲಿ ಆಸ್ತಿ ಎರಡು ಬಗೆಯದು. ಒಂದು ಇಡೀ

ಗುಂಪಿಗೆ ಸೇರಿದುದು. ಇನ್ನೊಂದು ವ್ಯಕ್ತಿಗೆ ಮಾತ್ರ ಸೇರಿದುದು. ಆದರೆ ಸ್ವಂತ ಆಸ್ತಿ ಎನ್ನುವ ಕಲ್ಪನೆ ಅವರಲ್ಲಿಲ್ಲ. ಮೀನು ತುಂಬಿ ತುಳುಕುವ ನದಿ, ಕಾರಿಬೂ ಪ್ರಾಣಿಗಳು ಮೇಯುವ ಹುಲ್ಲುಗಾವಲು, ಸೀಲ್‌ಗಳಿರುವ ಸಮುದ್ರ ತೀರ ಇವೆಲ್ಲವೂ ಗುಂಪಿಗೆ ಸಮಾನವಾಗಿ ಸೇರಿದುವು. ಗುಂಪಿನ ಯಾರು ಬೇಕಾದರೂ ಅವನ್ನು ಬಳಸಬಹುದು. ಆಭರಣ, ಉಪಕರಣ, ಆಯುಧ, ಬಟ್ಟೆಬರೆ ಇವು ವೈಯಕ್ತಿಕವಾದುವು. ಆಯುಧಗಳು ಸ್ವಂತ ಆಸ್ತಿ ಎನಿಸಿಕೊಳ್ಳುವುದಿಲ್ಲ. ಎಸ್ಕಿಮೋ ಸಮಾಜದಲ್ಲಿ ವ್ಯಕ್ತಿಗಿರುವ ಪಾತ್ರವನ್ನು ಇಂಥ ಆಸ್ತಿ ಅವಲಂಬಿಸಿರುತ್ತದೆ. ಒಬ್ಬನಿಗೆ ಎರಡು ಭರ್ಜಿಗಳಿದ್ದು ಇನ್ನೊಬ್ಬನಿಗೆ ಒಂದೂ ಇಲ್ಲದಿರುವುದು ಎಸ್ಕಿಮೋಗಳಲ್ಲಿ ಸಾಧ್ಯವಿಲ್ಲ. ಇದು ಒಂದು ಬಗೆಯ ಸಮತಾವಾದ. ಆದರೆ ಈ ಸಮತಾವಾದ ಗುಂಪಿಗೆ ಮಾತ್ರ ಅನ್ವಯಿಸುತ್ತದೆ. ಗುಂಪಿನವರೆಲ್ಲ ಕುಟುಂಬದವರೇ, ಸಂಬಂಧಿಗಳೇ.

ಎಸ್ಕಿಮೋಗಳ ಧಾರ್ಮಿಕ ನೆಲೆ ತುಂಬ ಸರಳವಾದುದು. ಪುರೋಹಿತರು, ದೇಗುಲಗಳು, ಪ್ರವಾದಿ, ಅಪೌರುಷೇಯ ಪ್ರಮಾಣ ಮೊದಲಾದ ಗೊಂದಲಗಳು ಅವರಲ್ಲಿಲ್ಲ. ಅವರಲ್ಲಿ ಯಕ್ಷಿಣಿ, ಇಂದ್ರಜಾಲ, ಮಾಟ ಮಂತ್ರ ಇವುಗಳಲ್ಲಿ ನಂಬಿಕೆ ಹೆಚ್ಚು. ಸ್ವರ್ಗ, ಪುನರ್ಜನ್ಮ, ಪುಣ್ಯ ಪಾಪ, ಪರಲೋಕ ಇವುಗಳಿಗೆ ಅವರು ಗಮನ ಕೊಡುವುದಿಲ್ಲ. ಪ್ರತಿಯೊಬ್ಬನಿಗೂ ಬೇಟೆಗೆ ಹೊರಟಾಗ ಆಹಾರ ದೊರೆಯುವ ವ್ಯವಸ್ಥೆಯನ್ನು ಧರ್ಮ ಮಾಡಿದರೆ ಆಯಿತು, ಅಷ್ಟೆ. ಹೊರಗಿನ ಜಗತ್ತಿನೊಂದಿಗೆ ಎಸ್ಕಿಮೋ ಬೆಳೆಸುವ ಸಂಬಂಧವಷ್ಟೇ ಧರ್ಮದ ನೆಲೆ.

ಹೀಗಾಗಿ ಅವರಲ್ಲಿ ನಂಬಿಕೆಗಿಂತ ಹೆದರಿಕೆ ಹೆಚ್ಚು. ಅವರ ಧರ್ಮದಲ್ಲಿ ನಿಷೇಧಗಳ ಪಾತ್ರ ದೊಡ್ಡದು. ನಿಷೇಧವೊಂದನ್ನು

ಅತಿಕ್ರಮಿಸಿದ ಎಸ್ಕಿಮೋ 'ಪತಿತ'ನೆನಸಿಕೊಳ್ಳುತ್ತಾನೆ. ಆದರೆ ಈ ಕಾರಣದಿಂದ ಸಮಾಜ ಅವನನ್ನು ದಂಡಿಸುವುದಿಲ್ಲ, ಬಹಿಷ್ಕರಿಸುವುದಿಲ್ಲ. ಅವನ ಪಾಪವನ್ನು ತೊಡೆದು ಹಾಕುವ ಸಾಮರ್ಥ್ಯವುಳ್ಳ ಒಬ್ಬ ಮಂತ್ರಗಾರನನ್ನು ಗೊತ್ತು ಮಾಡಿ ಅವನ ನೆರವಿನಿಂದ ಪಾಪವು ಬಾಯಿಯ ಹೊರಗೆ ಹೋಗುವಂತೆ ಮಾಡುತ್ತಾರೆ. ಇದರಲ್ಲಿ ಗುಂಪಿನವರೆಲ್ಲ ಅಪರಾಧಿಯ ಬಗ್ಗೆ ಸಹಾನುಭೂತಿ ತಳೆದು, ಅವನೊಂದಿಗೆ ಸಹಕರಿಸುತ್ತಾರೆ.

ಇದಲ್ಲದೆ, ಎಸ್ಕಿಮೋಗಳಲ್ಲಿ ನೀರಿಗೆ, ಗಾಳಿಗೆ, ಹವೆಗೆ, ಹಗಲಿಗೆ, ಅಭಿಮಾನಿದೇವತೆಗಳಿರುತ್ತಾರೆ. ಈ ದೇವತೆಗಳ ಮುಖವಾಡವನ್ನು ಮರದಲ್ಲಿ ಮಾಡಿಟ್ಟುಕೊಳ್ಳುವ ಪದ್ಧತಿ ಅವರಲ್ಲುಂಟು. ಒಂದೊಂದು ಋತುವಿನಲ್ಲಿಯೂ ಇಂಥ ಮುಖವಾಡಗಳ ಬಳಕೆ ಇರುತ್ತದೆ. ಒಮ್ಮೆ ಬಳಸಿದ ಮುಖವಾಡವನ್ನು ಅವರು ಸುಟ್ಟು ಬೇರೊಂದು ಸಂದರ್ಭಕ್ಕೆ ಹೊಸದಾಗಿ ಇನ್ನೊಂದು ಮುಖವಾಡವನ್ನು ಸಿದ್ಧಪಡಿಸುತ್ತಾರೆ. ಮುಖವಾಡವನ್ನು ಮುಖದ ಮುಂದೆ ಕೈಯಲ್ಲಿ ಹಿಡಿದುಕೊಂಡು ಪಾತ್ರಗಳು ನರ್ತನ ಮಾಡುತ್ತಾರೆ. ಅದನ್ನು ಧರಿಸುವುದು ಕಷ್ಟ.

ಮಂತ್ರಗಾರನಿಗೆ ಆರ್ಥಿಕವಾದ ಯಾವ ನೆಲೆಯೂ ಇರುವುದಿಲ್ಲ. ಅವನೇನೂ ಬೇಟೆಯಾಡುವುದಿಲ್ಲ, ಮದುವೆಯಾಗಿ ಮನೆ ಮಾಡುವುದಿಲ್ಲ. ಕೈ ಕೆಲಸ ಅವನಿಂದ ಸಾಗದು. ಆದುದರಿಂದ ಇತರರನ್ನು ಕಂಡರೆ ಅಸೂಯೆ ಅವನಿಗೆ ಸಹಜವಾದುದು. ಅಸೂಯೆಯಿಂದ ಬೇರೆಯವರಿಗೆ ರೋಗ ತರಿಸುವುದು, ತೊಂದರೆ ಒದಗಿಸುವುದು, ಇವೆಲ್ಲ ಅವನ ಮಂತ್ರ ತಂತ್ರಗಳಿಂದ ನಡೆಯುತ್ತದೆ. ಅದಕ್ಕಾಗಿ ಜನ ಇವನನ್ನು ಕಂಡರೆ ಹೆದರುತ್ತಾರೆ. ಅವನಿಂದ ಮಂತ್ರ ಮಾಟ ಮಾಡಿಸುತ್ತಾರೆ. ಪ್ರಾಯಶ್ಚಿತ್ತ

ಮಾಡಿಸಿಕೊಳ್ಳುತ್ತಾರೆ. ಅವರನ್ನು ನಂಬಿಸುವ ಕೆಲವು 'ಪವಾಡ'ಗಳನ್ನೂ ಇವನು ನಡೆಸುತ್ತಾನೆ.

8. ಆಸ್ಟ್ರೇಲಿಯದ ಆದಿವಾಸಿಗಳು

ಶಿಲಾಯುಗದಲ್ಲಿ ಜನ ಹೇಗಿದ್ದರು ಎಂದು ಕಲ್ಪಿಸಿಕೊಳ್ಳಬೇಕೆಂದರೆ ಆಸ್ಟ್ರೇಲಿಯಾದ ಆದಿವಾಸಿಗಳನ್ನು ನೋಡಬೇಕು. ಈಚೆಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಈ ಜನ ಸುಮಾರಾಗಿ ಒಳಗಾಗಿ ತಮ್ಮ ಹಳೆಯ ಬಾಳಿನ ಬಗೆಯನ್ನು ಮರೆಯುತ್ತಿದ್ದಾರೆ, ನಿಜ. ಆದರೆ ಅವಶೇಷವಂತೂ ಸ್ವಾರಸ್ಯವಾಗಿಯೇ ಇದೆ.

ಬಿಳಿಜನರು ಈ ಖಂಡಕ್ಕೆ ಕಾಲಿಕ್ಕುವ ಮೊದಲು ನಿಜವಾಗಿ ಇವರು ಶಿಲಾಯುಗದಲ್ಲಿಯೇ ಇದ್ದರೆನ್ನಬಹುದು. 1770ರಲ್ಲಿ ಕ್ಯಾಪ್ಟನ್ ಕುಕ್ ಎಂಬಾತ ಆಸ್ಟ್ರೇಲಿಯಾದ ಪೂರ್ವ ತೀರವನ್ನು ಮುಟ್ಟಿ ಪ್ರಥಮ ಪರಿಚಯುವನ್ನು ಪಡೆದ. 1788ರಲ್ಲಿ ಕ್ಯಾಪ್ಟನ್ ಆರ್ಥರ್ ಫಿಲಿಪ್ ತನ್ನ ಸೈನಿಕರೊಂದಿಗೂ ಕೈದಿಗಳೊಂದಿಗೂ ಈ ದೇಶದ 'ಬಾಟನಿಬೇ'ಗೆ ಬಂದಿಳಿದ. ಇದೇ 'ಮೊದಲ ತಂಡ' 'ಎಂದು ಪ್ರಸಿದ್ಧವಾಗಿದೆ. ಇಲ್ಲಿಗೆ ಬಂದ ಬಿಳಿ ಜನಕ್ಕೆ ನೆಲಸಲು ಭೂಮಿ ಬೇಕಾಗಿದ್ದಿತು. ಆದಿವಾಸಿಗಳೊಂದಿಗೆ ಕಾದಾಡಿ, ಅವ ರೊಡನೆ ಕ್ರೌರ್ಯದಿಂದಲೇ ವ್ಯವಹಾರ ನಡೆಸಿದರು. ಇದರ ಫಲವಾಗಿ ಆದಿವಾಸಿಗಳ ಜನಸಂಖ್ಯೆಯೇ ಕಡಿಮೆಯಾಗ ತೊಡಗಿತು. ಕ್ಯಾಪ್ಟನ್ ಕುಕ್ ಕಂಡಾಗ ಇದ್ದ ಪ್ರತಿ ಆರು ಜನ ಆದಿವಾಸಿಗಳಲ್ಲಿ ಈಗ ಇರುವವನು ಒಬ್ಬನೇ! ಅವರ ನಡೆ—ನುಡಿ ಗಳೂ, ಆಚಾರ ವ್ಯವಹಾರಗಳೂ ಬಿಳಿ ಜನರ ಸಂಪರ್ಕದಿಂದ ಮಾರ್ಪಡುತ್ತಿವೆ. ಇರುವ 50,000 ಶುದ್ಧ ಆದಿವಾಸಿಗಳಲ್ಲಿ ಈಗ ಸುಮಾರು 2,000 ಜನವಷ್ಟೆ ಹಳೆಯ ರೀತಿಯಲ್ಲಿ ಬಾಳುವೆ ನಡೆಸುತ್ತಿದ್ದಾರೆ. ಉಳಿದವರೆಲ್ಲ ಹೊಸ ಪ್ರಪಂಚದ ರೀತಿ, ನೀತಿಗಳನ್ನು ಕಲಿತುಬಿಟ್ಟಿದ್ದಾರೆ.

ಆಸ್ಟ್ರೇಲಿಯ ಸರಕಾರ ಈಗೀಗ ಈ ಜನರ ಹಿತವನ್ನು ಕಾಪಿಡುವ ಅಗತ್ಯವನ್ನು ಅರಿತುಕೊಂಡಿದೆ. ಹಳೆಯ ರೀತಿಯಲ್ಲಿಯೇ ಬದುಕಬೇಕೆನ್ನುವ ಆದಿವಾಸಿಗಳಿಗೆ ಸಮರ್ಪಕವಾದ ಸೌಲಭ್ಯ ಗಳನ್ನು ಒದಗಿಸಿಕೊಡುತ್ತಿದ್ದಾರೆ, ಕಾಡುಗಳಲ್ಲಿ ಅವರು ಸ್ವೇಚ್ಛೆ ಯಾಗಿ ವಾಸಮಾಡಬಲ್ಲ ತಾಣಗಳನ್ನು ಕಲ್ಪಿಸಿಕೊಟ್ಟಿದ್ದಾರೆ; ಅನು ಮತಿಯಿಲ್ಲದೆ ಈ ಸ್ಥಳಗಳಿಗೆ ಬಿಳಿಜನ ಹೋಗುವ ಹಾಗಿಲ್ಲ. ಬದಲಾಯಿಸುತ್ತಿರುವ ಆದಿವಾಸಿಗಳೂ ಶಾಲೆ, ಆಸ್ಪತ್ರೆ ಮೊದ ಲಾದ ಸೌಲಭ್ಯಗಳನ್ನು ಪಡೆದಿದ್ದಾರೆ.

ಆಸ್ಟ್ರೇಲಿಯದ ಆದಿವಾಸಿಗಳು ಕಾಡುಜನ; ಕಾಡಿನಲ್ಲಿಯೇ ವಾಸಮಾಡಿ ಆ ಜೀವನಕ್ಕೆ ಹೊಂದಿಕೊಂಡ ಸಂಘವ್ಯವಸ್ಥೆ ಇವರದ್ದು. ಇವರ ಪಂಗಡಗಳು ಸಣ್ಣವು. ಒಂದೇ ಪ್ರದೇಶದಲ್ಲಿ ಸಹಜವಾಗಿ ದೊರೆಯಬಲ್ಲಆಹಾರಕ್ಕೆ ಅನುಗುಣವಾಗಿ ಈ ಪಂಗಡ ಗಳ ಪ್ರಮಾಣ ಸಣ್ಣದು. ಸಾಮಾನ್ಯವಾಗಿ ಒಂದು ಪಂಗಡದವರು ನೂರಾರು ವರ್ಷಗಳ ಕಾಲ ಒಂದೇ ಪ್ರದೇಶದಲ್ಲಿರುತ್ತಾರೆ; ಬೇರೆ ಪ್ರದೇಶಕ್ಕೆ ಹೋಗಬೇಕೆಂದರೆ ಆ ಪ್ರದೇಶದಲ್ಲಿರುವ ಪಂಗಡ ದವರ ಅನುಮತಿ ಬೇಕು.

ಹೀಗಾಗಿ ಪಂಗಡದೊಳಗಿನ ಸಾಂಘಿಕವ್ಯವಸ್ಥೆ ಜಟಿಲವಾಗಿದೆ. ದೀರ್ಘಕಾಲ ಪಂಗಡವು ಒಕ್ಕಟ್ಟಾಗಿ ಉಳಿಯಲು ಹಲವಾರು ವಿಧಿ—ನಿಷೇಧಗಳನ್ನು ಹಿರಿಯರು ಹಾಕಿದ್ದಾರೆ: ಪಂಗಡದ ಜನ ಇವನ್ನು ಚಾ–ಚು ತಪ್ಪದೆ ಪಾಲಿಸುತ್ತಾರೆ. ಸಾಂಘಿಕ ನಿಯಮಗಳಿಗೆ ಈ ಜನ ತೋರಿಸುವ ವಿಧೇಯತೆ ವಿಶಿಷ್ಟವಾದುದು.

ಮನೆಯಲ್ಲಿ ಎಲ್ಲ ಸಂಬಂಧಗಳೂ ಅಣ್ಣ ತಮ್ಮಂದರಂತೆ; ಸೋದರಮಾವಂದರು ತಂದೆಯಂತೆ. ಮನೆಗೆಂದು ಪ್ರತ್ಯೇಕ ವಾದ ಆಸ್ತಿಯಾದರೂ ಇರುವುದಿಲ್ಲ. ಇಡೀ ಪಂಗಡದವರು

ಒಟ್ಟಾಗಿಯೇ ತಮ್ಮ ಆಸ್ತಿಯನ್ನೂ ಆಹಾರವನ್ನೂ ನೋಡಿಕೊಳ್ಳುತ್ತಾರೆ, ಅನುಭವಿಸುತ್ತಾರೆ. ಕಷ್ಟವಿದ್ದಾಗಲೂ ಹೀಗೆಯೇ ಸುಖವಿದ್ದಾಗಲೂ ಹೀಗೆಯೇ. ದುರ್ಭಿಕ್ಷದ ಸಮಯದಲ್ಲಿಯೂ ಈ ವ್ಯವಸ್ಥೆ ತಪ್ಪುವುದಿಲ್ಲ. ಕೆಲವು ಬಗೆಯ ಆಹಾರ ಪದಾರ್ಥಗಳನ್ನು ಮುದುಕರಿಗೆ, ದುರ್ಬಲರಿಗೆ ಮೀಸಲಾಗಿ ಇಡುವ ಪದ್ಧತಿ ಇವರಲ್ಲುಂಟು; ಇತರರು ಇವನ್ನು ಮುಟ್ಟುವಹಾಗಿಲ್ಲ.

ಸಂಘದ ಆಯಕಟ್ಟಿನಲ್ಲಿಯೇ ಆದಿವಾಸಿಯು ಇಡೀ ಬಾಳು ಕಳೆಯುತ್ತದೆ. ಯಾವನಾದರೂ ಆದಿವಾಸಿ ತನ್ನ ಪಂಗಡಕ್ಕೆ ನಿರ್ದಿಷ್ಟವಾದ ಪ್ರದೇಶದಿಂದ ಹೊರಗೆ ಹೋಗಿ ಸತ್ತನೆಂದರೆ ಅವನ ಜೀವ ನಷ್ಟವಾದಂತೆಯೇ: ಅವನು ಮತ್ತೆ ಪಂಗಡದಲ್ಲಿ ಜನ್ಮವೆತ್ತಿ ಅದರ ಪ್ರಯೋಜನಗಳನ್ನು ಪಡೆಯಲಾರನೆಂಬ ನಂಬಿಕೆ ಈ ಜನರಲ್ಲಿ ದೃಢವಾಗಿದೆ. ಬಿಳಿಜನ ಇದನ್ನು ತಿಳಿಯದೆ ತಾವು ಈ ದೇಶವನ್ನು ಆಕ್ರಮಿಸಿಕೊಂಡಾಗ ತಮ್ಮ ದನಕರುಗಳಿಗೆ ಮೇವು ಸಿಗಲೆಂದು ಆದಿವಾಸಿಗಳನ್ನು ಅವರ ಪ್ರದೇಶಗಳಿಂದ ಹೊರದೂಡಿದರು. ಈ ಆದಿವಾಸಿಗಳು ಇನ್ನು ತಮಗೆ ಪಂಗಡದ ನೆಲೆ ತಪ್ಪಿತೆಂದು ಎದೆಯೊಡೆದು ಸತ್ತರು. ಹೀಗಾಗಿ ಆದಿವಾಸಿಗಳ ಸಂಖ್ಯೆ ಕಡಿಮೆಯಾಯಿತು.

ಇಲ್ಲಿನ ಆದಿವಾಸಿಗಳು ಧರ್ಮಕ್ಕೆ ಸಂಬಂಧಿಸಿದ ನೃತ್ಯಗಳನ್ನು ಮಾಡುತ್ತಾರೆ. ಈ ನೃತ್ಯಗಳಿಗೆ ಕಾರೊಬೋರೀ ಎಂದು ಹೆಸರು. ಈ ನೃತ್ಯಗಳು ಬಹುಮಟ್ಟಿಗೆ ಹಿಂದಿನ ಕಾಲದಲ್ಲಿ ತಮ್ಮ ಪಂಗಡ ಅನುಭವಿಸಿದುದನ್ನು ಸ್ಮರಣೆಗೆ ತಂದುಕೊಡುವ ಸಂಪ್ರದಾಯ ಇವರ ಪಂಗಡಗಳಲ್ಲಿ ದೃಢವಾಗಿರುತ್ತದೆ. ಪಂಗಡಗಳ ನಡುವೆ ಸಾಮರಸ್ಯವನ್ನುಂಟುಮಾಡುವ ನೃತ್ಯಗಳೂ ಇವೆ. ಈ ನೃತ್ಯದಲ್ಲಿ ಪಾಲುಗೊಳ್ಳುವ ಜನ ತಮ್ಮ ದೇಹದ ಮೇಲೆ

ಬಗೆಬಗೆಯ ಚಿತ್ರಗಳನ್ನು ಮೂಡಿಸಿಕೊಳ್ಳುತ್ತಾರೆ. ಈ ಚಿತ್ರಗಳೂ ಅನಾದಿ ಕಾಲದಿಂದ ಆಯಾ ಪಂಗಡದಲ್ಲಿ ಬಳಕೆಯಲ್ಲಿರುವ ವಿನ್ಯಾಸಗಳೇ.

ಇವರ ಧಾರ್ಮಿಕ ಕಲ್ಪನೆಗಳು ಸ್ವಾರಸ್ಯವಾದುವು. 'ಕನಸಿನ ಕಾಲದಲ್ಲಿ' ಮಹಾನಾಗವೊಂದು ಭೂಮಿಯ ಮೇಲೆ ಬಂದು ಗುಡ್ಡ ಕಣಿವೆ, ನದಿ, ಬಯಲುಗಳನ್ನು ಮಾಡಿತಂತೆ. ಈ ನಾಗದಂಥವೇ ಇತರ ಅದ್ಭುತ ಪ್ರಾಣಿಗಳೂ ಈ ಸೃಷ್ಟಿಯಲ್ಲಿ ಭಾಗವಹಿಸಿದುವು. ಈ ಪ್ರಾಣಿಗಳೇ ಪಂಗಡದ ಜನರ ಪೂರ್ವಜರೆಂದು ಇವರ ನಂಬಿಕೆ. ಪ್ರತಿಯೊಬ್ಬ ಮನುಷ್ಯನೂ ಈ 'ಕನಸಿನ ಕಾಲ'ದ ಅದ್ಭುತ ಪ್ರಾಣಿಯೊಂದರ ಚೇತನವನ್ನು ಪಡೆಯುತ್ತಾನಂತೆ.

ಆಸ್ಟ್ರೇಲಿಯದ ಆದಿವಾಸಿಗಳು ಹೊಗೆಯ ಮೂಲಕ ಹಲವಾರು ಮೈಲಿಗಳ ವರೆಗೆ ಸಂದೇಶವನ್ನು ಕಳುಹಿಸುವ ಜಾಣ್ಮೆ ಪಡೆದಿದ್ದಾರೆ. ಹಸಿರು ಎಲೆಗಳನ್ನು ರಾಸಿ ಹಾಕಿ ಅವಕ್ಕೆ ಬೆಂಕಿ ಹಚ್ಚಿ ಹೊಗೆಯ ಅಲೆಗಳನ್ನು ಎಬ್ಬಿಸಿ, ಈ ಅಲೆಗಳನ್ನು ತಮಗೆ ಬೇಕಾದಂತೆ ಮಾರ್ಪಡಿಸಿ ತುಂಬ ದೂರದಲ್ಲಿ ಈ ಅಲೆಗಳನ್ನು ನೋಡುತ್ತಿರುವವರಿಗೆ ಇದರ ಅರ್ಥವಾಗುವಂತೆ ಮಾಡುತ್ತಾರೆ; ಈ ಸಂಕೇತಗಳ ಕೌಶಲ ಇವರಲ್ಲಿ ವಿಶೇಷವಾದುದು. ದೂರದಲ್ಲಿ ಎದ್ದ ಹೊಗೆಯ ಅರ್ಥ ಏನು, ಅದರ ಇಂಗಿತವೇನು ಎನ್ನುವ ಅರಿವು ಈ ಪಂಗಡದವರಿಗಿರುತ್ತದೆ. ದೂರದೂರದಲ್ಲಿರುವ ಪಂಗಡಗಳ ನಡುವೆ ಈ 'ಮಾತುಕತೆ' ನಡೆಯುತ್ತಲೇ ಇರುತ್ತದೆ.

ಈ ಜನರ ಬುದ್ಧಿಶಕ್ತಿ ಅಸಾಧಾರಣವಾದುದು. ಮಾತನಾಡದೆ, ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಯಪಡಿಸುವ ಸಾಮರ್ಥ್ಯ ಇವರಿಗುಂಟು. ಇದು ಮಾತ್ರವಲ್ಲದೆ ಆಸ್ಟ್ರೇಲಿಯಾದ ಕಾಡಿನಂಥ ಕ್ಲಿಷ್ಟ ಸನ್ನಿವೇಶದಲ್ಲಿ ಕೂಡ ಸಮರ್ಪಕವಾದ ಸಂಘವ್ಯವಸ್ಥೆ

ಮಾಡಿಕೊಂಡಿರುವುದು ಇವರ ಬುದ್ಧಿಶಕ್ತಿಯ ನಿದರ್ಶನವೇ ಎನ್ನಬಹುದು. ನಿಸರ್ಗಕ್ಕೂ ಜೀವನ ಶೈಲಿಗೂ ಹೊಂದಾಣಿಕೆಯನ್ನು ಇವರು ತುಂಬ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ದೃಷ್ಟಿಯಿಂದ ಅವರ ಸಂಸ್ಕೃತಿ ಸಮರ್ಪಕವಾದುದು.

ಬೇಟೆ

ಇವರು ಬೇಟೆಯಾಡುವ ಬಗೆ ಸ್ವೋಜಿಗವಾದುದು. ಹಲವಾರು ಶತಮಾನಗಳಿಂದ ಬಳಕೆಯಲ್ಲಿದ್ದು ಪರಿಪೂರ್ಣವಾದ ಸಂವಿಧಾನ ಅವರದ್ದು. ಪ್ರದೇಶದಲ್ಲಿ ಹೆಚ್ಚು ಸಸ್ಯಸಂಪತ್ತಿಲ್ಲ; ಕಾಡು ಮೇಡು ಕಡಮೆ. ಹೀಗಾಗಿ ಅವರ ಬೇಟೆ ಅಷ್ಟೇನು ಬಿರುಸಾದುದಲ್ಲ. ಹೆಚ್ಚು ಶ್ರಮವಿಲ್ಲದೆ ಪ್ರಾಣಿಗಳನ್ನು ಬೇಟೆಯಾಡುವುದು ಇವರ ಮನೋಧರ್ಮ. ಸೋಮಾರಿಗಳು ಎಂದು ಇವರನ್ನು ಬಿಳಿಜನ ಬಣ್ಣಿಸಿದ್ದಾರೆ; ಆದರೆ ಅಗತ್ಯವಿಲ್ಲದೆ ಶ್ರಮ ಪಡುವುದು ಮೂರ್ಖತನ ಎಂದು ಇವರ ಕಲ್ಪನೆ.

ಪ್ರಾಣಿಗಳ ಜಾಡನ್ನು ಹಿಡಿಯುವುದರಲ್ಲಿ ತುಂಬ ಚತುರರು ಇವರು. ಇವರ ದೃಷ್ಟಿ ಪಾಟವ ಹೆಚ್ಚಿನದು. ನೆಲದ ಮೇಲೆ ಬಿದ್ದಿರುವ ಯಾವುದೇ ಗುರುತನ್ನು ನೋಡಿ ಯಾವ ಪ್ರಾಣಿ, ಎಷ್ಟು ಹೊತ್ತಿನ ಹಿಂದೆ, ಯಾವ ಕಡೆ ಹೋಗಿದೆಯೆಂದು ತಿಳಿಯ ಬಲ್ಲರು; ಹೆಜ್ಜೆ ಗುರುತು ಸ್ಪಷ್ಟವಾಗಿಲ್ಲದಿದ್ದರೂ ಇಂಥದೇ ಪ್ರಾಣಿ ಎಂದು ನಿಶ್ಚಯವಾಗಿ ಹೇಳಬಲ್ಲರು. ಕಳ್ಳರ ಕೈಯಿಂದ ತಪ್ಪಿಸಿಕೊಂಡ ಕಳ್ಳ ಅವರ ಕಣ್ಣು ತಪ್ಪಿಸಲು ಹಿಂದುಹಿಂದಾಗಿ ನಡೆದುಕೊಂಡು ಹೋದರೂ, ಅವರ ಹಿಮ್ಮಡಿ ಊರಿರುವುದು ಹೆಬ್ಬೆಟ್ಟುಮಾಡುವಗುರುತು ಇವುಗಳಿಂದಲೇ ಆದಿವಾಸಿಜನ ಅವನು ಯಾವಕಡೆ ಹೋದ ಎಂದು ಖಚಿತವಾಗಿ ಹೇಳಬಲ್ಲರು. ಈ

ಕಾರಣದಿಂದ ಆಸ್ಟ್ರೇಲಿಯದ ಪೋಲೀಸರು ಇಂಥ ಪತ್ತೆ ಕೆಲಸಗಳಲ್ಲಿ ಆದಿವಾಸಿಗಳ ನೆರವನ್ನು ಪಡೆಯುತ್ತಾರೆ. ಕಾಡಿನಲ್ಲಿ ತಪ್ಪಿಸಿಕೊಂಡ ಮಕ್ಕಳನ್ನು ಅಷ್ಟೆ, ಈ ಜನ ಬಲು ಬೇಗ ಪತ್ತೆ ಮಾಡಿಬಿಡುತ್ತಾರೆ.

ಬೇಟೆಯಿಂದಲೇ ಮುಖ್ಯವಾಗಿ ಅವರ ಆಹಾರ ದೊರೆಯುವುದು. ಕೆಲವೊಮ್ಮೆ ಭೂಮಿಯನ್ನು ಬಗೆದು ಗೆಡ್ಡೆ ಗೆಣಸುಗಳನ್ನು ಪಡೆಯುತ್ತಾರೆ. ಆಸ್ಟ್ರೇಲಿಯಾದ ಪ್ರಾಣಿಗಳಲ್ಲಿ ಅಂಜಿಕೆಯ ಪ್ರಾಣಿಗಳೇ ಹೆಚ್ಚು; ಅವುಗಳ ಓಟವೇನೋ ತುಂಬ ಬಿರುಸೇ. ಆದಿವಾಸಿಗಳು ಇವನ್ನು ಹಿಡಿಯಲು ಕೆಲವು ಸಾಧನ ಸಾಮಗ್ರಿಗಳನ್ನು ಸಿದ್ಧಪಡಿಸಿದ್ದಾರೆ. ಇವುಗಳಲ್ಲಿ ಭರ್ಜಿಯನ್ನು ದೂರ ಎಸೆಯಲು ಬಳಸುವ 'ವೂಮೆರ', ತಿರುಗಿಬೀಳುವ 'ಬೂಮರ್‍ಯಾಂಗ್', ಗಾಳಿಯಲ್ಲಿ ಎಸೆದು ಪ್ರಾಣಿಗಳನ್ನು ಹೊಡೆಯುವ 'ಬುಲ್‌ರೋರರ್' ಇವು ಮುಖ್ಯವಾದುವು. ಕವಣೆ ಕಲ್ಲು ಮೊದಲಿಗೆ ತುಂಬ ಬಳಕೆಯಲ್ಲಿದ್ದಿತು.

ಆಸ್ಟ್ರೇಲಿಯ ಖಂಡದ ಉತ್ತರ ತೀರದಲ್ಲಿರುವ ಆದಿವಾಸಿಗಳು ಸಮುದ್ರದ ಒಂದು ಸಸ್ತನಿ ಪ್ರಾಣಿಯನ್ನು ಬೇಟೆಯಾಡುತ್ತಾರೆ. ಇದಕ್ಕೆ 'ಡುಗೋಂಗ್' ಎಂದು ಹೆಸರು. 'ಸಮುದ್ರ ವೃಷಭ' ಇದು. ಅಷ್ಟು ಆಳವಲ್ಲದ ತೀರಪ್ರದೇಶದ ನೀರಿನಲ್ಲೇ ಇದು ವಾಸಮಾಡುತ್ತದೆ. ಉಸಿರಾಡಲು ಇದು ನೀರಿನ ಮೇಲಕ್ಕೆ ಬರುತ್ತದೆ. ಆದಿವಾಸಿಗಳು ತಮ್ಮ ಹರಿಗೋಲುಗಳನ್ನು ನಡೆಸುತ್ತಾ ಅದರ ಇಕ್ಕೆಲಗಳಲ್ಲಿಯೂ ಗಟ್ಟಿಯಾಗಿ ತಮ್ಮಟೆ ಬಡಿಯುತ್ತಾರೆ. ಇದರಿಂದ ನೀರಿನಲ್ಲಿ ಸ್ಪಂದ ಆರಂಭವಾಗಿ ಈ ಸಮುದ್ರ ವೃಷಭ ನೀರಿನ ಮೇಲೆ ಬರುತ್ತದೆ. ಇದನ್ನೇ ನಿರೀಕ್ಷೆ ಮಾಡಿಕೊಂಡಿರುವ ಆದಿವಾಸಿ ಅದು ಮೇಲೆ ಬಂದೊಡನೆ ಅದರ ಮೂಗಿನ ಹೊಳ್ಳೆಯೊಳಗೆ ಬೆರಳಿಟ್ಟು ಬಿಡುತ್ತಾನೆ. ಹೀಗೆ

ಮೂಗಿನ ಹೊಳ್ಳೆ ಮುಚ್ಚಿಬಿಟ್ಟಾಗ ಅದು ಮುಳುಗುವುದು ಸಾಧ್ಯವಿಲ್ಲ. ಸುಮಾರು ಅರ್ಧ ಟನ್ ತೂಗುವ ಪ್ರಾಣಿ ಇದು; ಹೀಗೆ ಇದನ್ನು ನಿರಾಯಾಸವಾಗಿ ಹಿಡಿಯುತ್ತಾರೆ.

ಹೀಗೆಯೇ ದೈತ್ಯಾಕಾರದ ಮೊಸಳೆಗಳನ್ನೂ ಇವರು ಹಿಡಿಯುತ್ತಾರೆ. ನೀರಿನೊಳಗೆ ಅದು ಅಡಗಿರುವ ಸ್ಥಳವನ್ನು ಪತ್ತೆಮಾಡಿ ಸದ್ದಿಲ್ಲದೆ ಅದರ ಬಳಿ ಹೋಗಿ ತಮ್ಮಟೆ ನಗಾರಿಗಳಿಂದ ಅಸಾಧ್ಯವಾದ ಶಬ್ದವನ್ನೆಬ್ಬಿಸುತ್ತಾರೆ. ಮೊಸಳೆಗೆ ದಿಗ್ಭ್ರಮೆಯಾಗಿ ಯಾವ ಕಡೆ ಹೋಗಬೇಕು ಎಂದು ತಿಳಿಯದೆ ತಬ್ಬಿಬ್ಬಾದಾಗ ಭರ್ಜಿಗಳನ್ನು ಅದರ ಮೈಯೊಳಗೆ ಚುಚ್ಚಿ ಕೊಂದುಬಿಡುತ್ತಾರೆ. ಕೆಲವೇ ಸೆಕೆಂಡುಗಳಲ್ಲಿ ಬೇಟೆ ಮುಗಿದುಹೋಗುತ್ತದೆ!

'ಗೋಅನ್ನ' ಎಂಬ ದೊಡ್ಡ ಹಲ್ಲಿಯೊಂದು ಇವರ ಆಹಾರ ವಿಶೇಷ. ಈ ಹಲ್ಲಿ ಕುದುರೆಯಷ್ಟು ವೇಗವಾಗಿ ಓಡಬಲ್ಲದು. ಇದು ಓಡುತ್ತಿದ್ದಾಗ 'ಬೂಮರ್‍ಯಾಂಗ'ನ್ನು ಎಸೆದು, ಅದರ ಶಬ್ದಕ್ಕೆ ಹಲ್ಲಿಯು ನಿಶ್ಚಲವಾಗಿ ನಿಂತಾಗ ಆದಿವಾಸಿಗಳು ಅದರ ಮೇಲೆರಗಿ ಅದನ್ನು ಹಿಡಿಯುತ್ತಾರೆ. ಅಂತೂ ಬೇಟೆಯಲ್ಲಿ ಇವರು ತುಂಬ ಚತುರರು.

ಪ್ರಚಾರೋಪನ್ಯಾಸ ಮಾಲೆ

1. ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2. ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3. ಭಯ – ಸರಳ ವಿಶ್ಲೇಷಣೆ	ಎಂ. ಶಿವರಾಂ
4. ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5. ಶಾಂತಿನಾಥ ಕವಿ	ಕಮಲಾ ಹಂಪನಾ
6. ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7. ಬಯಲಾಟಗಳು	ಚಂದ್ರಶೇಖರ ಕಂಬಾರ
8. ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9. ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10. ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11. ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12. ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚೆನ್ನಬಸಪ್ಪ
13. ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14. ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15. ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16. ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17. ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18. ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
19. ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20. ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21. ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22. ಕುರುಡು	ಎಸ್. ಟಿ. ಪುಟ್ಟಣ್ಣ
23. ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24. ಕ್ಷಯ	ಎಂ. ಬಸವರಾಜೆ ಅರಸು
25. ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26. ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27. ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28. ಅಂತರ್ಜಲ	ಸಿ. ನಾಗಣ್ಣ